ಹಿತ್ತಲ ಗಿಡ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು,
ರೈತಮೂಲದ ಅನುಶೋಧನೆಗಳು, ಸ್ಥಳೀಯ
ಸಂಪನ್ಮೂಲಗಳು ಮತ್ತು ಜೀವ
ವೈವಿಧ್ಯತೆ ಇವುಗಳ ಮೂಲಕ ''ಸುಸ್ಥಿರ ಕೃಷಿ'' ಅಭಿವೃದ್ಧಿ
ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಸಂಪುಟ ೧ ಸಂಚಿಕೆ ೨-೩ ೧೯೯೫ ಖಾಸಗಿ ಪ್ರಸಾರಕ್ಕಾಗಿ



ಹಿತ್ತಲ ಗಿಡ

ಸಂಪುಟ ೧, ಸಂಚಿಕೆ ೨-೩, ೧೯೯೫
(ಖಾಸಗಿ ವಿತರಣೆಗೆ ಮಾತ್ರ- ಚಾತುರ್ಮಾಸಿಕ)

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಈ ಸಂಚಿಕೆಯಲ್ಲಿ ....

ಕಲೆ / ವಿನ್ಯಾಸ : ಸಹದೇವನ್, ಬಚ್ಚಿ, ಮತ್ತು ಸುಧೀರ್ ಕೆ.ಎಸ್.

ಹಿತ್ತಲಗಿಡದ ಪೋಷಕರು : ಪ್ರೊ.ಅನಿಲ್ ಕೆ. ಗುಪ್ತಾ, ಮತ್ತು ಸೃಷ್ಟಿ. ಐ.ಎ.ಎಂ. ಅಹಮದಾಬಾದ್.

ಸಂಪಾದಕರು ಮತ್ತು ಪ್ರಕಾಶಕರು
ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕರು
ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ,
ಬೆಂಗಳೂರು-560 024.

ಹಿತ್ತಲ ಗಿಡ ಅಂಗಳಕ್ಕೆ..... !

ಕನ್ನಡದಲ್ಲಿ ದೇಶೀಯ ತಂತ್ರಜ್ಞಾನವನ್ನು ದಾಖಲು ಮಾಡುವ ಪ್ರಯತ್ನ 'ಹಿತ್ತಲಗಿಡ'. ಹಿತ್ತಲ ಗಿಡವನ್ನು ಅಂಗಳಕ್ಕೆ ತಂದು ಬೆಳಕು ತೋರಿಸಿದವರು ಬೆಂಗಳೂರು ಸಮೀಪದ ವೀರ ಸಾಗರದ ಸಾವಯವ ಕೃಷಿಕ, ಜ್ಞಾನ ವೃದ್ಧ ಹಾಗೂ ವಯೋವೃದ್ಧ ಪಿ. ಹನುಮಂತಯ್ಯನವರು. ಫೆಬ್ರವರಿ 3, 1994ರಂದು ನಡೆದ ಬಿಡುಗಡೆ ಸಮಾರಂಭದಲ್ಲಿ 'ಹಿತ್ತಲ ಗಿಡ'ದ ಹಿಂದಿನ ಪ್ರೇರಕ ಶಕ್ತಿ, Honey bee ಪತ್ರಿಕೆಯ ಸಂಪಾದಕ ಪ್ರೊ. ಅನಿಲ್‌ಕುಮಾರ್ ಗುಪ್ತಾ, ಪರ್ಯಾಯ ನೋಬೆಲ್ ಪ್ರಶಸ್ತಿ ವಿಜೇತ ಕನ್ನಡಿಗ ಡಾ. ಸುದರ್ಶನ್, ವಿಶ್ರಾಂತ ಪ್ರಾಧ್ಯಾಪಕರಾಗಿದ್ದ ಡಾ. ಜಿ.ಕೆ. ವೀರೇಶ್ (ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಈಗಿನ ಉಪಕುಲಪತಿಗಳು) ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ. ಕೆ.ಜಿ. ಶಂಭುಲಿಂಗಪ್ಪನವರು ಭಾಗವಹಿಸಿದ್ದರು. 'ಹಿತ್ತಲ ಗಿಡ'ದ ಹಿನ್ನೆಲೆಯನ್ನು ಸಂಪಾದಕ ಪ್ರಕಾಶ್ ಕಮ್ಮರಡಿ ವಿವರಿಸಿದರು. ತಮ್ಮ ಮುಖ್ಯ ಭಾಷಣದಲ್ಲಿ ಪ್ರೊ.ಗುಪ್ತಾ ದೇಶೀಯ ತಂತ್ರಜ್ಞಾನದ ವಿಶೇಷತೆ, ಪ್ರಮುಖತೆ, ಹಿರಿಮೆ-ಗರಿಮೆಗಳನ್ನು ಉದಾಹರಣೆಗಳ ಸಹಿತ ವಿವರಿಸಿದರು. 'ಸೋಲಿಗರ'ನ್ನು ಸೋಲಲು ಬಿಡದ ಡಾ. ಸುದರ್ಶನ್ ತಾನು ಸೋಲಿಗರಿಂದ ಅರಿತುಕೊಂಡ ಕೆಲವು ಮಹತ್ತ್ವದ ವೈದ್ಯಕೀಯ ವಿಷಯಗಳನ್ನು ಸಭಿಕರೆದುರು ತೆರೆದಿಟ್ಟರು. ಡಾ. ಕೆ.ಜಿ. ಶಂಭುಲಿಂಗಪ್ಪನವರು ಈಗಲೂ ಪ್ರಚಲಿತದಲ್ಲಿರುವ ಕೆಲ ದೇಶೀ ಜಾಣ್ಮೆಗಳನ್ನು ಉದಾಹರಿಸಿ 'ಹಿತ್ತಲಗಿಡ'ದ ಪ್ರಯತ್ನವನ್ನು ಶ್ಲಾಘಿಸಿದರು. ಡಾ. ಜಿ.ಕೆ. ವೀರೇಶ್ ಈ ಹಿಂದೆ ಬರುತ್ತಿದ್ದ 'ಕೊರವಂಜಿ' ಪತ್ರಿಕೆಯನ್ನು ಜ್ಞಾಪಿಸಿ, ಪತ್ರಿಕೆಯ ಮೇಲಿನ ಉತ್ಸಾಹ ತಾತ್ಕಾಲಿಕವಾಗಿರದೆ, ಸುಸ್ಥಿರವಾಗಿ ಮುಂದುವರೆಯಲೆಂದು ಹಾರೈಸಿ 'ಹಿತ್ತಲ ಗಿಡ'ದ ಪ್ರಯತ್ನಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು. ಅಡಿಕೆ ಪತ್ರಿಕೆಯ ಸಂಪಾದಕ 'ಶ್ರೀ' ಪಡ್ರೆ ವಸ್ತುಗಳ ಆಯ್ಕೆ ಹಾಗೂ ಪತ್ರಿಕೆ ಹೊರತುವಲ್ಲಿ ಗಮನಿಸಬೇಕಾದ ಕೆಲವು ಸೂಕ್ಷ್ಮ ವಿಚಾರಗಳನ್ನು ತಿಳಿಸಿದರು.

ಮರುದಿನ ನಡೆದ 'ವಿಚಾರ ಮಂಥನ' ದಲ್ಲಿ ಹಿರಿಯ ಸಾವಯವ ರೈತರಾದ ಶ್ರೀ ನಾರಾಯಣ ರೆಡ್ಡಿ, ಶ್ರೀ ಭರಮಗೌಡ, ಡಿ.ಡಿ., ಶ್ರೀ ಎ.ಪಿ. ಚಂದ್ರಶೇಖರ್, ಡಾ. ವಸಂತಕುಮಾರ್ ತಿಮಕಾಪುರ, ಶ್ರೀ ನರಸಾರೆಡ್ಡಿ, ಶ್ರೀ ಜಗದೀಶ್, ಟಿ.ಎಚ್.ಎಂ., ಶ್ರೀ ಸಿದ್ಧರಾಮಯ್ಯ, ಪ್ರೊ ಕೆ.ಜಿ. ಮಲ್ಲಿಕಾರ್ಜುನಯ್ಯ, ಡಾ. ಚಂದ್ರಕಾಂತ್ ಎಂ.ಜಿ., ಡಾ. ಗಿರಿಧರ ಕಜೆ, ಹಾಗೂ ಚಿಂತನ ಬಳಗದ ಸಕ್ರಿಯ ಸದಸ್ಯರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಬಿ.ಆರ್. ಹೆಗ್ಡೆ (ಕೃ.ವಿ.ವಿ.ಯ ಇಂದಿನ ಸಂಶೋಧನಾ ನಿರ್ದೇಶಕರು) ಯವರು ವಹಿಸಿದ್ದರು.

ಹಿತ್ತಲ ಗಿಡದ ಬಳಗಕ್ಕೆ ಹೊಸದಾಗಿ ಸೇರಿರುವವರು .....

ಹಿತ್ತಲಗಿಡದ ಚಟುವಟಿಕೆಗಳಿಗೆ ಹೆಚ್ಚಿನ ಸಹಾಯ ಪಡೆಯಲು ಸಹಸಂಪಾದಕರಾಗಿ ಶಿವರಾಜ್ ಕೆ., ನರಸಿಂಹ ಎನ್. - ನಿರ್ವಹಣೆ (ಬೆಂಗಳೂರು) ರೈತ ಮತ್ತು ವಿದ್ಯಾರ್ಥಿ ಸಂಪರ್ಕಕ್ಕೆ ಮಾರುತೀಶ ಜಿ., ಗೋಪಾಲಕೃಷ್ಣ ಜೋಯಿಸ್, ಹು.ರಂ. (ದೇವನಹಳ್ಳಿ) ಜಿ. ಕೃಷ್ಣ ಪ್ರಸಾದ್, (ತಳ್ಳಿ) ಬಿ.ಎಸ್. ಅಪರಂಜ್ (ಜಮಖಂಡಿ) ತಾಂತ್ರಿಕ ಸಲಹೆ, ಡಾ. ಎಸ್. ಸೂರ್ಯಪ್ರಕಾಶ್ (ಕೃ.ವಿ.ವಿ. ಬೆಂಗಳೂರು.) ಡಾ. ಶ್ರೀನಾಥ್ ದೀಕ್ಷಿತ್ (ಪುತ್ತೂರು), ಪ್ರಕಟಣಾ ಸಹಾಯಕರಾಗಿ ಬಿ.ಎ. ಅನಿಲ್ ಕೌಶಿಕ್ (ಕೃಷಿ ಕಾಲೇಜು, ಶಿವಮೊಗ್ಗ), ಸಂಪರ್ಕ, ಸಂವಹನ ಮತ್ತು ಪ್ರಚಾರಕ್ಕೆ ಕೆ. ಕೃಪಾ (ಬೆಂಗಳೂರು) ಇವರುಗಳನ್ನು ಸೇರಿಸಿಕೊಳ್ಳಲಾಗಿದೆ.

ಹಾಗೇ ಕೃಷ್ಣಾತೀರ್ ರೈತಸಂಘ (ಜಮಖಂಡಿ) ಅಗ್ರಿಕಲ್ಚರ್ ಮ್ಯಾನ್ ಎಕಾಲಜ (AME) ಬೆಂಗಳೂರು, ಸೆಂಟರ್ ಫಾರ್ ಅಡ್ವಾನ್ಸ್‌ಡ್ ರೀಸರ್ಚ್ ಆನ್ ಇಂಡೀಜಿನಸ್ ನಾಲೆಡ್ಜ್ ಸಿಸ್ಟಮ್ಸ್ (CARIKS) ಮೈಸೂರು ಈ ಸಂಸ್ಥೆಗಳು ಹಿತ್ತಲಗಿಡದ ಹಿತೈಷಿ ಸಾಲಿಗೆ ಸೇರಿರುವವು.

ಸಂಪಾದಕೀಯ

ಹಿತ್ತಲಗಿಡದ ಮೊದಲ ಸಂಚಿಕೆಗೆ ಬರುತ್ತಿರುವ ಪ್ರತಿಕ್ರಿಯೆ ಪ್ರೋತ್ಸಾಹದಾಯಕವಾಗಿದೆ. ನಮ್ಮ ಮೊದಲ ಸಂಚಿಕೆಯನ್ನು ವಿಮರ್ಶಿಸಿ, ಒಳ್ಳೆಯ ಮಾತುಗಳು ಹಾಗೂ ಎಚ್ಚರಿಕೆಯ ನುಡಿಗಳನ್ನಾಡಿ ಪ್ರಚಾರ ನೀಡಿದ ಕನ್ನಡ ಪ್ರಭ, ಅಡಿಕೆ ಪತ್ರಿಕೆ, ಸ್ಪೈಸ್ ಇಂಡಿಯ, ಸುಜಾತ, ಹನಿ ಬೀ ಪತ್ರಿಕೆಗಳಿಗೆ ನಾವು ಆಭಾರಿಗಳು. ನಮ್ಮ ಪತ್ರಿಕೆಗೆ ರೈತಾಪಿಜನಗಳು, ಸ್ವಯಂ ಸೇವಾ ಸಂಘ ಮತ್ತು ವ್ಯಕ್ತಿಗಳು ತೋರುತ್ತಿರುವ ಆಸಕ್ತಿ ಅಪಾರ ಶಕ್ತಿ ನೀಡುವಂತೆ ಮಾಡಿದ್ದರೆ, ಕೃಷಿ ವಿಜ್ಞಾನಿಗಳು, ಬುದ್ಧಿಜೀವಿ ವರ್ಗದ ನಿರುತ್ಸಾಹ ನಮ್ಮನ್ನು ಸ್ವಲ್ಪ ನಿರಾಸೆಗೊಳ್ಳುವಂತೆ ಮಾಡಿದೆ.

ಮೊದಲಿಗೆ ಹಿತ್ತಲಗಿಡದ ಬಗ್ಗೆ ಬಂದಿರುವ ಎಲ್ಲಾ ತೆರನಾದ ಎಚ್ಚರಿಕೆಯ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿ, ಅವುಗಳಿಗೆ ಉತ್ತರಹುಡುಕಲು ಯತ್ನಿಸುತ್ತೇವೆ. ಹಿತ್ತಲಗಿಡದಪ್ರಯತ್ನವೇನಿದ್ದರೂ ವ್ಯವಸ್ಥಿತ ಜ್ಞಾನ, ಆಧುನಿಕ ವಿಜ್ಞಾನಕ್ಕೂ, ದೇಸಿಯ ಜ್ಞಾನವ್ಯವಸ್ಥೆಗೂ ಒಗ್ಗೂಡಲು, ಪರಸ್ಪರ ಕೊಟ್ಟು ಪಡೆಯಲು ಒಂದು ಸಾಮಾನ್ಯ ವೇದಿಕೆಯ ಹುಡುಕಾಟ ಎಂಬುದನ್ನು ಸ್ಪಷ್ಟ ಪಡಿಸಬೇಕಾಗಿದೆ.

ಇಂದು ನಮ್ಮಲ್ಲಿ ವ್ಯವಸ್ಥಿತ ಜ್ಞಾನ, ವಿಜ್ಞಾನಗಳಿಗೆ ಪರ್ಯಾಯವಾಗಿ ವಿಸ್ತೃತವಾಗಿರುವ, ಜೀವಂತವಾಗಿರುವ ಹಾಗೇ ಜನಪ್ರಿಯವಾಗಿರುವ ಈ ದೇಸೀಯ ಜ್ಞಾನ, ತಂತ್ರಜ್ಞಾನವ್ಯವಸ್ಥೆಯತ್ತ ನಾವು ಅವಶ್ಯಕವಾಗಿ, ಕಣ್ತೆರೆದು ನೋಡಬೇಕಾಗಿದೆ. ಒಂದು ದೇಸೀಯ ಜ್ಞಾನ ಅಥವಾ ತಂತ್ರಜ್ಞಾನವನ್ನು ಕಾಲದ ಪರಿಮಾಣದಲ್ಲಿ ಅಳೆಯುವುದಾದಲ್ಲಿ ಬಹಳಷ್ಟು ವರ್ಷಗಳಿಂದಲೂ ಅಥವಾ ಪ್ರಾದೇಶಿಕ ಪರಿಮಾಣದಿಂದ ಅಳೆದರೆ ಬಹಳಷ್ಟು ಜನಸಾಮಾನ್ಯರ ಬಳಿಯೂ ಜೀವಂತವೂ, ಜನಪ್ರಿಯವೂ ಆಗಿದ್ದು, ಇವೇ ದೇಸೀಯ ಜ್ಞಾನ ಒಂದನ್ನು ಗುರುತಿಸುವ ಲಕ್ಷಣವಾಗಿರುತ್ತವೆ ಎನ್ನಬಹುದು. ದೇಸೀಯ ಜ್ಞಾನವ್ಯವಸ್ಥೆ ಒಂದರ ಜನಪ್ರಿಯತೆ ಮತ್ತು ಜೀವಂತಿಕೆಗಳ ಮೂಲಸೆಲೆ ಹೊರಟಿರುವುದಾದರೂ ಅದರ 'ಜನಪರತೆ'ಯಿಂದ ಎಂಬುದು ಇಲ್ಲಿ ಅತ್ಯಂತ ಮುಖ್ಯ ವಿಚಾರವಾಗಿದೆ. ಹಾಗೇ, ಈ ಜನಪರತೆಯ ಕೊರತೆಯಿಂದಲೇ ಆಧುನಿಕ ವಿಜ್ಞಾನ ಜೀವಂತಿಕೆ ಮತ್ತು ಜನಪ್ರಿಯತೆಗಳೆರಡರ ಅಭಾವವನ್ನೂ ಎದುರಿಸುತ್ತಿದೆ ಎಂಬುದು. ವ್ಯವಸ್ಥಿತಗೊಳ್ಳುವ, ನಿಖರಗೊಳ್ಳುವ ಆ ಮೂಲಕ ಪರಿಣಾಮಕಾರಿಯಾಗುವ ತುರಾತುರಿಯಲ್ಲಿ ಆಧುನಿಕ ವಿಜ್ಞಾನ, ತಂತ್ರಜ್ಞಾನಗಳು 'ಜನಪರತೆ'ಯನ್ನು ಕಡೆಗಣಿಸುವಂತಾದಲ್ಲಿ, ಸುವ್ಯವಸ್ಥೆ ಮತ್ತು ನಿಖರತೆಗಳ ಕೊರತೆಯಿಂದ ನಮ್ಮ ಈ ದೇಸೀ ಜ್ಞಾನ ವ್ಯವಸ್ಥೆ ಬಡವಾಗುತ್ತಾ ಬಂದಿದೆ. ಇಲ್ಲೇ ಈ ಎರಡು ಜ್ಞಾನವ್ಯವಸ್ಥೆಗಳು ಪರಸ್ಪರ ಅರಿತು, ಕೊಟ್ಟು ಕೊಳ್ಳುವ ವಿಚಾರವಿರುವುದು. ದೇಶೀಯ ತಂತ್ರಜ್ಞಾನ ಒಂದನ್ನು ನಿಖರಗೊಳಿಸುವ, ವ್ಯವಸ್ಥಿತಗೊಳಿಸಿ, ಪರಿಣಾಮಕಾರಿ ಮಾಡುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಪ್ರಯತ್ನ ಒಂದನ್ನು ''ಸಸ್ಯರೋಗ ನಾಶಕವಾಗಿ ಪಂಚಗವ್ಯ'' ಲೇಖನದಲ್ಲಿ ಕೊಡಲಾಗಿದೆ. ಆದರೆ ಈ ದೇಶೀಯ ಕ್ರಮ ವ್ಯವಸ್ಥಿತಗೊಳ್ಳುವ ತೂರಾತುರಿಯಲ್ಲಿ ತನ್ನ ಜನಪರತೆ, ಸಾಮಾಜಿಕ ಆಯಾಮ ಮತ್ತು ಸುಸ್ಥಿರತೆಯ ಲಕ್ಷಣಗಳನ್ನು ಮಾತ್ರ ಕಳೆದುಕೊಳ್ಳದಂತೆ ನಿಗಾವಹಿಸಬೇಕು.

ಇದರ ಜೊತೆಗೆ, ನಿಸರ್ಗದ ನೀತಿ ನಿಯಮಗಳನ್ನು ಅರಿತು, ಅವಕ್ಕೆ ತಲೆಬಾಗಿ, ಪ್ರಾಣಿ, ಪಕ್ಷಿ, ಜೀವಜಂತುಗಳೊಡನೆ ಸಹಜೀವನ ನಡೆಸುವ ದೇಸೀಯ ಜ್ಞಾನ ವ್ಯವಸ್ಥೆಯ 'ಪರಿಸರ ಪ್ರಿಯತೆ'ಯನ್ನೂ, ವ್ಯವಸ್ಥಿತ ವಿಜ್ಞಾನ, ತಂತ್ರಜ್ಞಾನಗಳು ಅರಿತು, ಅಳವಡಿಸಿ ಕೊಳ್ಳಬೇಕಾಗಿದೆ. ಇವುಗಳ ಮೂಲಕ ಹೊಸದೊಂದು ಅಭಿವೃದ್ಧಿ ಪಥದ ಹುಡುಕಾಟದ ಪ್ರಯತ್ನವನ್ನೂ ಈ ದೇಸೀಯ ಜ್ಞಾನವ್ಯವಸ್ಥೆಯನ್ನು ಅರಿಯುವ ಮೂಲಕ ಗಟ್ಟಿ ಮಾಡಬಹುದೆನ್ನುವುದು ಮುಖ್ಯವಾಗಿರುತ್ತದೆ.

ಈ ಅಭಿವೃದ್ಧಿ ಮಾದರಿಯಲ್ಲಿ ವ್ಯಕ್ತಿಗಳನ್ನು ಬದಿತಳ್ಳಿ, ತಂತ್ರಜ್ಞಾನಕ್ಕೆ ಕೇಂದ್ರ ಸ್ಥಾನ ನೀಡುವ ಪ್ರವೃತ್ತಿ ಇಲ್ಲ. ಬದಲಿಗೆ, ಇಲ್ಲಿ ದೇಸೀಯ ಜ್ಞಾನವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವ ಮಳೇ ಆಶ್ರಯದ ಬಡರೈತರು, ಬುಡಕಟ್ಟು, ಆದಿವಾಸಿ ಜನಗಳು, ಗ್ರಾಮೀಣ ಮಹಿಳೆಯರು, ಕೃಷಿ ಕಾರ್ಮಿಕರಿಗೆ ಸಹಜವಾಗಿ ಆದ್ಯತೆ ದೊರಕುವಂತಾಗುತ್ತದೆ. ಅದೇ ರೀತಿ ಈ ದೇಸೀಯ ಅಥವಾ ಪಾರಂಪರಿಕ ಜ್ಞಾನದ ಚೌಕಟ್ಟಿನೊಳಗೆ ಪ್ರಯೋಗ ಮಾಡಿ ಹೊಸ ಹೊಸ ದೇಸೀ ತಂತ್ರಜ್ಞಾನಗಳನ್ನು ಹೊರಗೆಡುಹುತ್ತಿರುವ ನಾರಾಯಣರೆಡ್ಡಿ, ಭರಮ ಗೌಡರು, ಪುರುಷೋತ್ತಮರಾಯರೂ ಪಾಲ್ಗೊಂಡು ಅವರು ಪ್ರಮುಖವಾಗುವುದರಿಂದ, ಇದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರ ಪಾತ್ರವನ್ನು ಆಮೂಲಕ ಜನತಂತ್ರವನ್ನೇ ಎತ್ತಿ ಹಿಡಿಯುವ ಕಾರ್ಯವೂ ಆಗಿರುತ್ತದೆ ಎನ್ನಬಹುದು.

ಇವೆಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ಜನಪದ ಸಂಸ್ಕೃತಿಯನ್ನು ಗಟ್ಟಿಮಾಡುವ ಪ್ರಯತ್ನವೂ ಇರುವುದನ್ನು ನಾವು ಗಮನಿಸಬೇಕಾಗಿದೆ. ಸುಸ್ಥಿರ ಅಭಿವೃದ್ಧಿ ಪ್ರಕ್ರಿಯೆಗೆ ಅತ್ಯವಶ್ಯಕವಾಗಿರುವ ದೇಸೀಯ ಜ್ಞಾನ ವ್ಯವಸ್ಥೆಯಾಗಲೀ, ನಾಟಿ ತಂತ್ರಜ್ಞಾನವಾಗಲೀ, ಜೀವ ವಿವಿಧತೆಯಾಗಲೀ ಅಥವಾ ಆ ನಿಟ್ಟಿನ ಆಚಾರ, ವಿಚಾರ, ನಂಬಿಕೆ, ಕತೆಗಳ ಸಾಂಸ್ಥಿಕ ರಚನೆಗಳಾಗಲೀ ತುಂಬಿ ತುಳುಕುತ್ತಿರುವುದಾದರೂ ಬುಡಕಟ್ಟು, ಆದಿವಾಸಿ, ದಲಿತ, ಶೂದ್ರ, ಜನಾಂಗ ಗಳನ್ನೊಳಗೊಂಡಿರುವ 'ಜನಪದ ಸಂಸ್ಕೃತಿಗಳೊಳಗೆ' ಎನ್ನಬಹುದು.

ಈ ಸಂಸ್ಕೃತಿಗಳೊಳಗೆ ಗ್ರಾಮೀಣ ಬಹುಸಂಖ್ಯಾತ ಬಡಜನತೆ ಸೇರಿದ್ದು ಇಂದು ಈ ಗ್ಯಾಟ್ ಒಪ್ಪಂದದ ಮೂಲಕ ಎದ್ದಿರುವ ವ್ಯಾಪಾರದ ಬಿರುಗಾಳಿಗೆ ಹಾಗೇ ಈ ಹಿನ್ನೆಲೆಯಲ್ಲಿ ಅತಿಕ್ರಮ ನಡೆಸಲು ಸಿದ್ಧವಾಗಿರುವ ಆ 'ಬಿಳಿಸಂಸ್ಕೃತಿ'ಯ ಹಾವಳಿಗೆ ಇವು ಕೊಚ್ಚಿಹೋಗುವ ಸಾಧ್ಯತೆ ಬಹಳವಾಗಿರುತ್ತದೆ. ಅಂದಮೇಲೆ, ಇಲ್ಲಿ ದೇಸೀಯ ಜ್ಞಾನವ್ಯವಸ್ಥೆ, ನಾಟಿ ಮೂಲದ ಸಂಸ್ಥೆಗಳು ಮತ್ತು ಜೀವವಿವಿಧತೆಗಳನ್ನು ಉಳಿಸಿ, ಬೆಳೆಸಿ, ಬಳಸುವ ಪ್ರಯತ್ನವೆಂದರೆ, ಈ ಜನಪದ ಸಂಸ್ಕೃತಿಗಳನ್ನು ಉಳಿಸಿ, ಬೆಳೆಸಿ, ಗಟ್ಟಿಮಾಡುವ ಪ್ರಯತ್ನವೂ ಆಗಲಿದೆ. ಉತ್ತರ ಕನ್ನಡದ ಸಿದ್ಧಿ ಬುಡಕಟ್ಟು ಜನಾಂಗದ ಕೃಷಿ ಮತ್ತು ಪಶುಪಾಲನೆ ಕ್ರಮಗಳನ್ನು ಹಾಗೇ ಕುರ್ದ ಮತ್ತು ರಾಮಿಯರ ಚತುರತೆಗಳನ್ನು ದಾಖಲಿಸಿರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ನಾವು ಚರ್ಚಿಸಬೇಕಾಗಿದೆ.

ನಮ್ಮ ವೈದೀಕ ಆಚರಣೆಯ ಪಾಲಿಗೆ ಸೇರಿರುವಂತಹ ವಾಜಪೇಯಿ ಯಾಗದ ಬಗೆಗಿನ ಸಂಶೋಧನಾ ಲೇಖನವೊಂದನ್ನು ನಾವು ಈ ಸಂಚಿಕೆಯಲ್ಲಿ ಕೊಟ್ಟಿರುವೆವು. ಇಂತಹಾ ಆಚರಣೆಯಲ್ಲಿ ಶ್ರೇಷ್ಠತೆ, ಪಾರಮಾರ್ಥಿಕ ವಿಚಾರಕ್ಕಿಂತಲೂ ಮುಖ್ಯವಾಗಿ, ಕೃಷಿಗೆ, ರೈತಾಪಿಜನಗಳ ಸಾಮಾನ್ಯ ಭೌತಿಕ ಅಗತ್ಯಗಳಾದ ಅನ್ನ ನೀರಿಗೆ ಸಂಬಂಧಿಸಿದ ವಿಚಾರ, ಆಶಯಗಳು ಅಡಗಿರುತ್ತದೆ ಎನ್ನುವ ಕುತೂಹಲಕರ ಅಂಶವನ್ನು ಶ್ರೀ ಅಪರಂಜಿ್ರವರು ಹೊರಗೆಡಹಿರುತ್ತಾರೆ. ಆ ಮೂಲಕ ರೈತಾಪಿ ವರ್ಗವನ್ನು ಕೃಷಿಯಲ್ಲಿ ತೊಡಗಿಸುವ, ಅದರಲ್ಲಿ ಶ್ರದ್ಧೆ ಉಂಟು ಮಾಡುವಲ್ಲಿ ಮಾನಸಿಕವಾಗಿ ಸಿದ್ಧತೆಗೊಳಿಸುವುದೇ ಇದರ ಉದ್ದೇಶವೆಂಬುದು ಇಲ್ಲಿ ಗಮನಿಸಬೇಕಾಗಿದೆ.

ಇನ್ನು ದೇಸೀಯ ಜ್ಞಾನ, ನಾಟೀ ತಂತ್ರಜ್ಞಾನವನ್ನು ಈ ರೀತಿ ದಾಖಲು ಮಾಡುವುದರಿಂದ ಇದರ ಉಪಯೋಗವನ್ನು ವಾಣಿಜ್ಯದೃಷ್ಟಿಯಿಂದ ಬಳಸುವವರು ಪಡೆದು ಅವರ ಲಾಭ ಸಂಪಾದನೆಗೆ ಸಹಾಯವಾಗುತ್ತದೆ ಎನ್ನುವ ದೂರು ಕೇಳಿಬರುತ್ತಿದೆ. ಇದರಿಂದ ಈ ಹಿಂದೆ ಚರ್ಚಿಸಿರುವ ಹಿತ್ತಲಗಿಡದ ಮೂಲ ಉದ್ದೇಶಗಳಿಗೆ ಏನಾದರೂ ಅಡ್ಡಿಯಾಗುತ್ತದೆಯೇ ಎಂದು ನಾವು ಮೊದಲು ಯೋಚಿಸಬೇಕಾಗಿದೆ. ಜೊತೆಗೆ ಇದರಿಂದಾಗಿ 'ಹಿತ್ತಲಗಿಡ' ಮತ್ತಷ್ಟು ವ್ಯವಸ್ಥಿತಗೊಂಡು ಸುಸ್ಥಿರ ಅಭಿವೃದ್ಧಿ ಕಾರ್ಯಕ್ಕೆ ಏನಾದರೂ ಸಹಕಾರಿಯಾಗುತ್ತದೆಯೇ ಎಂಬುದನ್ನೂ ಚರ್ಚಿಸಬೇಕಾಗಿದೆ. ಮಿಗಿಲಾಗಿ, ಇಂದು ಭಾರತದಂತಹ ಬಡರಾಷ್ಟ್ರವೊಂದು ವಿಶ್ವಮಟ್ಟದಲ್ಲಿ. ವ್ಯಾಪಾರೀ ಸವಾಲನ್ನು ಅನಿವಾರ್ಯವಾಗಿ ಎದುರಿಸಲೇ ಬೇಕಾಗಿದೆ. ಈ ನಿಟ್ಟಿನಲ್ಲಿ ಸರಿಯಾಗಿ ವ್ಯವಹರಿಸಿದಲ್ಲಿ ನಾವು ಕನಿಷ್ಠ ಜೀವ ವಿವಿಧತೆ ಮತ್ತು ನಾಟೀ ತಂತ್ರಜ್ಞಾನ, ದೇಸೀಯ ಜ್ಞಾನಗಳಂತಹ ವಿಚಾರಗಳಲ್ಲಾದರೂ ಮೇಲುಗೈ ಪಡೆಯುವ ಸಾಧ್ಯತೆ ಇದೆ. ಇದೇ ಸಾಧ್ಯತೆಯನ್ನು ಮತ್ತಷ್ಟು ವಿಸ್ತೃತವಾಗಿ ಬಳಸಿದಲ್ಲಿ ಇವುಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಆ ಜನಪದ ಸಂಸ್ಕೃತಿಗಳಡಿಯಲ್ಲಿ ಬದುಕುತ್ತಿರುವ ಬಹುತೇಕ ಬಡಜನತೆಗೆ ಅಭಿವೃದ್ಧಿಯ ಫಲವನ್ನು ಒಂದಿಷ್ಟಾದರೂ ಉಣಬಡಿಸಿವ ಕನಸು ಕೆಲವರಿಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷರಾದ ಪ್ರೊ. ನಂಜುಂಡಸ್ವಾಮಿಯವರು ಪ್ರಾಸ್ತಾಪಿಸಿರುವ ''ಸಮುದಾಯದ ಬೌದ್ಧಿಕ ಸನದ್ದಿನ ಹಕ್ಕು'' *(Community Intellectual Property Rights)* ನ್ನಾಗಲೀ, ಪ್ರೊ. ಅನಿಲ್ ಗುಪ್ತಾರವರು ಹೋರಾಡುತ್ತಿರುವ ರೈತರ, ಆದಿವಾಸಿ, ಬುಡಕಟ್ಟು ಜನಾಂಗಗಳ 'ಪೇಟೆಂಟ್ ಹಕ್ಕಿನ' ಬಗ್ಗೆಯಾಗಲೀ ನಾವಿಂದು ಗಂಭೀರವಾಗಿ ಚಿಂತಿಸಬೇಕಾಗಿದೆ.

ಹಾಗೇ ಈ ದೇಶೀಯ ಜ್ಞಾನವ್ಯವಸ್ಥೆ ಅಥವಾ ಜೀವ ವಿವಿಧತೆಗಳ ಉಪಯೋಗ ಅಥವಾ ಸೇವೆಗಳು ವ್ಯಾಪಾರೀಕರಣಕ್ಕೆ ಅಥವಾ ವಾಣಿಜ್ಯಕರಣಕ್ಕೆ ಹೇಗೆ ಹೊಂದಿಕೊಳ್ಳಬಲ್ಲವು ಎಂಬುದನ್ನು ನಾವು ಚರ್ಚಿಸಬೇಕಾಗಿದೆ. ಇವುಗಳು ವೈಯಕ್ತಿಕ ಲಾಭಕ್ಕೆ ಹೆಚ್ಚು ಒತ್ತುಕೊಡದೇ, ಸಮುದಾಯದ ಹಿತ ಮತ್ತು ಸಾಮಾಜಿಕ ಅಭ್ಯುದಯಕ್ಕೆ ಮಹತ್ವ ನೀಡುವಂತಹವು. ಈ ಮುಂದೆ ಸಾಮಾಜಿಕವಾಗಿ ಬೇಡಿಕೆ ಇರುವ, ವೈಯುಕ್ತವಾಗಿ ಉಳಿಸಲು ಬೆಳೆಸಲು ಪ್ರೋತ್ಸಾಹ ಕಡಿಮೆಯಾಗುತ್ತಿರುವ 'ದೇವನ ಹಳ್ಳಿಯ ಚಕ್ಕೋತ'ದ ಬಗ್ಗೆ ಒಂದು ಲೇಖನವಿದೆ. ಹಾಗೇ ವ್ಯವಸ್ಥಿತಗೊಂಡು, ವ್ಯಾಪಾರೀಕರಣಕ್ಕೆ ಅಣಿಯಾಗುತ್ತಿರುವಂತಹ ಮತ್ತೊಂದು ನಾಟಿ ಉತ್ಪನ್ನ, 'ಪುನರ್‌ಪುಳಿ'ಯ ಬಗ್ಗೆ ವರದಿ ಇದೆ. ಇವಕ್ಕಿಂತ ಮುಖ್ಯವಾಗಿ ವಾಣಿಜ್ಯ ರೂಪ ಪಡೆದು ರಫ್ತಾಗಲು ನಿಂತಿರುವ ಮದರಂಗಿ, ಜಾಯಿಕಾಯಿ, ಜಾಯಿಪತ್ರೆ ಇತ್ಯಾದಿ ಹಿತ್ತಲಗಿಡಗಳ ಕಥೆಯೂ ಇದೆ. ಈ ಎಲ್ಲಾ ನಾಟಿ ಮೂಲದ ಉತ್ಪನ್ನಗಳು ವೈಯುಕ್ತಿಕ ಲಾಭನಷ್ಟಗಳನ್ನು ತೂಗಿ ನೋಡುವ ಮಾರುಕಟ್ಟೆ ಅರ್ಥವ್ಯವಸ್ಥೆಯ ಮೂಲಕ ವಾಣಿಜ್ಯಮಯಗೊಂಡಲ್ಲಿ ಸಮುದಾಯದ ಹಿತ ಅಥವಾ ಸಾಮಾಜಿಕ ಅಭ್ಯುದಯವನ್ನು ಎತ್ತಿ ಹಿಡಿಯುವ ತಮ್ಮ ಆ ದೇಸೀ ಧ್ಯೇಯವನ್ನು ಕಾಪಾಡಿಕೊಳ್ಳುವಂತೆ ಮಾಡುವುದು ಹೇಗೆ ಸಾಧ್ಯ ಎಂಬುದು ನಮ್ಮ ಮುಂದಿರುವ ದೊಡ್ಡ ಪ್ರಶ್ನೆಯಾಗಿದೆ.

'ಹಿತ್ತಲಗಿಡ' ದ ಬಗ್ಗೆ ಈ ಎಲ್ಲಾ ನಿಟ್ಟಿನಿಂದ ಚರ್ಚೆಗಳು ಮುಂದುವರೆಯಲೆಂದು ಹಾರೈಸುತ್ತೇವೆ.

ಅನಿವಾರ್ಯ ಕಾರಣದಿಂದ ಹಿತ್ತಲಗಿಡದ 1995ರ ಎರಡನೇ ಸಂಚಿಕೆ ಹೊರಬರುವುದು ತಡವಾಗಿದೆ. ಹಾಗಾಗಿ 2 ಮತ್ತು 3ನೇ ಸಂಚಿಕೆಗಳನ್ನು ಒಟ್ಟುಗೂಡಿಸಿ, ಮೂರು ಕಲಂಗಳಲ್ಲಿ ಪ್ರಕಟಿಸಿರುವ 32 ಪುಟಗಳ ಈ ಸಂಚಿಕೆಯನ್ನು ತಮಗೆ ಕಳುಹಿಸುತ್ತಿರುವೆವು.

ದೇಶೀಯ ಬೀಜ ಸಂರಕ್ಷಣೆ

ತೆಂಗಿನ ಕರಟದೊಳಗೆ ಸಂಗ್ರಹಣೆ

ಮಂಗಳೂರು ಕೇರಳದ ಗಡಿಪ್ರದೇಶಗಳಲ್ಲಿ ವಿವಿಧ ತರಕಾರಿ ಬೀಜ ಸಂಗ್ರಹಿಸುವ ಕೆಲವು ವಿಧಾನಗಳು ಹೀಗಿವೆ : ಒಳಗಡೆ ತಿರುಳು ಪೂರ್ಣವಾಗಿ ಬೆಳೆಯದ, ಆದರೆ ಸಂಪೂರ್ಣವಾದ ಕರಟ ಅಥವಾ ಚಿಪ್ಪು ಇರುವಂತಹ ತೆಂಗಿನಕಾಯಿಯನ್ನು ಬೀಜ ಸಂಗ್ರಹಕ್ಕೆ ಬಳಸಲಾಗುತ್ತದೆ. ಇಂತಹ ತೆಂಗಿನಕಾಯಿಯನ್ನು ನೀರಿನಲ್ಲಿ ಸುಮಾರು 2 ತಿಂಗಳ ಕಾಲ ನೆನೆಸಿಡುತ್ತಾರೆ. ಅನಂತರ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಲಾಗುತ್ತದೆ. ಹೀಗೆ ಒಣಗಿದ ತೆಂಗಿನ ಕಾಯಿಯ ಒಂದು ಕಣ್ಣನ್ನು ತೆಗೆದು ಆ ರಂಧ್ರದ ಮೂಲಕ ಒಂದು ಕಡ್ಡಿ ಹಾಕಿ ಒಳಭಾಗವನ್ನು ಸಂಪೂರ್ಣ ಸ್ವಚ್ಛಗೊಳಿಸಲಾಗುತ್ತದೆ. ಈ ರಂಧ್ರದ ಮೂಲಕ ಅಗತ್ಯವಾದ ತರಕಾರಿಗಳ ಬೀಜವನ್ನು ಒಳಗೆ ಹಾಕುತ್ತಾರೆ. ರಂಧ್ರದ ಅಳತೆಗೆ ಸೂಕ್ತವಾದಂತಹ ಕಡ್ಡಿ ಅಥವಾ ಬೆಂಡಿನಿಂದ ಮುಚ್ಚಳವನ್ನು ಸಿದ್ಧಗೊಳಿಸಿ, ಮುಚ್ಚಿ, ಸುತ್ತಲೂ ಸುಣ್ಣ ಹಚ್ಚುತ್ತಾರೆ. ಸಾಧಾರಣವಾಗಿ ಅಡುಗೆ ಕೋಣೆಯ ಅಟ್ಟದ ಮೇಲೆ ಇಂತಹ ಬೀಜ ತುಂಬಿದ ತೆಂಗಿನಕಾಯಿಗಳನ್ನು ಸಂಗ್ರಹಿಸಿಡುತ್ತಾರೆ. ಇಲಿ-ಹೆಗ್ಗಣಗಳಂತಹ ಮೂಷಿಕಗಳಾಗಲೀ, ಇನ್ನಾವುದೇ ಕ್ರಿಮಿ ಕೀಟಗಳಾಗಲೀ ಕಾಟ ಕೊಡಲು ಅಸಾಧ್ಯ. 2-3 ವರ್ಷಗಳವರೆಗೆ ಈ ರೀತಿ ಬೀಜ ಸಂಗ್ರಹಿಸಿಡಲು ಸಾಧ್ಯ. ಜೊತೆಗೆ ಬೀಜ ಸಂಗ್ರಹಕ್ಕಾಗಿ ಸಿದ್ಧಗೊಳಿಸಿದ ತೆಂಗಿನ ಕಾಯಿಗಳು ಅನೇಕ ವರ್ಷಗಳು ಬಾಳಿಕೆ ಬರುತ್ತವೆ. ಅಜ್ಜನ ಕಾಲದಲ್ಲಿ ತಯಾರಿಸಿದ ಇಂತಹ ಸಂಗ್ರಾಹಕಗಳನ್ನು ಮೊಮ್ಮಕ್ಕಳು ಬೀಜ ಸಂಗ್ರಹಿಸಲು ಬಳಸುವುದೂ ಇದೆ.


ಬೆರಣಿಯೊಳಗೆ ಬೀಜ


ಹೀರೆ, ಸೌತೆ, ಕುಂಬಳ ಇವುಗಳ ಬೀಜಗಳನ್ನು ಸೆಗಣಿಯ ಬೆರಣಿಯಲ್ಲಿಟ್ಟು 2-3 ವರ್ಷದವರೆಗೆ ಹಾಳಾಗದಂತೆ ಸಂಗ್ರಹಿಸಿಡುತ್ತಾರೆ. ಸೆಗಣಿಯಿಂದ ದಪ್ಪ ಬೆರಣಿಯನ್ನು ತಟ್ಟಿ ಹಸಿಯಾಗಿರುವಾಗಲೇ ಅದರಲ್ಲಿ ಬೀಜಗಳನ್ನು ಇಟ್ಟು ಬೆರಳಿನಿಂದ ಒತ್ತುತ್ತಾರೆ. ಬಿಸಿಲಿನಲ್ಲಿ ಒಣಗಿದ ನಂತರ ಇಂತಹ ಬೆರಣಿಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಒಂದರ ಮೇಲೊಂದು ಪೇರಿಸಿ ಹಗ್ಗದಲ್ಲಿ ಸೇರಿಸಿಟ್ಟು ಬಿಡುತ್ತಾರೆ.

ಸುಲಭದಲ್ಲಿ ದೊರಕುತ್ತಿರುವ ಗೋಣಿ ಚೀಲಗಳು, ರಾಸಾಯನಿಕ ಗೊಬ್ಬರಗಳ ಚೀಲಗಳು, ಪ್ಲಾಸ್ಟಿಕ್ ಲಕೋಟೆಗಳು (ಕವರ್) ಹಿಂದಿನ ಬೀಜ ಸಂಗ್ರಹಣೆಯ ಪದ್ಧತಿಗಳನ್ನು ಜನ ಮರೆಯುವಂತೆ ಮಾಡಿವೆ. ಜೊತೆಗೆ ಈ ಎಲ್ಲಾ ಬೀಜ ಸಂಗ್ರಹಣಾ ಪದ್ಧತಿಗಳಿಗೆ ಅಡುಗೆ ಕೋಣೆಯ ಅಟ್ಟ ಅನುಕೂಲವಾದ ಜಾಗ-ವಾಗಿತ್ತು. ಅಡುಗೆ ಕೋಣೆಯ ಹೊಗೆ ಬಹುಮಟ್ಟಿಗೆ ಕ್ರಿಮಿ ನಾಶಕವಾಗಿತ್ತು. ಆದರೆ ಈಗ ಹೊಗೆಯಿಲ್ಲದ ಅಡುಗೆಕೋಣೆಗಳು ಸಾಮಾನ್ಯವಾಗಿರುವಾಗ ಬೀಜ ಸಂಗ್ರಹಣಾ ಪದ್ಧತಿಗಳೂ ಬದಲಾಗುತ್ತಿವೆ.

ತೆಂಗಿನ ಕಾಯಿ ಮೊಳಕೆ ಬರಿಸುವುದು:

ಬೀಜಕ್ಕೆ ಬೇಕಾದ ತೆಂಗಿನ ಕಾಯಿಯನ್ನು ಒಂದು ವಾರ ಕಾಲ ನೀರಿನಲ್ಲಿ ಹಾಕಿಡುತ್ತಾರೆ. ಅನಂತರ ತೆಂಗಿನಕಾಯಿಯನ್ನು ಅದರ ಕಣ್ಣುಗಳು ಅಡಿಮುಖವಾಗಿರುವಂತೆ ನೆಡುತ್ತಾರೆ. ಹೀಗೆ ಮಾಡುವುದರಿಂದ ಮೊಳಕೆಯೊಡೆಯುವ ಭ್ರೂಣ ಅಥವಾ ಕಣ್ಣಿಗೆ ಕಾಯಿಯ ಒಳಗಿನ ನೀರು ಸಲೀಸಾಗಿ ತಾಗುವುದರಿಂದ ಮೊಳಕೆ ಯೊಡೆಯಲು ಸುಲಭವಾಗುತ್ತದೆ. ಒಂದು ವಾರದ





ಬೆಂಗಳೂರು ಕೃಷಿ ವಿ.ವಿ. ಉಪಕುಲಪತಿಗಳಾಗಿ

ಡಾ॥ ಜಿ.ಕೆ. ವೀರೇಶ್

ಹಿತ್ತಲಗಿಡದ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ॥ ಜಿ.ಕೆ. ವೀರೇಶ್ ಇಂದು ಬೆಂಗಳೂರು ಕೃಷಿ ವಿ.ವಿ. ಉಪಕುಲಪತಿಗಳು. ಪಶ್ಚಿಮ ಘಟ್ಟದ ಮಡಿಲಿನ ಮಲೆನಾಡಿನ ತವರೂರಾದ ಹಾಸನ ಜಿಲ್ಲೆಯಿಂದ ಬಂದಿರುವ ಡಾ॥ ವೀರೇಶ್ ಕೀಟಶಾಸ್ತ್ರ, ಸಾಮಾಜಿಕ ಕೀಟಗಳು, ಭೂ ಜೀವಿಶಾಸ್ತ್ರ ಇತ್ಯಾದಿ ವಿಚಾರಗಳಲ್ಲಿ ಅಪಾರ ಪಾಂಡಿತ್ಯ ಹೊಂದಿರುವವರು. ಇತ್ತೀಚೆಗಿನ ದಿನಗಳಲ್ಲಿ ಸಾವಯವ ಕೃಷಿ, ಸುಸ್ಥಿರ ಕೃಷಿ ವಿಚಾರಗಳಲ್ಲಿ ಹೆಚ್ಚು ಆಸಕ್ತಿ ತಳೆದಿರುವವರು. ಪರಿಸರ, ಪಶ್ಚಿಮಘಟ್ಟ, ಸಾವಯವ ಕೃಷಿ, ಸುಸ್ಥಿರ ಕೃಷಿಗಳು ಇಂದಿನ ದಿನಗಳಲ್ಲಿ ಮಹತ್ವ ಪಡೆಯುತ್ತಿರುವುದರಿಂದ ಈ ಎಲ್ಲಾ ಹಿನ್ನೆಲೆಹೊಂದಿರುವ ಡಾ॥ ವೀರೇಶ್ ಕೃಷಿ ವಿ.ವಿ.ಯ ಉಪಕುಲಪತಿಗಳಂತಹ ಮಹತ್ವದ ಸ್ಥಾನ ಅಲಂಕರಿಸಿದ್ದು, ಅವರಿಂದ ಈ ನಿಟ್ಟಿನಲ್ಲಿ ಅಷ್ಟೇ ಮಹತ್ವದ ಕೊಡುಗೆ ಬರಲೆಂದು ಹಿತ್ತಲಗಿಡ ಹಾರೈಸುತ್ತದೆ.

ಹಿತ್ತಲ ಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಬಳಸಬಯಸುವ ರೈತರು ಮೊದಲು ಅದನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ. ಹಾಗೇ, ಈ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಉಪಯೋಗಿಸುವವರು, ಮೊದಲು ಅದನ್ನು ಹಿತ್ತಲಗಿಡದ ಮತ್ತು ಅದರ ಮೂಲ ವ್ಯಕ್ತಿಗಳು, ಸಮುದಾಯದ ಗಮನಕ್ಕೆ ತರಬೇಕಾಗಿ ಸೂಚಿಸಲಾಗಿದೆ.

– ಸಂಪಾದಕರು

ನಂತರ ಇಂತಹ ಕಾಯಿಗಳನ್ನು ಮತ್ತೆ ತಿರುಗಿಸಿ ನೇರವಾಗಿ ಅಂದರೆ ಕಣ್ಣುಗಳು ಮೇಲ್ಮುಕನಾಗಿರುವಂತೆ ನೆಡಲಾಗುತ್ತಿರುವ ಈ ಪದ್ಧತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳವಡಿಸಲಾಗಿದೆ.

– ಕಿನ್ನಾ ವಿಠಲ್‌ರಾವ್

ಸೀಮೇ ಎಣ್ಣೆ ಸ್ಪರ್ಶ :

ಸೌತೆ/ಅಲಸಂದೆಯ ಬೀಜವೆಂದರೆ ಇರುವೆಗಳಿಗೆ ಪಂಚಪ್ರಾಣ. ಇದರಿಂದಾಗಿ ಬಿತ್ತನೆ ಮಾಡಿದ ಬೀಜಗಳು ವ್ಯರ್ಥವಾಗುವ ಸನ್ನಿವೇಶಗಳೇ ಜಾಸ್ತಿ. ಸೀಮೆಎಣ್ಣೆಯ ಸ್ಪರ್ಶ ಪಡೆದು ಬಿತ್ತನೆಯಾಗುವ ಬೀಜಕ್ಕೆ ಇರುವೆ ಕಾಟ ಇರುವುದಿಲ್ಲವಂತೆ.

– ಗಣಪತಿ ಭಟ್, ಕೊಡ್ಲ

ಬೀಜದ ಮೇಲೆ ಎಷ್ಟು ದಪ್ಪಕ್ಕೆ ಮಣ್ಣು ಮುಚ್ಚಬೇಕು?

ಈ ಪ್ರಶ್ನೆಗೆ ಶ್ರೀ ಗಣಪತಿ ಭಟ್ ಉತ್ತರಿಸುತ್ತಾರೆ - 'ಬೀಜವನ್ನು ಬಿತ್ತುವ ಸಮಯದಲ್ಲಿ ಬೀಜದ ದಪ್ಪದಷ್ಟೇ ಮಣ್ಣು ಬೀಜದ ಮೇಲೆ ಹಾಕಬೇಕು. ಇದರಿಂದ ಮೊಳಕೆಯ ಪ್ರಮಾಣ ಹೆಚ್ಚಿ, ಮೊಳಕೆಯೊಡೆಯಲು ಬೇಕಾದ ಸಮಯವೂ ಕಡಿಮೆಯಾಗುತ್ತದೆ.

– ಉಮೇಶ, ಕೋಡ್ಲ.

ಹುಳೀ ಮಜ್ಜಿಗೆ :

ಹುಳೀ ಮಜ್ಜಿಗೆ ! ಮನೆ ಮಂದಿಯಲ್ಲಿ ಮುಖ ಕಿವಿಚುವವರೆ. ಮನೆಯಲ್ಲಿ ಯಾರಿಗೂ ರುಚಿಸದ ಹುಳಿ ಮಜ್ಜಿಗೆಗೆ ಬೈರಾಪುರದಲ್ಲಿ ಬೇಡಿಕೆ ಅಪಾರ. ನಿಮ್ಮ ಮುಖ ಹಿಂಡುವ ಈ ಹುಳಿ ಮಜ್ಜಿಗೆ ಸೂರ್ಯಕಾಂತಿಯ ವದನವನ್ನು ಹಿಗ್ಗಿಸುತ್ತದೆ!

ಸೂರ್ಯಕಾಂತಿಯ ಹೂವಿನ ಅಗಲಕ್ಕೂ, ಪರಾಗಸ್ಪರ್ಶಕ್ಕೂ, ಕಾಳುಗಳ ಕೂಡುವಿಕೆಗೂ ಸಂಬಂಧ ನೇರೆ ತಾನೆ? ಎಂದು ಪ್ರಶ್ನಿಸಿದವರು ನನ್ನ ಪಕ್ಕದಲ್ಲೆ ಕೂತಿದ್ದ ಸಹಪ್ರಯಾಣಿಕರಾದ ಕೃಷಿಕ ನಾಗರಾಜ್.

ಬೈರಾಪುರದ ಸೂರ್ಯಕಾಂತಿ ಬೀಜಗಳು, ಒಂದು ರಾತ್ರಿ ಹುಳೀ ಮಜ್ಜಿಗೆಯಲ್ಲಿ ಮಿಂದು, ಕೆಲಕಾಲ ಗಾಳಿಯಲ್ಲಿ ಮೈವೊಣಗಿಸಿಕೊಂಡು ಬಿತ್ತನೆಗೆ ತಯಾರಾಗುತ್ತವೆ. ಮಣ್ಣಿನ ಕಣಗಳ ಜೊತೆ ಸಂಬಂಧ ಬೆಳೆಸುವ ಮುನ್ನ ಬೀಜಗಳಿಗೆ ಹುಡಿಹುಡಿಯಾದ ಹಟ್ಟಿಗೊಬ್ಬರದ ಸ್ಪರ್ಶ, (ಬಿತ್ತನೆಗೆ ಅನುವಾಗಲೆಂದು). ಮಜ್ಜಿಗೆಯ ರುಚಿ ಕಂಡ ಮತ್ತು ಕಾಣದ ಬೀಜಗಳ, ಮೊಳೆಯುವಿಕೆ, ಬೆಳವಣಿಗೆ ಹೂವಿನ ವದನದ ಗಾತ್ರ..... ಹೀಗೆ ಎಲ್ಲದರಲ್ಲೂ ಕಾಣುವಷ್ಟು ವ್ಯತ್ಯಾಸ.

ಬಟ್ಲು ತೂರೋದು ... !

ಮಲೆನಾಡಿನಲ್ಲಿ ಕಾಣುವ 'ಬಟ್ಲು ತೂರೋದು', ಎಂಬ ಆಚರಣೆ ಕಂಡ ಯಾರಿಗೆ ಆಗಲಿ ಬೆಸ್ತರು ಬಲೆ ಬೀಸುವ ದೃಶ್ಯ ನೆನಪಾಗುತ್ತೆ. 'ಬಟ್ಲು ತುರೋದು' - ಭತ್ತದ ಬಿತ್ತನೆ ಬೀಜಗಳ ಆಯ್ಕೆಗಾಗಿ ಇರುವ ಗ್ರಾಮೀಣ ಪದ್ಧತಿ. ಭತ್ತದ ಕಾಳು ಗಟ್ಟಿಯಿದ್ದಷ್ಟೂ, ಆರೋಗ್ಯಕರ ಸೂಚಕ ಎಂಬ ಅನುಭವದಡಿ ಈ ಪದ್ಧತಿ ಇಂದಿಗೂ ಜೀವಂತ.

6-7 ಅಡಿ ಎತ್ತರದಲ್ಲಿ ನಿಲ್ಲುವ ಕೃಷಿಕ, ತೂರುವ (ಕೇರುವ) ಮರದಲ್ಲಿ ಭತ್ತವನ್ನು ಹಿಡಿದು, ಬೆಸ್ತರು ಬಲೆ ಬೀಸುವ ರೀತಿ ಬೀಸಿ ಕಾಳುಗಳನ್ನು ವೃತ್ತಾಕಾರದಲ್ಲಿ ಹರಡುವಂತೆ ಮಾಡುತ್ತಾನೆ. ಗಟ್ಟಿ ಕಾಳುಗಳು ವೃತ್ತದ ಅಂಚಿನಲ್ಲಿ ಸಂಗ್ರಹಿತ. ಹೀಗೆ ಸಂಗ್ರಹಿತವಾಗುವ ಬೀಜ ಬಿತ್ತನೆಗೆ ಯೋಗ್ಯ. ಉಳಿದಿದ್ದು ಬಳಕೆ ಮತ್ತು ಮಾರಾಟಕ್ಕೆ.

– ಆನಂದ, ಆ.ಶ್ರೀ.

ದೇಶೀಯ ಹತೋಟಿ ಕ್ರಮಗಳು

ಭತ್ತಕ್ಕೆ ಬೆಂಕಿರೋಗ :

ರೈತನ ಕನಸನ್ನೇ ಸುಟ್ಟು ಬಿಡುವ ಈ ರೋಗ ಶಿಲೀಂಧ್ರದಿಂದ ಆಚೀಚೆ ಹರಡುತ್ತದೆ. ಕೃತಕ ರಾಸಾಯನಿಕ ಗೊಬ್ಬರ ಬಳಸುವವರ ಹೊಲದಲ್ಲಿ ಬೆಂಕಿರೋಗದ ವ್ಯಾಪಕತೆ ಹೆಚ್ಚು ಎನ್ನುವ ಹುಲ್ಯ ಒಬ್ಬ ವನವಾಸಿ ಸಿದ್ದಿ ಜನಾಂಗಕ್ಕೆ ಸೇರಿದವ.

ಹೆಚ್ಚಾಗಿ ಪೇಟೆಯ ಪರಿಚಯವಿರದ ಈ ಜನಾಂಗಕ್ಕೆ ಕಾಡಿನ ನಾಡಿನ ಶಿಕ್ಷಣ ರಕ್ತಗತ. ಯಾವ ಮರ, ಯಾವ ರೋಗಕ್ಕೆ ಮದ್ದಾದೀತು ಎಂಬ ಮಾಹಿತಿ, ಹಿರಿಯರು ಮಾಡುವಾಗ ಕಣ್ಣರಿವಿಗೆ ಲಭ್ಯ. ಹೀಗೆ ಹೇಳುವುದಾದರೆ, ಕವರು (ಕೌಲು) (careya arborea) ಮರದ ಚಕ್ಕೆ (bark) ಬೆಂಕಿರೋಗಕ್ಕೆ ಔಷಧ. ಸುಮಾರು ಒಂ ಎಕರೆಗೆ 2 ಕೆ.ಜಿ. ಯಷ್ಟು ಚಕ್ಕೆಯನ್ನು, ಗದ್ದೆಯ ಹಾಳಿಗೆ ನೀರು ಹೋಗುವ ಜಾಗದಲ್ಲಿ ಹಾಕುತ್ತಾರೆ. ಚಕ್ಕೆಯ, ಔಷಧ ಗುಣ ನೀರಿನ ಮೂಲಕ ಗದ್ದೆಯ ತುಂಬ ವಿಸ್ತರಿಸುವುದರ ಜೊತೆ ಆ ಮುಗ್ಧ ವನವಾಸಿಗಳ ಕನಸಿಗೂ ಹೊಸ ಹೊಸ ಕವಲುಗಳನ್ನು ಮೂಡಿಸುತ್ತವೆ.

ಸುವರ್ಣಗೆಡ್ಡೆ ಕೇವಲ ತರಕಾರಿ ಮಾತ್ರವಲ್ಲ !

'ಗದ್ದೆಗ್ ರೋಗ ರಾಯ್ರೆ' ಕೆಲಸದವ ಆನಂದ, ತೀರ್ಥಹಳ್ಳಿಯ ಸಾವಯವ ಕೃಷಿಕ ಶ್ರೀ ಪುರುಷೋತ್ತಮ ರಾಯರ ತಲೆ ಬಿಸಿ ಹಚ್ಚಿಸಿದ್ದ! ರಾಯರು ಸಾವಯವ ಕೃಷಿಕರು, ಕೃತಕ ರಾಸಾಯನಿಕಗಳು ಬೇಡ ಎನ್ನುವ ಮನೋತತ್ತ್ವ. ಆಚೀಚೆ ಕೇಳಿದ ಪರಿಹಾರ ಸೋಲುವಾಗ, ಆಯುರ್ವೇದ ಗ್ರಂಥಗಳ ಅವಲೋಕನ. ಸುವರ್ಣಗೆಡ್ಡೆ ಈ ಅಧ್ಯಯನದಲ್ಲಿ ಸಿಕ್ಕ ವರ.

ಸ್ವಚಿಂತನೆಯಲ್ಲಿ ಬೆಂಕಿರೋಗಕ್ಕೆ ಜಾರಿಗೆ ತಂದ ಪ್ರಯೋಗ ಈಗ ಎಲ್ಲರನ್ನೂ ಆಕರ್ಷಿಸಿದೆ. ರಾಯರು ತಯಾರಿಸದ ದ್ರಾವಣ ಮತ್ತು ಉಪಯೋಗವನ್ನು ಅವರ ಮಾತಿನಲ್ಲೇ ಓದಿ. 100 ಗ್ರಾಂ. ಸುವರ್ಣಗೆಡ್ಡೆಯನ್ನು ಸಣ್ಣ ತುಂಡು ಮಾಡಿ ಒಂದು ಪಾತ್ರೆಯಲ್ಲಿ ಹಾಕಿ. ಪಾತ್ರೆಗೆ ಒಂದು ಲೀಟರ್ ಕುದಿಯುವ ನೀರನ್ನು ಸುರಿದು 6-8 ತಾಸು ಹಾಗೆ ಬಿಡಿ. ಮರುದಿನ ಪಾತ್ರೆಯಲ್ಲಿರುವ ದ್ರಾವಣವನ್ನು ಸೋಸಿ 10 ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ ಬನ್ನಿ.' ಹುಃಬ್ಬೆರಿಸಿಬೇಡಿ. ಈ ಪದ್ಧತಿಯಿಂದಾಗುವ ಹತೋಟಿಯ ಶೇಕಡಾ ಪ್ರಮಾಣ ಶತಕ ಬಾರಿಸಲೂಬಾರದು.

- ಆನಂದ, ಆ.ಶ್ರೀ.

ಕರೀ ಹೇನು ನಿರ್ವಹಣೆ :

ಗೇರು ಬೀಜದ ಕಾಯಿಯನ್ನು ಚೆನ್ನಾಗಿ ಪುಡಿ ಮಾಡಿ ಒಣಗಿಸಿ. ಒಂದು ಹಳೇ ತಪ್ಪಲೆ (ಪಾತ್ರೆ) ಯಲ್ಲಿ ಕೆಂಪನೆಯ ಕೆಂಡವನ್ನು ಇಡಿ. ಆ ಕೆಂಪನೆಯ ಕೆಂಡದ ಮೇಲೆ ಗೇರು ಬೀಜದ ಪುಡಿಯನ್ನು ಸ್ವಲ್ಪ ಹಾಕಿದರೂ ಸಾಕು. ಆಗ ಬರುವ ಹೊಗೆಯನ್ನು ಕರೀಹೇನು ಹತ್ತಿರುವ ಗಿಡದ ಮೇಲೆ ಹಾಯಿಸಿದರೆ, ಗಿಡಕ್ಕೆ ಕರೀಹೇನು ಬರದಂತೆ ತಡೆಯಬಹುದು. ಇದನ್ನು ಕಡೂರು ತಾಲ್ಲೂಕಿನ, ದೇವನೂರು ಪಕ್ಕದ ಜೋಳನಹಳ್ಳಿ ಗ್ರಾಮದ ರೈತರೊಬ್ಬರು ಕುಂಬಳ ಜಾತಿಯ ಬಳ್ಳಿಗಳಲ್ಲಿ ಕರೀಹೇನು ನಿರ್ವಹಣೆಗಾಗಿ ಬಳಸುತ್ತಿದ್ದಾರೆ.

ಹಾಲುಗಳ್ಳಿ ಪುಡಿ :

ಇದೇರೀತಿ ಮಂಡುಗಳ್ಳಿ ಅಥವಾ ಮೂರು ಮುಖದ ಕಳ್ಳಿ, ಅಥವಾ ಹಾಲುಗಳ್ಳಿ (Cactus) ಯ ಬೀಜ ಅಥವಾ ಟೊಂಗೆಯನ್ನು ಒಣಗಿಸಿ, ಪುಡಿಮಾಡಿ, ಕೆಂಡದ ಮೇಲೆ ಹಾಕಲು ಬರುವ ಹೊಗೆಯನ್ನು ರೋಗ ಬಂದಿರುವ ಭತ್ತದ ಗದ್ದೆ ಅಥವಾ ರಾಗಿ ಹೊಲದ ಮೇಲೆ ಹಾಯಿಸಲು, ಭತ್ತ ಅಥವಾ ರಾಗಿಗೆ ಬರುವ ಹಲವಾರು ರೋಗಗಳನ್ನು ತಡೆಗಟ್ಟಬಹುದು ಎಂಬುದು ಚಳ್ಳಕೆರೆ ತಾಲ್ಲೂಕು ಬೆಳಿಗೆರೆಯ ಕೃಷ್ಣಶಾಸ್ತ್ರಿಗಳ ಅನುಭವ.

'ಕಾಸರಕ ಸೆಗಣಿ'

ಔಷಧಗಳನ್ನಷ್ಟೇ ಹುಳ-ರೋಗಕ್ಕೆ ಬಳಸಿ ನಮಗೆ ಗೊತ್ತು. ಗೊಬ್ಬರದಿಂದಲೂ ಹುಳದ ಉಪಟಳ ತಗ್ಗಿಸುವ ಪ್ರಯತ್ನ ಉತ್ತರ ಕನ್ನಡದಲ್ಲಿ ಒಂದೆಡೆ ಅನೇಕ ದಿನಗಳಿಂದ ಜಾರಿಯಲ್ಲಿದೆ. ನಿಂಬೆ ಮತ್ತು ಎಲಕ್ಕಿ ಗಿಡಗಳಿಗೆ ಕಾಸರಕ (Strychnos nuxvomica) ವನ್ನು ಸೆಗಣಿಯಲ್ಲಿ ಬೆರಸಿ ಮಾಡಿದ ಗೊಬ್ಬರವನ್ನೇ ಉಣಿಸುವುದು. 'ಕಾಸರಕದ ಔಷಧೀಯ ಗುಣದಿಂದ ಗೊಬ್ಬರದ ಮೌಲ್ಯ ಹೆಚ್ಚುವುದರ ಜೊತೆ ಕಾಂಡ ಕೊರೆಯುವ ಹುಳದ ಭಾದೆ ಇಲ್ಲವಾಗುತ್ತದೆ' ಎನ್ನುವ ಉತ್ತರ ಕನ್ನಡದ ಹಿತ್ಲಳ್ಳಿಯ ಹೆಗಡೆ, ಕೃಷಿ ಪದವೀಧರ. ಸ್ವಾವಲಂಬನೆಯ ಮೂಲ ಮಂತ್ರವಾಗಿರುವ ಇಂದಿನ ದಿನದ ಸಾವಯವ ಕೃಷಿಗೆ ಇಂತಹ ಪದ್ಧತಿಗಳು ಎಷ್ಟಿದ್ದರೂ ಬೇಕು ತಾನೇ?

-ಮೋ.ರಾ. ಕೃಪಾಶಂಕರ್

ಭತ್ತದ ಎಲೆಸುರಳಿ ರೋಗಕ್ಕೆ :

ಕುದಿಯುವ 10 ಲೀಟರ್ ನೀರಿಗೆ, ಒಂದು ಕೆ.ಜಿ. ಕತ್ತಾಳೆ (Agave sisalana) ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೆ ಬಿಟ್ಟು ಬಿಡಿ. ಮರುದಿನ ಸೋಸಿ ಬರುವ ಮೂಲ ದ್ರಾವಣಕ್ಕೆ ಲೀಟರ್‌ಗೆ ಹತ್ತು ಲೀಟರ್‌ನಂತೆ ನೀರನ್ನು ಬೆರಸಿ ಸಿಂಪಡಿಸಿ ಎನ್ನುತ್ತಾರೆ ತೀರ್ಥಹಳ್ಳಿಯ ಶ್ರೀ ಪುರುಷೋತ್ತಮ ರಾವ್.

- ಬಿ.ಎ. ಅನಿಲ್ ಕೌಶಿಕ್.

ಕಾಂಡ ಕೊರೆಯುವ ಹುಳ (ಕುರುವಾಯ್) ತಡೆಯಲು :

ಸುಳ್ಯದ ಸಾವಯವ ಕೃಷಿಕ, ಶ್ರೀನಿವಾಸ ಪೈಲೂರ್ ತೆಂಗಿನ ಮರಕ್ಕೆ ಅಸಾಧ್ಯ ಕಾಟಕೊಡುವ ಈ ಪೀಡೆಗೆ ಹಲವು ಪ್ರಭಾವ ಶಾಲಿ ಮಾರ್ಗೋಪಾಯಗಳನ್ನು ಕಂಡುಕೊಂಡಿರುವರು. ಅವುಗಳೆಂದರೆ:

ಅ) ಕೆಂಡ ಸಂಪಿಗೆ ಮರವನ್ನು ತೆಂಗಿನ ಮರಗಳ ಹತ್ತಿರ ಬೆಳೆಸಿದರೆ ಅದರ ಹೂ ವಾಸನೆಗೆ ಈ ಕುರುವಾಯ್ ಸುಳಿಯದಂತೆ. ಇದು ಇನ್ನಿತರ ಸುಳ್ಯದ ರೈತರ ಅನುಭವವೂ ಹೌದು.

ಆ) ನೆಲಗಡಲೆ ಹಿಂಡಿ ಅಥವಾ ಹರಳೆಣ್ಣೆ ತೆಗೆಯುವಾಗ ಸಿಗುವ ಮಡ್ಡಿ ತ್ಯಾಜ್ಯವನ್ನು ನೀರಿನಲ್ಲಿ ಹಾಕಿ ಒಂದು ವಾರ ಕಾಲ ಕೊಳೆಸಿ ನಂತರ ಅದಕ್ಕೆ ಅಷ್ಟೇ ಪ್ರಮಾಣದ ಸಗಣಿಯನ್ನು ಸೇರಿಸಿ ಮಿಶ್ರಣಮಾಡಿ, ದಪ್ಪ ಪಾಯಸದಂತೆ ಮಾಡಿ ಒಂದು ಮಡಿಕೆಯಲ್ಲಿ ಹಾಕಿಡಬೇಕು. ಇದು ತಡೆಯಲು ಅಸಾಧ್ಯವಾದಷ್ಟು ಗಬ್ಬುವಾಸನೆ ಬರುವಂತಿರುತ್ತದೆ. ಈ ಮಡಿಕೆಯನ್ನು ತೆಂಗಿನ ಮರಗಳ ಮಧ್ಯೆ 50 ಮೀಟರ್ ಅಂತರದಲ್ಲಿ ಭೂಮಿಯ ಮಟ್ಟಕ್ಕೆ ಸಮನಾಗಿರುವಂತೆ ಹುಗಿದಿಡಬೇಕು. ಅದಕ್ಕೆ ನೀರು, ಬಿಸಿಲು ಬೀಳದಂತೆ ಎರಡು ಕಲ್ಲುಗಳ ಓರೆ ಗೋಡೆಮಾಡಿ, ಮೇಲೆ ಹಂಚೊಂದನ್ನು ಇಟ್ಟರೆ, ಇದರ ವಾಸನೆಗೆ ಆಕರ್ಷಿತವಾಗಿ ಕುರುವಾಯ್ ಬಂದು, ಇದರೊಳಗೆ ಬಿದ್ದು ಸಾಯುವಂತಾಗುತ್ತದೆ.

(11ನೇ ಪುಟಕ್ಕೆ)

ಸಾವಯವ ಕೃಷಿ

ಇಂದಿನ ಪರಿಸ್ಥಿತಿಯಲ್ಲಿ ಸಾವಯವ ಕೃಷಿಯ ಮಹತ್ವ

ಡಾ. ಜಿ.ಕೆ. ವೀರೇಶ್, ಉಪಕುಲಪತಿಗಳು, ಕೃ.ವಿ.ವಿ., ಬೆಂಗಳೂರು.

ಸಾವಯವ ಕೃಷಿ ಬಗ್ಗೆ ಮಾತು, ಚರ್ಚೆ ಈಗ ಎಲ್ಲೆಡೆ ನಡೆಯುತ್ತಿದೆ. ಪಶ್ಚಿಮದ ಸಿರಿವಂತ ರಾಷ್ಟ್ರಗಳಲ್ಲಂತೂ ಸಾವಯವ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಅಪಾರವಾಗಿ ಏರುತ್ತಿದೆ. ಈ ಬಗ್ಗೆ ಹಲವು ಗಣ್ಯರ, ಸಂಸ್ಥೆಗಳ ಅಭಿಪ್ರಾಯ ಮತ್ತು ಚರ್ಚೆ, ರೈತರ ಸಾಹಸಗಳ ಬಗ್ಗೆ ಕೆಲ ಲೇಖನಗಳನ್ನು ಈ ಮುಂದಿಡಲಾಗಿದೆ. ಅಂತಿಮವಾಗಿ ಸಾವಯವ ಕೃಷಿ ಉತ್ಪನ್ನಗಳ ರಫ್ತಿನ ಬಗ್ಗೆ ಎಚ್ಚರಿಕೆಯ ಮಾತೊಂದನ್ನು ಕೊಡಲಾಗಿದೆ.

ಇಂದು ಕರ್ನಾಟಕ ರಾಜ್ಯದ ಹಲವೆಡೆ ರೈತರು ಈ ಸಾವಯವ ಕೃಷಿಯನ್ನು ಅನುಸರಿಸುತ್ತಿರುವರು. ಆದರೆ ಈ ರೈತರು ಅನುಸರಿಸುತ್ತಿರುವ ಸಾವಯವ ಬೇಸಾಯ ಒಂದು ನಿರ್ದಿಷ್ಟ ತಾಂತ್ರಿಕ ಶಿಫಾರಸ್ಸುಗಳು ಅಥವಾ ಮಾರ್ಗದರ್ಶನಗಳ ಅಡಿಯಲ್ಲಿ ನಡೆಯುತ್ತಿಲ್ಲ ಮತ್ತು ಇವರು ಬೆಳೆದ ಉತ್ಪನ್ನಗಳಿಗೆ ಪಶ್ಚಿಮದ ರಾಷ್ಟ್ರಗಳಲ್ಲಿ ದೊರೆಯುತ್ತಿರುವಂತೆ ಅಧಿಕ ಬೆಲೆ ಏನೂ ದೊರೆಯುತ್ತಿಲ್ಲ.

ಈ ಸಾವಯವ ಕೃಷಿ ಅಥವಾ ನೈಸರ್ಗಿಕ ಕೃಷಿ ಎಂಬುದು ಮಾನವ, ಬೇಸಾಯ ವೃತ್ತಿಯನ್ನು ಪ್ರಾರಂಭಿಸಿದ ದಿನದಿಂದಲೇ ವಾಡಿಕೆಯಲ್ಲಿತ್ತೆನ್ನಬಹುದು. ಆದರೆ ಈ ಕೃತಕ ರಾಸಾಯನಿಕ ಗೊಬ್ಬರಗಳು ಮತ್ತು ಪೀಡೆನಾಶಕಗಳ ಆವಿಷ್ಕಾರವಾಗಿ ಅವುಗಳ ಬಳಕೆಯಿಂದ ನಮ್ಮ ಕೃಷಿ ಇಳುವರಿ ಏನೋ ಏರುತ್ತಾ ಬಂದರೂ, ಮಣ್ಣಿನ ಫಲವತ್ತತೆ ನಾಶವಾಗಿ, ಅಲ್ಲಿ ಜೀವಜಂತುಗಳು ನಶಿಸುವಂತಾಗುವುದು, ಪೀಡೆ , ರೋಗಗಳು ಅಧಿಕವಾಗುವುದು ಇವೇ ಸಮಸ್ಯೆಗಳು ತಲೆದೋರತೊಡಗಿದವು. ಈ ರಾಸಾಯನಿಕ ಗೊಬ್ಬರ, ಪೀಡೆನಾಶಕಗಳು ಮತ್ತು ಸಂಕರಣ ತಳಿಗಳಿಂದ ನಮ್ಮ ಆಹಾರದ ಕೊರತೆ ಬಹುಮಟ್ಟಿಗೆ ನೀಗುವಂತಾಗಿ, ಹಸಿರುಕ್ರಾಂತಿಗೆ ನಾಂದಿಯಾಗುವಂತಾದರೂ ಕೂಡ ಮಣ್ಣಿನ ಫಲವತ್ತತೆಯ ನಾಶ ಮತ್ತು ಪರಿಸರ ಮಾಲಿನ್ಯಗಳಿಂದಾಗಿ ಇದು ಅಧಿಕ ಚಿಂತೆಗೆ ದಾರಿ ಮಾಡಿಕೊಟ್ಟಿತ್ತು.

ನಮ್ಮ ಭೂಮಿಯು ಸಚೇತನವೂ, ಸಜೀವವೂ ಆಗಿದ್ದು, ಇದರ ಫಲವತ್ತತೆಯನ್ನು ವೃದ್ಧಿಸುವಲ್ಲಿ ಈ ಸಾವಯವ ವಸ್ತುಗಳ ಪಾತ್ರ, ಅತ್ಯಂತ ಮಹತ್ವದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಸಾಕಷ್ಟು ಸಾವಯವವಸ್ತುಗಳನ್ನು ಭೂಮಿಯಲ್ಲಿ ಸೇರಿಸುವತ್ತ ನಾವು ಯೋಚಿಸಬೇಕಾಗಿದೆ. ಇದರಿಂದ ಮಣ್ಣಿನ ಭೌತಿಕ ರಚನೆ, ನೀರು ಹಿಡಿದಿಡುವ ಸಾಮರ್ಥ್ಯ ಹಾಗೇ ಭೂಮಿ- ಯೊಳಗಿನ ಜೀವ ವಿವಿಧತೆಗಳೆಲ್ಲವೂ ವೃದ್ಧಿಯಾಗುವಂತಾಗುತ್ತದೆ. ಇದರಿಂದ ಸಸ್ಯಗಳು ಬರ, ಚಳಿಗಳಂತಹ ತೀವ್ರ ಒತ್ತಡಗಳನ್ನು ಸಹಿಸುವ ಶಕ್ತಿ ಪಡೆಯುವಂತಾಗುತ್ತವೆ. ಮೊದಲಿನ ವರ್ಷಗಳಂತೆ ಜಾನುವಾರುಗಳಿಂದ ನಮ್ಮ ಕೃಷಿಗೆ ದೊರೆಯುತ್ತಿರುವ ಕೊಟ್ಟಿಗೆ ಗೊಬ್ಬರದ ಪ್ರಮಾಣ ಈಗ ಕಡಿಮೆಯಾಗುತ್ತಾ ಬಂದಿರುವುದೂ ಸಾವಯವ ಕೃಷಿಗೆ ಒಂದು ದೊಡ್ಡ ತೊಡಕಾಗಿದೆ.

ಎಂಬತ್ತರ ದಶಕದ ನಂತರ ನಮ್ಮ ರಾಜ್ಯದ ಆಹಾರ ಬೆಳೆಗಳ ಉತ್ಪಾದನೆ ಕುಂಠಿತವಾಗಲು ಮುಖ್ಯಕಾರಣವೆಂದರೆ ಸಾವಯವ ಗೊಬ್ಬರಗಳನ್ನು ಕಡೆಗಣಿಸಿ ರಾಸಾಯನಿಕ ಗೊಬ್ಬರಗಳನ್ನು ಸತತವಾಗಿ ಬಳಸಿರುವುದರಿಂದ ಮಣ್ಣಿನ ಫಲವತ್ತತೆ ನಶಿಸುವಂತಾಗಿರುವುದು ಎಂಬುದಾಗಿ ಹಲವು ಅಧ್ಯಯನಗಳಿಂದ ತಿಳಿದು ಬಂದಿರುತ್ತದೆ.

ಸಾವಯವ ಬೇಸಾಯದಲ್ಲಿ ಮಿಶ್ರ ಬೇಸಾಯ, ಬೆಳೆ ಪರ್ಯಾಯಗಳೂ ಮುಖ್ಯ ಪಾತ್ರವಹಿಸಲಿವೆ. ಉದಾಹರಣೆಗೆ ಕಬ್ಬಿನೊಡನೆ ಮಿಶ್ರ ಬೆಳೆಯಾಗಿ ಫ್ರೆಂಚ್ ಬೀನ್ಸ್ ಅಥವಾ ಸೋಯಾ ಅವರೆಯಂತಹ ದ್ವಿದಳ ಧಾನ್ಯಗಳ ಬೆಳೆ ತೆಗೆಯುವುದರಿಂದ, ಭೂಮಿಯ ಫಲವತ್ತತೆ ಅಧಿಕವಾಗಿ, ಕಬ್ಬಿನ ಇಳುವರಿ ಶೇ. 10ರಷ್ಟು ಹೆಚ್ಚಾಗಿರುವುದು ತಿಳಿದು ಬಂದಿರುತ್ತದೆ. ಜೊತೆಗೆ ವ್ಯವಸ್ಥಿತ ರೀತಿಯಲ್ಲಿ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಿ, ಉಪಯೋಗಿಸುವುದೂ ಸಾವಯವ ಕೃಷಿಯಲ್ಲಿ ಬಹಳ ಮುಖ್ಯವಾಗಿರುತ್ತದೆ. ಆದರೆ ಈ ನಿಟ್ಟಿನಲ್ಲಿ ಎದುರಾಗುವ ದೊಡ್ಡ ತೊಡಕೆಂದರೆ ಸಾಕಷ್ಟು ಪ್ರಮಾಣದಲ್ಲಿ ಸಾವಯವ ಪದಾರ್ಥಗಳು ದೊರೆಯದೇ ಇರುವುದು ಎನ್ನಬಹುದು. ಇದಕ್ಕೆ, ಅರಣ್ಯ ಕೃಷಿ, ಹಸಿರೆಲೆಗೊಬ್ಬರದ ಮರಗಿಡಗಳನ್ನು ಬೆಳೆಸುವುದು, ದ್ವಿದಳ ಧಾನ್ಯದ ಬೆಳೆಗಳನ್ನು ಮಿಶ್ರ ಬೆಳೆಗಳಾಗಿ ಬೆಳೆಸುವುದು, ಗೃಹ ಬಳಕೆ ಮತ್ತು ಬೇಸಾಯದಿಂದ ಬಂದಂತಹ ತ್ಯಾಜ್ಯ ವಸ್ತುಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವುದರತ್ತ ನಮ್ಮ ರೈತರಿಂದು ಅವಶ್ಯಕವಾಗಿ ಯೋಚಿಸಬೇಕಾಗಿದೆ. ಕೊಟ್ಟಿಗೆ ಗೊಬ್ಬರ, ಕೋಳಿ ಗೊಬ್ಬರ ಮತ್ತು ಸಾವಯವ ಪದಾರ್ಥಗಳನ್ನು ಸಮ ಪ್ರಮಾಣದಲ್ಲಿ ಬಳಸಿ, ಸರಿಯಾದ ತೇವ ಮತ್ತು ಶಾಖಾಂಶಗಳಿರುವಂತೆ ನೋಡಿಕೊಂಡು ತಯಾರಿಸಿದ ಕಾಂಪೋಸ್ಟ್ ಗೊಬ್ಬರ ವಿವಿಧ ಬೆಳೆಗಳಿಗೆ ನಾಟಿ ಸಮಯದಲ್ಲಿ ನೀಡಬಹುದಾಗಿರುವ ಒಂದು ಉತ್ತಮ ಸಾವಯವ ಗೊಬ್ಬರವಾಗಿರುತ್ತದೆ.

ಇತ್ತೀಚಿಗಿನ ದಿವಸಗಳಲ್ಲಿ ನಮ್ಮ ಸರ್ಕಾರದ ವತಿಯಿಂದ ಈ ಸಾವಯವ ಕೃಷಿ ಬಗ್ಗೆ ಪ್ರೋತ್ಸಾಹದಾಯಕ ಧೋರಣೆ ಕಂಡು ಬರುತ್ತಿದೆ. ಈ ನಿಟ್ಟಿನಲ್ಲಿ ಚರ್ಚೆ, ವಿಚಾರ ಸಂಕಿರಣ, ತರಬೇತಿ ಕಾರ್ಯಕ್ರಮಗಳನ್ನು ಹಲವು ಸಂಸ್ಥೆಗಳು ಏರ್ಪಡಿಸುತ್ತಿವೆ. ವಿದೇಶಗಳಿಂದ ಸಾವಯವ ಉತ್ಪನ್ನಗಳಿಗೆ, ಸಾವಯವ ಹಿನ್ನೆಲೆಯಲ್ಲಿ ಬೆಳೆದ ಕಾಫಿ, ಟೀಗಳಿಗೆ ಅಪಾರ ಬೇಡಿಕೆ ಬರುತ್ತಿದೆ. ಸಾವಯವ ಕೃಷಿ ಈ ರೀತಿಯ ತೋಟಗಾರಿಕಾ ಬೆಳೆಗಳಲ್ಲಿ, ನೆರಳಿನ ವಾತಾವರಣದಲ್ಲಿ ನಡೆಸಲು ಅತ್ಯಂತ ಸೂಕ್ತವಾಗಿ ಕಂಡುಬಂದಿದೆ. ಆದರೆ ಒಣಬೇಸಾಯ ಪದ್ಧತಿಯಲ್ಲಿ ಇದು ಸ್ವಲ್ಪ ಕಷ್ಟವಾಗಿದ್ದು, ಈ ಬಗ್ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಸಂಶೋಧನೆ ನಡೆಸುತ್ತಿದೆ. ಈ ಎಲ್ಲಾ ವಿಚಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಮುಂದಿನ ಅಕ್ಟೋಬರ್ 9 ರಿಂದ 11ರವರೆಗೆ ಸಾವಯವ ಕೃಷಿ ಬಗ್ಗೆ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಲು ನಿರ್ಧರಿಸಿದೆ. ಅದೇ ರೀತಿ 1997ರ ಹೊತ್ತಿಗೆ ಒಂದು ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಬಗ್ಗೆಯೂ ಯೋಜಿಸಲಾಗಿದೆ. ಇವುಗಳಿಂದ ನಮ್ಮ ರೈತ ಸಮುದಾಯಕ್ಕೆ ಸಾವಯವ ಕೃಷಿಕೈಗೊಳ್ಳಲು ಸೂಕ್ತ ಮಾರ್ಗದರ್ಶನ ನೀಡಲೂ, ಹಾಗೆ ವಿಜ್ಞಾನಿ ಸಮುದಾಯ ಈ ನಿಟ್ಟಿನಲ್ಲಿ ಹೆಚ್ಚು ತೊಡಗುವಂತಾಗಲು ಸಹಕಾರಿಯಾಗುತ್ತದೆ ಎಂದು ಹಾರೈಸಲಾಗಿದೆ.

ಸಾವಯವ ಕೃಷಿ : ನಿಯಮ ಮತ್ತು ಮಾರ್ಗಸೂಚಿ

ಟಿ.ಎಸ್. ಪ್ರಕಾಶ್

ಸಾವಯವ ಕೃಷಿ ಉತ್ಪನ್ನಗಳ ಬಗ್ಗೆ ಆಸಕ್ತಿ, ಬೇಡಿಕೆ ಈಗ ಪಶ್ಚಿಮದ ರಾಷ್ಟ್ರಗಳಲ್ಲಿ ಅಪಾರವಾಗಿ ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ವಿಶ್ವ ಮಟ್ಟದಲ್ಲಿ ಸಾವಯವ ಕೃಷಿ ಆಂದೋಳನವನ್ನು ಗಟ್ಟಿಮಾಡಿ, ಆ ಬಗ್ಗೆ ಜ್ಞಾನದ ವಿನಿಮಯ ನಡೆಸಿ, ರಾಸಾಯನಿಕಗಳ ಅಪಾಯದಿಂದ ಮುಕ್ತವಾದಂತಹ 'ಸಾವಯವ ಕೃಷಿ ಉತ್ಪನ್ನ ಮತ್ತು ಆಹಾರಗಳನ್ನು' ವಿಶ್ವಜನಾಂಗಕ್ಕೆ (ಮುಖ್ಯವಾಗಿ ಪಶ್ಚಿಮದ ಸಿರಿವಂತ ಜನಾಂಗಕ್ಕೆ?) ಪೂರೈಕೆಯಾಗುವಂತೆ ಭರವಸೆ ಹುಟ್ಟಿಸಲು 'ಸಾವಯವ ಕೃಷಿ ಆಂದೋಳನದ ಅಂತರ ರಾಷ್ಟ್ರೀಯ ಮಟ್ಟದ ಸಂಘಟನೆ' (International Federation of Organic Agriculture Movement) ಅಥವಾ IFOAM ಪಶ್ಚಿಮ ಜರ್ಮನಿಯಲ್ಲಿ ಜನ್ಮ ತಾಳಿರುತ್ತದೆ. ಸಾವಯವ ಕೃಷಿ ಮತ್ತು ಅಂತಹ ಉತ್ಪನ್ನಗಳ ಗುಣಮಟ್ಟಗಳನ್ನು ಕಾಯ್ದೆ, ಕಾನೂನುಗಳ ಚೌಕಟ್ಟಿನೊಳಗೆ ನಿರ್ಧರಿಸುವಂತಾಗಲು ಸಹಕರಿಸುವುದೇ ಇದರ ಮುಖ್ಯ ಗುರಿಯಾಗಿರುತ್ತದೆ. ಇದು ಮೂಲತಃ ರೈತರು, ಸಂಸ್ಕರಣಕಾರರು, ವ್ಯಾಪಾರಸ್ಥರಿಂದ ಕೂಡಿದ್ದು ಸಾವಯವ ಕೃಷಿ ಬಗ್ಗೆ ಸಂಶೋಧನೆ, ತರಬೇತಿ ನೀಡುವ ವ್ಯಕ್ತಿ ಮತ್ತು ಸಂಸ್ಥೆಗಳ ಜಾಗತಿಕ ಸಂಘಟನೆಯಾಗಿ ಹಾಗೇ ವಿವಿಧ ದೇಶಗಳ ಸರ್ಕಾರಗಳಿಂದ ವಿಶ್ವಸಂಸ್ಥೆವರೆಗೆ, ಸಾವಯವ ಕೃಷಿ ಬಗ್ಗೆ ಸಲಹೆ, ಸೂಚನೆ ನೀಡುತ್ತಾ ಆ ನಿಟ್ಟಿನಲ್ಲಿ ವ್ಯವಹರಿಸುವ ಶಕ್ತಿ ಪಡೆದಿರುತ್ತದೆ. ಅಂದಮೇಲೆ ಸಾವಯವ ಕೃಷಿಯಲ್ಲಿ ಆಸಕ್ತರಾದ ರೈತರು, ವಿಜ್ಞಾನಿಗಳು, ಆಯೋಜಕರಿಂದ ಹಿಡಿದು, ಸಾಮಾನ್ಯ ಗ್ರಾಹಕರು ಈ ಸಂಘಟನೆಯ ದೃಷ್ಟಿಕೋನವನ್ನು ಅರಿಯುವುದು ಅತ್ಯಗತ್ಯವಾಗಿರುತ್ತದೆ.

ಈ ವಿಶ್ವಸಂಘಟನೆಯ ರೀತ್ಯ, ಸಾವಯವ ಕೃಷಿಯ ಮೂಲ ಉದ್ದೇಶಗಳೆಂದರೆ,

1. ಪೌಷ್ಟಿಕತೆ ದೃಷ್ಟಿಯಿಂದ ಅತ್ಯುನ್ನತ ಮಟ್ಟದ ಆಹಾರವನ್ನು ಅಗತ್ಯವಿರುವಷ್ಟು ಪ್ರಮಾಣದಲ್ಲಿ ಉತ್ಪಾದಿಸುವುದು.
2. ಪ್ರಕೃತಿಯ ಸಮಗ್ರ ರಚನೆ ಮತ್ತು 'ನಿಸರ್ಗ ಚಕ್ರ' ಗಳೊಡನೆ ರಚನಾತ್ಮಕವಾಗಿ ಮತ್ತು ಜೀವ ಚೇತನವಾಗುವ ರೀತಿಯಲ್ಲಿ ವ್ಯವಹರಿಸುವುದು.
3. ಕೃಷಿ ವ್ಯವಸ್ಥೆಯೊಳಗೆ, ಸೂಕ್ಷ್ಮ ಜೀವಿಗಳು ಮಣ್ಣಿನ ಜೀವಜಂತುಗಳು, ಸಸ್ಯಗಳು ಮತ್ತು ಪ್ರಾಣಿಗಳನ್ನು ಒಳಗೊಂಡಂತೆ 'ಜೈವಿಕ ಚಕ್ರ' (Biological Cycle) ವನ್ನು ಪ್ರೋತ್ಸಾಹಿಸುವುದು ಮತ್ತು ಅಧಿಕಗೊಳಿಸುವುದು.
4. ಮಣ್ಣಿನ ದೀರ್ಘಾವಧಿ ಫಲವತ್ತತೆಯನ್ನು ಉಳಿಸಿ, ಬೆಳೆಸುವುದು.
5. ಸಾಧ್ಯವಾದಷ್ಟು ಮಟ್ಟಿಗೆ ಸಾವಯವ ವಸ್ತುಗಳು ಮತ್ತು ಪೋಷಕಾಂಶಗಳಿಗಾಗಿ ಬಾಹ್ಯ ಅವಲಂಬನೆಯನ್ನು ಕಡಿಮೆ ಮಾಡುವುದು.
6. ಕೃಷಿಜನ್ಯವಸ್ತುಗಳು, ಸಾವಯವ ಪದಾರ್ಥಗಳ ಪುನರ್ ಉಪಯೋಗದಿಂದ ಸಾಧ್ಯವಿರುವಷ್ಟರ ಮಟ್ಟಿಗೆ ಕೃಷಿ ನಡೆಸುವುದು.
7. ಕೃಷಿಯಿಂದ ಯಾವುದೇ ತರಹದ ಮಾಲಿನ್ಯ (ಆಹಾರ, ಗಾಳಿ, ನೀರು ಮತ್ತು ಪರಿಸರ) ನಡೆಯದಂತೆ ನಿಗಾವಹಿಸಿ, ಇದನ್ನು ತಡೆಗಟ್ಟುವ ಮತ್ತು ಕಡಿತಗೊಳಿಸುವ ಎಲ್ಲಾ ಕ್ರಮ ಕೈಗೊಳ್ಳುವುದು.
8. ಎಲ್ಲಾ ಸಸ್ಯ ಮತ್ತು ಪ್ರಾಣಿಗಳಿಂದ, ಕೃಷಿ ವ್ಯವಸ್ಥೆಯೊಳಗಿನ ಮತ್ತು ಸುತ್ತಮುತ್ತಲಿನ ಪರಿಸರದ ಜೀವ ವೈವಿಧ್ಯತೆಯನ್ನು ಉಳಿಸಿ ಬೆಳೆಸುವಂತೆ ಕೃಷಿ ನಡೆಸುವುದು.
9. ರೈತರಿಗೆ ಈ ರೀತಿಯ ಸಾವಯವ ಕೃಷಿಯಿಂದ, ವಿಶ್ವಸಂಸ್ಥೆ ಘೋಷಿಸಿರುವ 'ಮಾನವ ಹಕ್ಕಿ'ನ ರೀತ್ಯದ ಬದುಕು ನಡೆಸಲು, ಅವರ ಮೂಲಭೂತ ಅಗತ್ಯಗಳು ಪೂರೈಸುವಂತಾಗಲು, ಸಾಕಷ್ಟು ಆದಾಯ ಮತ್ತು ತೃಪ್ತಿ ದೊರೆಯುವಂತಿರಬೇಕು ಹಾಗೂ ಹಿತಕರವಾದಂತಹ ದುಡಿಮೆಯ ಪರಿಸರ ಸಿಗುವಂತಾಗಬೇಕು.
10. ಈ ಕೃಷಿ ವ್ಯವಸ್ಥೆಯು ಸಮಗ್ರವಾಗಿ ಸಾಮಾಜಿಕ ಮತ್ತು ಪರಿಸರ ಪರಿಣಾಮಗಳನ್ನು ಗಮನಿಸುವಂತಾಗಬೇಕು.

ಸಾವಯವಕೃಷಿಯಲ್ಲಿ ಜಾನುವಾರುಗಳ ಸಹಜ ವರ್ತನೆ ಮತ್ತು ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆ ಬಾರದ ರೀತಿಯಲ್ಲಿ ಅವುಗಳನ್ನು ಬೆಳೆಸಿ, ಕೃಷಿ ಮತ್ತು ಪಶುಪಾಲನೆಯಲ್ಲಿ ಬಳಸಬೇಕಾಗುತ್ತದೆ.

ಈ ದೃಷ್ಟಿಯಿಂದ ನೋಡಿದಾಗ, ಕೃತಕವಾಗಿ ತಯಾರಿಸಿದ ರಸಗೊಬ್ಬರ, ರಾಸಾಯನಿಕ ಔಷಧಿಗಳಾಗಲೀ, ಪ್ರಾಣಿ, ಪಶು, ಸಸ್ಯ ಮತ್ತು ಅವುಗಳ ಉತ್ಪನ್ನಗಳ ಬೆಳವಣಿಗೆಯನ್ನು ಒತ್ತಡದಿಂದ ಹೆಚ್ಚಿಸುವುದಾಗಲೀ, ಉದ್ದಿಮೆ ರೀತಿಯಲ್ಲಿ ಕೃಷಿ ಉತ್ಪಾದನೆಯಾಗಲೀ, ಜೀನ್‌ಗಳ ಸಂಕಿರಣ ಅಥವಾ ಜೈವಿಕ ತಂತ್ರಜ್ಞಾನಗಳಾಗಲೀ ಸಾವಯವ ಕೃಷಿಗೆ ಹೊಂದಿಕೆಯಾಗಲಾರವು ಎಂಬುದನ್ನು ಈ ವಿಶ್ವಸಂಘಟನೆ ಇತ್ತೀಚೆಗೆ ಹೊರ ತಂದಿರುವ 'ಸಾವಯವ ಕೃಷಿ ನಿಯಮ ಮತ್ತು ಮಾರ್ಗಸೂಚಿ ಯಲ್ಲಿ' ತಿಳಿಸಲಾಗಿದೆ.

ಪ್ರತೀ ರಾಷ್ಟ್ರವೂ ಈ ಮಾರ್ಗಸೂಚಿಯ ಚೌಕಟ್ಟನ್ನು ಆಧಾರವಾಗಿಟ್ಟುಕೊಂಡು ತಮ್ಮ ಪರಿಸರಕ್ಕೆ ಹೊಂದುವಂತೆ ಸಾವಯವ ಕೃಷಿ ಮಾನದಂಡ ಗಳನ್ನು ರೂಪಿಸಬೇಕು. ಈ ಮಾನದಂಡಗಳನ್ನು ಅಳವಡಿಸಲು ಎಲ್ಲೆಲ್ಲಿ ಅಸಾಧ್ಯವಾಗುತ್ತದೆಯೋ, ಅಲ್ಲಿ ಆ ಬಗ್ಗೆ ಸ್ಪಷ್ಟವಾಗಿ ನಮೂದಿಸಿರಬೇಕೆಂದು ಒತ್ತಿ ಹೇಳಲಾಗಿದೆ. ಈ ಮಾನದಂಡದ ಉದ್ದೇಶ, ಶಿಫಾರಸ್ಸುಗಳು ಮತ್ತು ಈ ನಿಟ್ಟಿನಲ್ಲಿ ಕನಿಷ್ಠ ಅಗತ್ಯವೇನೆಂದು ವಿವರವಾಗಿ ತಿಳಿಸಲಾಗಿದೆ.

1. ಸಾವಯವ ಕೃಷಿಗೆ ಪರಿವರ್ತನೆ :

ಸದ್ಯದ ಕೃಷಿ ಪದ್ಧತಿಯಿಂದ ಸಾವಯವ ಕೃಷಿಗೆ ಪರಿವರ್ತನೆ ಹೊಂದಬೇಕಾದ ರೀತಿ, ಅದಕ್ಕೆ ಕ್ರಮಿಸಬೇಕಾದ ಸಮಯಗಳ ಬಗ್ಗೆ ವಿವರವಾದ ಮಾರ್ಗಸೂಚಿ ಮತ್ತು ಮಾನದಂಡ ನೀಡಲಾಗಿದೆ. ಸಾಧಾರಣವಾಗಿ ಹಂತಹಂತವಾಗಿ ಅಥವಾ ಒಮ್ಮೆಲೇ ಇಡೀ ಫಾರಂ ಸಾವಯವ ಕೃಷಿಗೆ ಪರಿವರ್ತನೆ ಹೊಂದಲು ಅವಕಾಶವಿದೆ. ಮೊಟ್ಟೆ ಮತ್ತು ಹಾಲು ಉತ್ಪಾದನೆಗೆ ಒಂದು ತಿಂಗಳ ಅವಧಿ ಇದ್ದರೆ, ಬೇರೆ ಉತ್ಪನ್ನಗಳಿಗೆ ಒಂದು ವರ್ಷ ಅಥವಾ ಒಂದು ಆವೃತ (Rotation) ಸಮಯವಿರುತ್ತದೆ.

2. ಕೃಷಿ ಉತ್ಪಾದನೆ ರೀತಿ :

ಸಾವಯವ ಕೃಷಿ ಉತ್ಪಾದನೆಯಲ್ಲಿ ಯಾವುದೇ ರೀತಿಯ ಮಾಲಿನ್ಯವಾಗದಂತೆ, ಭೂಮಿಯ ಫಲವತ್ತತೆ ನಾಶವಾಗದಂತೆ, ಸ್ಥಳೀಯ ಪರಿಸರಕ್ಕೆ ಹೊಂದಿಕೆಯಾಗುವಂತಹ, ರೋಗ ನಿರೋಧಕ ಶಕ್ತಿ ಇರುವ ತಳಿಗಳನ್ನು ಆಯ್ಕೆ ಮಾಡುವಂತೆ ಮತ್ತು ಜೀವವೈವಿಧ್ಯತೆ ಕಾಪಾಡುವಂತೆ ಶಿಫಾರಸ್ಸು ಮಾಡಲಾಗಿದೆ. ಹಾಗೇ, 'ಬೆಳೆ ಸರದಿ (Crop Rotation) ಗೆ ಸಾವಯವ ಕೃಷಿಯಲ್ಲಿ ಹೆಚ್ಚು ಒತ್ತು ಕೊಡಲಾಗಿದೆ. ಬೆಳೆ ಸರದಿಯನ್ನು ಮುಖ್ಯವಾಗಿ ಭೂಮಿಯ ಫಲವತ್ತತೆ

ಈ ನಿಟ್ಟಿನಲ್ಲಿ ಕೃಷಿ ತ್ಯಾಜ್ಯಗಳನ್ನು ಉರಿಸುವುದಾಗಲೀ, ಜೈವಿಕವಾಗಿ ಮಾರ್ಪಾಡು ಮಾಡಿದ (Genetically Modified) ಬೀಜಗಳನ್ನಾಗಲೀ ಅಥವಾ ಜೈವಿಕವಾಗಿ ಸಂಕರಣ (Transgene) ಗೊಳಿಸಿದ ಸಸ್ಯಗಳನ್ನಾಗಲೀ ಬಳಸುವುದನ್ನು ನಿಷೇಧಿಸ ಲಾಗಿದೆ.

ಹೆಚ್ಚಿಸಲು, ನೈಟ್ರೇಟ್ ಪೋಷಕಾಂಶ ಕೊಚ್ಚಿ ಹೋಗುವುದನ್ನು ತಡೆಗಟ್ಟಲು ಮತ್ತು ಕಳೆ, ಪೀಡೆ, ಕೀಟಗಳ ಹಾವಳಿಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಶಿಫಾರಸ್ಸು ಮಾಡಲಾಗಿದೆ.

3. ಸಸ್ಯ ಪೋಷಕಾಂಶಗಳ ನಿರ್ವಹಣೆ :

ಇನ್ನು ಸಸ್ಯ ಪೋಷಕಾಂಶಗಳ ಬಗ್ಗೆ ಸ್ಪಷ್ಟವಾದ ಒಂದು ಗೊಬ್ಬರದ ನೀತಿ (Manurial Policy) ಯನ್ನು ಈ ಕಾರ್ಯ ಸೂಚಿಯಲ್ಲಿ ತಿಳಿಸಲಾಗಿದೆ. ಇದರ ಪ್ರಕಾರ ಫಾರಂ ಅಥವಾ ಹೊಲದಲ್ಲೇ ಸ್ಥಳೀಯವಾಗಿ ದೊರೆಯುವ ಅಥವಾ ಉತ್ಪಾದಿಸಬಹುದಾಗಿರುವ ಸಾವಯವ ಗೊಬ್ಬರಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಇದರ ಪ್ರಕಾರ ಕೃಷಿಯಲ್ಲಿ ತೊಡಗಿಸಿದ ಸಾವಯವ ಗೊಬ್ಬರದ ಪ್ರಮಾಣ ಅಲ್ಲಿ ದೊರೆಯುವ ಪ್ರಮಾಣಕ್ಕೆ ಸಮನಾಗಿರುವಂತೆ, ಅಂದರೆ ಆದಷ್ಟು ಹೊರಗಿನಿಂದ ಸಾವಯವ ಪದಾರ್ಥ ಅಥವಾ ಗೊಬ್ಬರದ ಆಮದನ್ನು ತಪ್ಪಿಸುವಂತೆ ಸೂಚಿಸಲಾಗಿದೆ. ಇನ್ನು ಸಸ್ಯ ಪೋಷಕಾಂಶಗಳಲ್ಲಿ ಅತ್ಯಂತ ಪ್ರಮುಖವಾಗಿರುವ ಸಾರಜನಕದ ವಿಚಾರದಲ್ಲಂತೂ, ಇದು ಸಂಪೂರ್ಣವಾಗಿ ಸಾವಯವ ಅಥವಾ ಜೈವಿಕ ಮೂಲದ್ದಾಗಿರ ಬೇಕೆಂದೂ, ಯೂರಿಯಾ ಸೇರಿದಂತೆ ಯಾವುದೇ ರೀತಿಯ ಕೃತಕ ಸಾರಜನಕ ಗೊಬ್ಬರವನ್ನು ಹೊರಗಿಡಬೇಕೆಂದು ಆದೇಶಿಸಲಾಗಿದೆ. ಅನಿವಾರ್ಯವಾಗಿ ಹೊರಗಿನಿಂದ ತಂದು ಹಾಕಬೇಕಾಗಿರುವ ಜೈವಿಕ ಅಥವಾ ಖನಿಜ ಮೂಲದ ಪೋಷಕಾಂಶಗಳ ಬಗ್ಗೆ ಅವುಗಳ ಅಗತ್ಯ, ಉತ್ಪಾದನಾ ರೀತಿ, ಪರಿಸರದ ಮೇಲೆ ಅವುಗಳಿಂದುಂಟಾಗುವ ಪರಿಣಾಮ, ಅವುಗಳು ಕರಗಿ ಮಾಯವಾಗುವ ರೀತಿ, ಇತ್ಯಾದಿಗಳ ಆಧಾರದ ಮೇಲೆ ವಿವರವಾದ ಮಾರ್ಗ ಸೂಚಿಯನ್ನು ಒದಗಿಸಲಾಗಿದೆ. ಅದೇ ರೀತಿ ಮಾನವ ಮಲ ಮೂತ್ರಗಳನ್ನು ನೇರವಾಗಿ ಬಳಸಿ, ಸಸ್ಯದೊಡನೆ ಸಂಪರ್ಕಿಸುವುದನ್ನು ತಪ್ಪಿಸುವಂತೆ ತಿಳಿಸಲಾಗಿದೆ.

4. ಸಸ್ಯ ಸಂರಕ್ಷಣೆ :

ಸಾವಯವ ಕೃಷಿಯಲ್ಲಿ ಕ್ರಿಮಿ ಕೀಟಗಳ ಹಾವಳಿಯ ವಿರುದ್ಧ ಹೋರಾಡುವಲ್ಲಿ ಸಸ್ಯಗಳಲ್ಲಿ ಸಹಜ ಶಕ್ತಿಯನ್ನು ವೃದ್ಧಿಪಡಿಸುವತ್ತ ಒತ್ತು ಕೊಡಬೇಕಾಗುತ್ತದೆ ಮತ್ತು ಕೃತಕವಾಗಿ ತಯಾರಿಸಿದ ಪೀಡೆ, ಕ್ರಿಮಿ, ಕಳೆನಾಶಕಗಳ ಬಳಕೆಯನ್ನು ನಿಷೇಧಿಸಲಾಗಿದೆ. ಈ ನಿಟ್ಟಿನಲ್ಲಿ ಆಯಾ ಪರಿಸರಕ್ಕೆ ಸರಿಯಾಗಿ ಹೊಂದಿ ಕೊಳ್ಳುವಂತಹ ತಳಿಗಳ ಆಯ್ಕೆ, ಸಮತೋಲನ-ವಾಗಿ ಸಸ್ಯ ಪೋಷಕಾಂಶಗಳು ಪೂರೈಕೆಯಾಗುವಂತೆ ನೋಡುವುದು, ಮಣ್ಣಿನೊಳಗೆ ಜೈವಿಕ ಚಟುವಟಿಕೆ (ಎರೆಹುಳು, ಕ್ರಿಮಿಕೀಟಾದಿಗಳಿಂದ) ಹೆಚ್ಚು ಹೆಚ್ಚು ನಡೆಯುವಂತೆ, ಸರಿಯಾದ ಬೆಳೆ ಪರ್ಯಾಯ, ಹಸಿರೆಲೆ ಗೊಬ್ಬರಗಳ ಬಳಕೆ ಇತ್ಯಾದಿ ಬೇಸಾಯ ಕ್ರಮಗಳಿಗೆ ಒತ್ತುಕೊಡಲಾಗಿದೆ.

ಬೆಳೆಗಳಿಗೆ ಹಾನಿಮಾಡುವ ಕ್ರಿಮಿ, ಕೀಟ, ಪೀಡೆಗಳನ್ನು ಹತೋಟಿ ಮಾಡುವ ಅವುಗಳ 'ಸಹಜ ಶತ್ರು' (Natural Enemies) ಗಳು ಸ್ವಾಭಾವಿಕವಾಗಿ ಅಭಿವೃದ್ಧಿಯಾಗುವಂತೆ ಪ್ರಯತ್ನಿಸಬೇಕೆಂದು ಸೂಚಿಸಲಾಗಿದೆ. ಆದರೆ ಈ 'ಸಹಜಶತ್ರು'ಗಳನ್ನು ಅಸಹಜ ರೀತಿಯಲ್ಲಿ ಅಂದರೆ ಜೈವಿಕವಾಗಿ ಮಾರ್ಪಾಡುಗೊಳಿಸಿ ಬಳಸುವುದನ್ನು ನಿಷೇಧಿಸಲಾಗಿದೆ. ಅದೇ ರೀತಿ ಯಾವುದೇ ರೀತಿಯ 'ಬೆಳವಣಿಗೆ ವರ್ಧಕ' (Growth Regulators) ಗಳ ಬಳಕೆಯನ್ನೂ ದೂರವಿಡ ಬೇಕೆಂದು ಸೂಚಿಸಲಾಗಿದೆ. ಹಾಗೇ ಕಳೆಗಳನ್ನು ಭೌತಿಕವಾಗಿ ಮತ್ತು ವಿವಿಧ ರೀತಿಯ ಬೇಸಾಯ ಕ್ರಮಗಳು, ಅಂದರೆ ಬೆಳೆ ಸರದಿ (Crop Rotation) ಕೃಷಿ ತ್ಯಾಜ್ಯಗಳ ಹೊದಿಕೆ (Mulching) ಇತ್ಯಾದಿ ಕ್ರಮಗಳ ಮೂಲಕ ನಿಯಂತ್ರಿಸ ಬೇಕಾಗುತ್ತದೆ.

ಸಾವಯವ ಕೃಷಿಯಲ್ಲಿ ಒಂದು ಸೂಕ್ತ 'ಭೂದೃಶ್ಯ' (Land Scape) ರಚನೆಯೂ ಇರಬೇಕಾಗಿದ್ದು, ಈ ನಿಟ್ಟಿನಲ್ಲಿ ಕನಿಷ್ಟ ಪ್ರಮಾಣದ ಭೂಭಾಗವನ್ನು ಸಂಪೂರ್ಣ ಪರಿಸರ ದೃಷ್ಟಿಯಿಂದ ಮರ, ಗಿಡ, ತೋಪುಗಳನ್ನು ಬೆಳೆಸಲು ಉಪಯೋಗಿಸಬೇಕೆಂದು ತಿಳಿಸಲಾಗಿದೆ. ಹಾಗೇ ನಾಟೀ ಮತ್ತು ಪಾರಂಪರಿಕ ಮೂಲದಲ್ಲಿ ಉತ್ಪಾದಿಸಿದ ಮತ್ತು ಸಂಸ್ಕರಿಸಿದ ಕೃಷಿ ಉತ್ಪನ್ನಗಳನ್ನೂ ಸಾವಯವ ಪದಾರ್ಥ ಎಂದು ದೃಢೀಕರಿಸಲಾಗಿದೆ.

5. ಸಾವಯವ ಭದ್ರತೆ ಮತ್ತು ನ್ಯಾಯಯುತ ವ್ಯಾಪಾರ

ಈ ಸಾವಯವ ಕೃಷಿಯಲ್ಲಿ ತೊಡಗಿರುವ ರೈತರು, ಕಾರ್ಮಿಕರು ಮತ್ತೆಲ್ಲರ ಹಿತರಕ್ಷಣೆ ಮತ್ತು ಈ ರೀತಿ ಕೃಷಿಯಲ್ಲಿ ಉತ್ಪಾದಿಸಿದ ಉತ್ಪನ್ನಗಳ ವ್ಯಾಪಾರದಲ್ಲಿ ಅವರಿಗೆ ನ್ಯಾಯಯುತ ಪಾಲು ದೊರೆಯುವಂತೆ ಮಾಡಲು ವಿವರವಾದ ಮಾರ್ಗಸೂಚಿ ನೀಡಲಾಗಿದೆ. ಈ ಸಾವಯವ ಕೃಷಿಯಿಂದ ಉತ್ಪಾದಕರಿಗೆ ಮತ್ತು ಸಂಸ್ಕರಣಗಾರರಿಗೆ ಅಧಿಕ ಆದಾಯ ಮತ್ತು ಸಂತೃಪ್ತಿ ದೊರೆಯುವುದು ಮಾತ್ರವಲ್ಲದೆ

ಅದರಲ್ಲಿ ದುಡಿಯುತ್ತಿರುವ ಕಾರ್ಮಿಕರ ಹಿತರಕ್ಷಣೆಗಾಗಿ ಉತ್ತಮ ವೇತನವನ್ನು, ವಾಸದ ಮನೆ, ನೀರು, ಆರೋಗ್ಯ , ವಿಮೆಗಳಿಂದ ಹಿಡಿದು ಪ್ಲಾಂಟೇಷನ್ ನೌಕರರಿಗೆ ಕಾರ್ಮಿಕ ಸಂಘ ಸ್ಥಾಪಿಸಲು ಅವಕಾಶ ಮಾಡಿಕೊಡುವಂತೆ ಸೂಚಿಸಲಾಗಿದೆ. ಅದೇ ರೀತಿ, ಚಿಕ್ಕ ರೈತರು, ಸಾಂಪ್ರದಾಯಿಕ ಬೇಸಾಯಗಾರರು, ಬಾಲಕಾರ್ಮಿಕರ ಶೋಷಣೆಯಾಗದಂತೆ ಮತ್ತು ನಾಟಿ ಹಾಗೂ ಬುಡಕಟ್ಟು ಜನಾಂಗಗಳು ತಮ್ಮ ಭೂಮಿಯಿಂದ ವಂಚಿತರಾಗದಂತೆ ಸಂಪೂರ್ಣ ನಿಗಾವಹಿಸ ಬೇಕೆನ್ನಲಾಗಿದೆ.

ಇದೇ ರೀತಿ ಸಾವಯವ ರೀತಿಯಲ್ಲಿ ಪಶುಪಾಲನೆ, ಶೇಖರಣೆ, ಸಂಸ್ಕರಣೆ, ಪ್ಯಾಕಿಂಗ್, ಸಾಗಾಣಿಕೆ, ಕಾಫಿ ಮತ್ತು ಟೀಗಳಂತಹ ವಾಣಿಜ್ಯ ಬೆಳೆಗಳ ಬಗ್ಗೆ ವಿವರವಾದ ಮಾರ್ಗಸೂಚಿ ನೀಡಲಾಗಿದೆ. ಅಲ್ಲದೆ ಆಸಕ್ತ ವ್ಯಕ್ತಿಗಳು ಮತ್ತು ಸಂಸ್ಥೆಗಳು ಈ ಆಂದೋಳನದ ಸದಸ್ಯರಾಗುವ ಅವಕಾಶವಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು.

IFOAM, General Secretariat,
c/o Okozentrum Imbsbach, D-66636, Tholey-Theley, Federal Republic Germany

ಈ IFOAMನ ಸದಸ್ಯ ಸಂಸ್ಥೆಯಾದ 'ಅಖಿಲ ಭಾರತ ಸಾವಯವ ಕೃಷಿ ಸಂಘಟನೆ (All India Federation of Organic Farming - AIFOF) ಈಗ ಭಾರತದಲ್ಲಿ ಸಾವಯವ ಕೃಷಿ ಆಂದೋಳನದ ಮೇಲ್ವಿಚಾರಣೆ ಮತ್ತು ಸಾವಯವ ಉತ್ಪನ್ನಗಳನ್ನು ದೃಢೀಕರಿಸುವ ಜವಾಬ್ದಾರಿ ಹೊತ್ತಿದೆ. ಒಮ್ಮೆ ಈ ರೀತಿಯ ಸಾವಯವ ಕೃಷಿ ಉತ್ಪಾದಕ ಎಂಬ ದೃಢೀಕರಣ ಪಡೆದಲ್ಲಿ ಅಂತಹ ಉತ್ಪಾದಕರಿಗೆ ಜಗತ್ತಿನಾದ್ಯಂತ ಪ್ರಚಾರ ದೊರೆತು, ಅವರ ಉತ್ಪನ್ನದ ಮಾರಾಟಕ್ಕೆ ಹಾದಿ ಸುಗಮವಾಗಲಿದೆ.

ಸಾವಯವ ಕೃಷಿ : ರೈತರ ಸಾಹಸ

ಟಿ.ಎನ್. ಪ್ರಕಾಶ್

ಈ ಸಾವಯವ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿರುವ ಹಲವು ಪ್ರಗತಿಪರ ರೈತರು ನಮ್ಮಲ್ಲಿರುವರು. ಈ ಆಂದೋಳನ ಕರ್ನಾಟಕದಲ್ಲಿ ನಿಧಾನವಾಗಿ ಏಳುತ್ತಿದೆ. ಆದರೆ, ಈ ಸಾವಯವ ಉತ್ಪನ್ನಕ್ಕಿರುವ ಅಪಾರ ಬೇಡಿಕೆಯನ್ನು ಮನಗಂಡು, ಈ ನಿಟ್ಟಿನಲ್ಲಿ ಯುರೋಪಿನಾದ್ಯಂತ ಸಂಚರಿಸಿ, ಅಲ್ಲಿನ ಒಂದು ಸಂಸ್ಥೆಯೊಡನೆ ನೇರವಾಗಿ ವ್ಯವಹರಿಸಿ, ಈ ಹಿಂದೆ ತಿಳಿಸಿರುವ ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಸಂಸ್ಕರಿಸಿ ಕೆಲವು ಸಾವಯವ ಕೃಷಿ ಉತ್ಪನ್ನಗಳ ರಫ್ತಿಗೆ ಮುನ್ನುಗಿದ ಒಬ್ಬ ಯುವ ರೈತರ ಸಾಹಸದ ಬಗ್ಗೆ ವಿವರ ಇಲ್ಲಿದೆ.

ಎಂ. ಜಿ. ಸತ್ಯನಾರಾಯಣ, ದಕ್ಷಿಣ ಕನ್ನಡದ ಸುಳ್ಯ ತಾಲೋಕಿನ ಕುಕ್ಕುಜಡ್ಕದ ಓರ್ವ ಪ್ರಗತಿಪರ ಅಡಿಕೆ ಬೆಳೆಗಾರರು. ಓದಿನಲ್ಲಿ ಡಿಪ್ಲೋಮ ಎಂಜಿನಿಯರಿಂಗ್ ಮುಗಿಸಿ ಕೃಷಿಗೆ ಹಿಂದಿರುಗಿದವರು. ಫಿಲಿಪ್ಪೈನಿನ ಅಂತರರಾಷ್ಟ್ರೀಯ ಬತ್ತದ ಬೆಳೆ ಸಂಶೋಧನಾ ಸಂಸ್ಥೆಯ ರೈತ ಸದಸ್ಯತ್ವ ಪಡೆದಿರುವ ಇವರು ಕಳೆದ ವರ್ಷ ಜರ್ಮನಿ, ನೆದರ್‌ಲ್ಯಾಂಡ್‌ಗೆ ಭೇಟಿ ನೀಡಿ, ಅಲ್ಲಿ 'ಯುರೋಹರ್ಬ್' (Euroherb) ಎಂಬ ದೃಢೀಕರಿಸಿದ ಸಾವಯವ ವಸ್ತುಗಳ ಪೂರೈಕೆಗಾಗಿಯೇ ಇರುವ ಸಂಸ್ಥೆಯೊಡನೆ ವ್ಯವಹರಿಸಿ, ನಮ್ಮ ಸಾಂಪ್ರದಾಯಿಕ ಕೃಷಿ ಉತ್ಪನ್ನಗಳಾದ ಕಾಳುಮೆಣಸು, ಜಾಯಿಕಾಯಿ, ಜಾಪತ್ರೆ, ಅರಿಶಿನ ಮುಂತಾದವುಗಳನ್ನು ಸಾವಯವ ರೀತಿಯಲ್ಲಿ ಬೆಳೆದು ರಫ್ತು ಮಾಡುವ ಮಾತುಕತೆ ನಡೆಸಿಕೊಂಡು ಬಂದರು. ನಂತರ IFOAM ಗುಣಮಟ್ಟದ ದೃಢೀಕರಣ ನೀಡಲು, ನೆದರ್‌ಲ್ಯಾಂಡಿನ 'ಸ್ಕಾಲ್ (SKOL) ಎಂಬ ಸಂಸ್ಥೆಯೊಡನೆ ವ್ಯವಹರಿಸಿ, ಅಲ್ಲಿನ ಗುಣಮಟ್ಟ ನಿರ್ಧರಿಸುವ ಅಧಿಕಾರಿಗಳನ್ನು ಖರ್ಚು ಭರಿಸಿ ಕರೆಸಿಕೊಂಡು 'ದೃಢೀಕರಿಸಲ್ಪಟ್ಟ ಸಾವಯವ ಉತ್ಪಾದನ ಸದಸ್ಯ' (Registered Member Grower-RMG) ದಾಖಲು ಪತ್ರ ಪಡೆದಿರುವರು. ನಂತರ ತಮ್ಮದೇ ಆದ 'ಮ್ಯಾಗೋಸನ್ ರಫ್ತುಗಾರರು' (Magosan Exporters) ಎಂಬ ಹೆಸರಿನ ಸಂಸ್ಥೆಯ ಮೂಲಕ 12 ಸಾಂಪ್ರದಾಯಿಕ ಕೃಷಿ ಉತ್ಪನ್ನಗಳ ರಫ್ತಿಗೆ ಈಗಾಗಲೇ ಸಿದ್ಧರಾಗಿರುವರು. ಅವುಗಳನ್ನು ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

ಸತ್ಯನಾರಾಯಣ ಪಡೆದಿರುವ ಈ RMG ಪರವಾನಿಗೆಯಿಂದ ಅವರು ಯುರೋಪ್, ಅಮೇರಿಕದಾದ್ಯಂತ ಎಲ್ಲೆಡೆ ರಫ್ತು ಮಾಡುವ ಸಾಮರ್ಥ್ಯ ಪಡೆದಿರುವರು. ಅಲ್ಲದೆ ಅವರು ಹಲವು ಪ್ರಗತಿಪರ ಸಾವಯವ ರೈತರ ಒಕ್ಕೂಟ ರಚಿಸಿ, ಅವರ ಉತ್ಪನ್ನಗಳ ಗುಣಮಟ್ಟವನ್ನೂ ನಿರ್ಧರಿಸಿ, ತಮ್ಮ ಸಂಸ್ಥೆಯ ಮೂಲಕ ರಫ್ತು ಮಾಡಿಸುವ ಏರ್ಪಾಟು ಮಾಡಿರುವರು.

ಹೀಗೆ, ವಿದೇಶಿ ಸಂಸ್ಥೆಯೊಡನೆ ನೇರವಾಗಿ ವ್ಯವಹರಿಸಿ, ರಫ್ತಿನ ಒಪ್ಪಂದ, ಸಾವಯವ ಉತ್ಪಾದಕ ಎಂದು ಪರವಾನಿಗೆ ಪಡೆದು, ಅವರ ಆ ಕಠಿಣ ಗುಣಮಟ್ಟಕ್ಕೆ ಹೊಂದಿಕೊಂಡು ಉತ್ಪಾದನೆ ಮಾಡುವಂತಾಗಿದ್ದು, ಅದೇ ರೀತಿ ಸಂಸ್ಕರಿಸಿ, ಪ್ಯಾಕ್ ಮಾಡಿ ಕಳಿಸುವಂತಾಗಿದ್ದು ಎಂ. ಜಿ. ಸತ್ಯನಾರಾಯಣರವರ ಅಸಮಾನ್ಯ ಸಾಧನೆ ಎನ್ನಬಹುದು.

ಉತ್ಪನ್ನ	ಬೇಡಿಕೆ ಒಪ್ಪಂದ (ವಾರ್ಷಿಕ)	ರಫ್ತು ಸಾಮರ್ಥ್ಯ
1. ಕರಿಮೆಣಸು	5000 ಕೆ.ಜಿ.	5000 ಕೆ.ಜಿ.
2. ಜಾಯಿಕಾಯಿ	1000 ಕೆ.ಜಿ.	300 ಕೆ.ಜಿ.
3. ಜಾಯಿಪತ್ರೆ	500 ಕೆ.ಜಿ.	80 ಕೆ.ಜಿ.
4. ಬಿಳಿ ಮೆಣಸು	4000 ಕೆ.ಜಿ.	ಸದ್ಯಕ್ಕಿಲ್ಲ
5. ಲವಂಗ	1000 ಕೆ.ಜಿ.	500 ಕೆ.ಜಿ.
6. ಗೇರು	25 ಮೆ.ಟನ್	ಪೂರ್ತಿ
7. ವೆನಿಲ್ಲಾ	300 ಕೆ.ಜಿ.	500 ಕೆ.ಜಿ.
8. ಅರಿಶಿನ	2000 ಕೆ.ಜಿ.	1000 ಕೆ.ಜಿ.
9. ಶುಂಠಿ	2000 ಕೆ.ಜಿ.	ಪೂರ್ತಿ
10. ಬಿಳಿ ದಾಸವಾಳ	5000 ಕೆ.ಜಿ.	ಸದ್ಯಕ್ಕಿಲ್ಲ
11. ಮದರಂಗಿ	80 ಮೆ.ಟನ್	ಸದ್ಯಕ್ಕಿಲ್ಲ
12. ಏಲಕ್ಕಿ	500 ಕೆ.ಜಿ.	500 ಕೆ.ಜಿ.

ಹೀಗೆ, ನಮ್ಮಲ್ಲಿ ಸಾಮರ್ಥ್ಯವಿರುವ ರೈತರು ಎಂ. ಜಿ. ಸತ್ಯನಾರಾಯಣರ ರೀತಿಯಲ್ಲಿ ಧೈರ್ಯ, ಸಾಹಸಗಳನ್ನು ಮೈಗೂಡಿಸಿಕೊಂಡಲ್ಲಿ, ಕೃಷಿಗೆ ಕೈಗಾರಿಕೆ ಸ್ಥಾನಮಾನ ನೀಡಿ ಎನ್ನುವ ಹುಸಿ ಬೇಡಿಕೆ ಮುಂದೆ ಒಡ್ಡುವ ಅಗತ್ಯವಿರುತ್ತದೆಯೇ?

ಹೆಚ್ಚಿನ ವಿವರಗಳಿಗೆ :

ಎಂ. ಜಿ. ಸತ್ಯನಾರಾಯಣ, ಕುಕ್ಕಜಡ್ಕ, ಸುಳ್ಯ ತಾಲೋಕ್, ದಕ್ಷಿಣ ಕನ್ನಡ - 577212.

ದೂರವಾಣಿ : (08257) 84228.

ಸಾವಯವ ಉತ್ಪನ್ನಗಳು ರಫ್ತಾಗಬೇಕೆ?

- ಆನಂದ್ ಎ.ಎಸ್.

ಕೀಟ-ರೋಗದ ಬಾಧೆ ಮಿತಿದಾಟಿದೆ, ಖರ್ಚು ಆದಾಯ ಮೀರಿಸಿದೆ, ಅಂಗಳದಲ್ಲಿ ಆಡುವ ಮಕ್ಕಳಾದಿಯಾಗಿ ಹಲವರಿಗೆ, ಹಿಂದೆಂದೂ ಕಾಣದ ರೋಗಗಳ ಸ್ಪರ್ಶ, ಇಳುವರಿಯಲ್ಲಿ ಹಿನ್ನೆಡೆ - ಈ ಎಲ್ಲದರ ಹಿನ್ನೆಲೆಯಲ್ಲಿ, ಪರ್ಯಾಯ ದಾರಿಗಳತ್ತ ದೃಷ್ಟಿ ನೆಟ್ಟ ಆತ್ಮಗಳಲ್ಲಿ 'ಸಾವಯವ' ದೊರೆತದ್ದು.

ಆದರೀಗ ಏನಾಗುತ್ತಿದೆ ?

ಈ 'ಸಾವಯವ'ಕ್ಕೂ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು ಬಿದ್ದಿದೆ. ಮನೆಯ ಪರಿಸರದಲ್ಲೇ ದೊರಕುವ ಗಂಜಳಾದಿಯಾಗಿ ಬೇವಿನವರೆಗೂ, ಎಲ್ಲವೂ ಈಗ ಖರೀದಿಗೆ ಲಭ್ಯ!

ರೈತ-ರೈತರೊಡನೆ ಪರಸ್ಪರ ಪೂರಕತೆಯಿರಬೇಕು ಎಂದು ಬಯಸುವ 'ಸಾವಯವವು' ಕಂಪನಿಗಳ ಆಶ್ರಯ ವಿರೋಧಿಸುತ್ತದೆ.

'ಸಾವಯವ' ಮಾಧ್ಯಮದಲ್ಲಿ ಸತ್ವ ಹೀರಿ ಬೆಳೆದ ಆಹಾರಧಾನ್ಯಗಳಿಗೆ ಹೊರದೇಶಗಳಲ್ಲಿ ಭಾರಿ ಬೇಡಿಕೆ. ರಫ್ತು ... ಹಣ .... ವಿದೇಶಿ ವಿನಿಮಯ ... ಸುಂದರ ಕಲ್ಪನೆ ಅಲ್ವೇ?

ವಸ್ತುಸ್ಥಿತಿ ಹಾಗಲ್ಲ!

ಮನೆಯ ಮಕ್ಕಳಿಗೆ ಆಹಾರ ಸಿಗದಾಗ ಪಕ್ಕದ ಮನೆಯ ಮಕ್ಕಳ ಸ್ವಾಸ್ಥ್ಯದ ಬಗ್ಗೆ ಕಾಳಜಿ ತೋರುವುದು ವಿವೇಕ ಎನಿಸಿಕೊಳ್ಳಲಾರದು. ಈ ದೇಶದಲ್ಲಿ ಕೊಳ್ಳುವ ಸಾಮರ್ಥ್ಯ ಹೆಚ್ಚಿನ ಜನರಲ್ಲಿ ಇಲ್ಲ. ಈ ಸಂಖ್ಯೆ ರಫ್ತಿನಿಂದ ಇನ್ನಷ್ಟು ಹೆಚ್ಚುವ ಸಾಧ್ಯತೆಯೆ ಹೆಚ್ಚು. **ದಿನನಿತ್ಯ ಬಳಸುವ ಅಕ್ಕಿ, ಗೋಧಿ, ತರಕಾರಿಗಳು ಕ್ಷಣ ಮಾತ್ರದಲ್ಲಿ ಹೊರದೇಶದ ಮಾರುಕಟ್ಟೆ ತಲುಪುವ ಸಮಯದಲ್ಲೇ, ಈ ದೇಶದ ಗ್ರಾಹಕರಿಗೆ, ಆ ಪದಾರ್ಥಗಳ ಬೆಲೆಯ ಬಿಸಿ ತಟ್ಟಿರುತ್ತದೆ.**

ಹಿಂದೆಲ್ಲ ಭಾವನೆಗೆ ಬೆಲೆಯಿತ್ತು. ವ್ಯಾಪಾರ ಅಂದು ಉಪಕಸುಬು! ರಫ್ತಿನಿಂದ ದೊರೆವ ಹಣ ಇಲ್ಲಿಯ 'ಕೃಷಿ ಸಂಸ್ಕೃತಿ'ಯ ಮೇಲೆ

ನೇರ ದಾಳಿ ಮಾಡುತ್ತದೆ. ರಫ್ತಿನ ಆಸೆಯಿಂದ, ರಾತ್ರೋರಾತ್ರಿ ಶ್ರೀಮಂತರಾಗುವ ಹುಚ್ಚೋಟ ದಿಂದ, ನಮ್ಮ ಮೊದಲಿನ ಆಹಾರ ಧಾನ್ಯದ ಬೆಳೆ, ಕಮರಿದ ಉದಾಹರಣೆಗಳೂ ಇವೆ. ರಫ್ತಿಗೆ ಬೆಲೆ ಕೊಟ್ಟು, ಬರುವ ಹಣಕ್ಕೆ ನೇತು ಬಿದ್ದು, ನಾವೆಲ್ಲರೂ, ರಫ್ತಿನಿಂದಾಗಿ ಮರಳಿ ನಮ್ಮ ನೆಲದಿಂದ ಹೊರಹೋದ ಸತ್ವಗಳನ್ನು ಪಡೆಯಲಾದೀತೆ? ರಫ್ತಿನ ತೀವ್ರತೆಯಲ್ಲಿ ಹೆಚ್ಚೆಚ್ಚು ಕೃಷಿಯೋಗ್ಯ ಭೂಮಿ ಬಂಜರಾಗುವ/ ಬಂಜರಾದ ಉದಾಹರಣೆಗಳು ನಮ್ಮನ್ನೇಕೆ ಎಚ್ಚರಿಸುವುದಿಲ್ಲ? ಹಾಗಾದರೆ ರೈತ ಬೆಳೆಯುವುದಾದರೂ ಹೇಗೆ?

ಗ್ರಾಮದಲ್ಲಿ 'ಉತ್ಪಾದಕನಿಗೂ -ಗ್ರಾಹಕನಿಗೂ' ನಿಕಟ ಸಂಬಂಧವಿದೆ. ಕೃಷಿಕರಲ್ಲದವರು ಕೃಷಿಕರನ್ನು ಅನೇಕ ರೀತಿಯಲ್ಲಿ ಅವಲಂಬಿಸಿದ್ದಾರೆ. ನೆನಪಾಗುತ್ತೆ, ನಾಗಪುರದ ದಿವಂಗತ ಡಾ|| ಬಾಂಭೂರ್‌ಕರ್ ಅವರ ಪ್ರಯತ್ನ. ಕೃಷಿ ಕೀಟ ಶಾಸ್ತ್ರದಲ್ಲಿ ಅವರದ್ದು ತಜ್ಞತೆ. ವಿಶ್ರಾಂತ ಜೀವನದಲ್ಲಿ ಅವರು ವಿನಿಯೋಗಿಸಿದ ಸಮಯದ ರೀತಿ ಹಲವರಿಗೆ ನಮ್ಮಲ್ಲಿ ಮಾರ್ಗದರ್ಶಿ.

'ಉತ್ಪಾದಕನಿಂದ ಗ್ರಾಹಕನಿಗೆ' ಎಂಬ ಹಲವರ ಆಶಯಕ್ಕೆ ಚಾಲನೆ ನೀಡಿದವರು ಬಾಂಭೂರ್‌ಕರ್. ಕೃಷಿಯಲ್ಲಿ ತಜ್ಞತೆಯಿದ್ದಿದ್ದ ರಿಂದ, ಕೃಷಿಕರಿಗೆ ತಂತ್ರಜ್ಞಾನ ರವಾನಿಸಿ, ಬೆಳದ ಬೆಳೆಗೆ ಗುಣದ ಮುದ್ರೆ ಒತ್ತಿ, ಸ್ನೇಹಿತ ಗ್ರಾಹಕರಿಗೆ ಮನೆಯ ಬಾಗಿಲಲ್ಲೇ ವಿತರಿಸುವ ಸಾಹಸ ಪ್ರಯತ್ನದಲ್ಲಿ ಯಶಕಂಡವರು. ದಿನನಿತ್ಯದಲ್ಲಿ ಬಳಕೆಯಾಗುವ ಎಲ್ಲಾ ವಸ್ತುಗಳಿಗೂ ಇದೇ ರೀತಿಯ ವಿಲೇವಾರಿ ಪದ್ಧತಿ. ಗ್ರಾಹಕರ ಬಾಗಿಲಲ್ಲೆ ಹಣದ ವಿಲೇವಾರಿ. ಪದಾರ್ಥದ ಗುಣಕ್ಕೆ ಮನ್ನಣೆ. ಕಲಬೆರಕೆಗೆ ಇಲ್ಲಿ ಸ್ಥಳವಿಲ್ಲ. ಆಹಾರ ಪದಾರ್ಥಗಳ ಸಂಗ್ರಹ, ಮೌಲ್ಯಮಾಪನ, ವಿತರಣೆ ... ಎಲ್ಲಾ ಹಂತಗಳಲ್ಲೂ ರೈತರ ಪಾಲುದಾರಿಕೆ, ಬಾಂಭೂರ್‌ಕರ್ ಅವರದ್ದು ನಿರ್ದೇಶನ ಅಷ್ಟೆ.

ಈ ಪ್ರಯತ್ನದಲ್ಲಿ ಲಾಭದ ಬಹುಭಾಗ ಹೀರುವ ಮಧ್ಯವರ್ತಿಗೆ ಕೊಕ್! ಆತ ಕಬಳಿಸುತ್ತಿದ್ದ ಲಾಭದಲ್ಲಿ ರೈತ ಮತ್ತು ಬಳಕೆದಾರಿಗೆ ಪಾಲು. ಇದಕ್ಕೂ ಹೆಚ್ಚಾಗಿ ಗುಣಮಟ್ಟದಲ್ಲಿ ಶೇ. 100 ರಷ್ಟು ಖಾತರಿ. 'ಉತ್ಪಾದಕ-ಗ್ರಾಹಕ' ರ ನಡುವಿನ ಸಂಬಂಧ ಅತಿ ಮುಖ್ಯ. ರೈತನತ್ತೊಂದರೆ, ಗ್ರಾಹಕರ ಆಸಕ್ತಿ ಇವುಗಳನ್ನು ತಿಳಿಯಲು ಈ ಸಂಬಂಧ ಸಹಕಾರಿ. ಯಾವ ರೈತನ ಹೊಲದಿಂದ ನನಗೆ ಯಾವ ಪದಾರ್ಥ ಬಂತು ಎಂದು ಗ್ರಾಹಕನಿಗೆ ತಿಳಿದಿದ್ದರೆ ಅದರ ಗುಣಮಟ್ಟದ ಬಗ್ಗೆ ಹೊಗಳಿಕೆ/ ಎಚ್ಚರಿಕೆಯನ್ನು ನೇರವಾಗಿ ಪದಾರ್ಥ ಕಳಿಸಿದ ರೈತನಿಗೆ ಮುಟ್ಟಿಸಲು ಸಹಕಾರಿ. ಇಂತಹ ಸಂಬಂಧ ಈ ದೇಶದ ಪ್ರಸ್ತುತ ಅಗತ್ಯಗಳಲ್ಲಿ ಒಂದು.

'ರೈತ-ಬಳಕೆದಾರ' ಕೊಂಡಿಯಿಂದ, ಮೊದಲು ರೈತ ಪಡೆಯುತ್ತಿದ್ದಕ್ಕಿಂತಲೂ ಶೇ. 30-40ರಷ್ಟು ಹೆಚ್ಚು ಪಡೆದ ಉದಾಹರಣೆಯನ್ನು (ಅಕ್ಕಿ ಮಾರಾಟದಲ್ಲಿ) ಡಾ|| ಬಾಂಭೂರ್‌ಕರ್ ತಿಳಿಸಿದ್ದರು. ಲಾಭ ಎಷ್ಟಿದ್ದರೂ ಬೇಕು, ರಫ್ತಿನಲ್ಲಿ ಶೇ. 40 ಕ್ಕಿಂತ ಹೆಚ್ಚು ಲಾಭ ಸಿಗುವುದಾದರೆ ರಫ್ತೇಯಿರಲಿ ಎನ್ನುವವರು ಗ್ರಾಮದ ಸ್ವಾಸ್ಥ್ಯವನ್ನು ಕದಡುವುದಿಲ್ಲವೆ?

ರಫ್ತು ಆಗುವುದೇ ಬೇಕಾದಲ್ಲಿ ಅಗತ್ಯಕ್ಕೆ ಬೆಲೆಕೊಟ್ಟು ರಫ್ತು ಆಗಬೇಕಾದ್ದೆ; ಅದರ ವ್ಯಾಪ್ತಿ, ಉದ್ದೇಶಗಳು, ಔಚಿತ್ಯವನ್ನು ನಿರ್ಧರಿಸಬೇಕು.

ಕಾನೂನಿನ ಭಾವನೆ ಎಲ್ಲಕ್ಕೂ ಒಂದೆಯೇಕಲ್ಲ?

ಈ ದೇಶದ ಆಹಾರ ಬೇಡಿಕೆಗೆ ಸ್ಪಂದಿಸಬೇಕು ಎಂದು ಹೇಳುವ ಜನ, ದೊಡ್ಡ ದೊಡ್ಡ 'ಹೂಕೃಷಿ' ಕಂಪನಿಗಳಿಗೆ, ರೈತನ ನೆಲವನ್ನು ಹೂವಿನ ಕೃಷಿಗೆ/ರಫ್ತಿಗೆ ಯೋಗ್ಯವಾದ ಯಾವುದಾದರೊಂದು ಆಹಾರವಲ್ಲದ ಗಿಡದ ಕೃಷಿಗೆ, ಪ್ರೋತ್ಸಾಹದ ರೀತಿ ಮಾತನಾಡುವಾಗ 'ಆಹಾರ-ಬೇಡಿಕೆ-ಪೂರೈಕೆ' ಎಂದು ತಾವೇ ಹೇಳಿದ್ದ ಮಾತನ್ನು ಏಕೆ ಮರೆಯುತ್ತಾರೆ?

'ಕೃಷಿಗೆ ಉದ್ಯಮದ ಸ್ಥಾನಮಾನ' ಎನ್ನುವ ದಿನಗಳಿವು. ಈ ಧೋರಣೆಯಿಂದ ಕೃಷಿ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡೀತೇ? ವ್ಯಾಪಾರ ಎಂದಿಗೂ ಸಂಬಂಧಗಳನ್ನು ಉಳಿಸಿಕೊಂಡೇ ಬಾಳುತ್ತದೆ ಎಂಬುದಕ್ಕೆ ನಿದರ್ಶನಗಳಿಲ್ಲ ಎಂಬುದು ನೆನಪಿರಲಿ.

(ವಿ.ಸೂ. : ಈ ರೀತಿ ಸಾವಯವ ರೈತರು-ಗ್ರಾಹಕರನ್ನು ಒಗ್ಗೂಡಿಸುವ ಚಳವಳಿಯನ್ನು ತೀರ್ಥಹಳ್ಳಿಯ ಪ್ರಗತಿಪರ ರೈತರಾದ ಪುರುಷೋತ್ತಮರಾಯರು ಮತ್ತು ಬೆಂಗಳೂರಿನ, ಇಂದಿರಾನಗರದಲ್ಲಿರುವ ಇಕ್ರಾ ಸಂಸ್ಥೆಯವರು ಈಗಾಗಲೇ ಪ್ರಾರಂಭಿಸಿರುವರು. ಆಸಕ್ತರು ಇವರ ಪ್ರಯತ್ನಕ್ಕೆ ಕೈಜೋಡಿಸ ಬಹುದಾಗಿದೆ. ಸಂ.)

ಸಾವಯವ ಕೃಷಿ : ಇತಿಮಿತಿಗಳು

– ಡಾ|| ಬಿ.ಆರ್. ಹೆಗಡೆ, ಸಂಶೋಧನಾ ನಿರ್ದೇಶಕರು. ಕೃ.ವಿ.ವಿ., ಬೆಂಗಳೂರು

ಸಾವಯವ ಬೇಸಾಯ ಒಂದು ಆದರ್ಶವಾದ ಕೃಷಿ ಪದ್ಧತಿ. ಆದರೆ ಇದು ಶ್ರಮವಿಲ್ಲದ ಬೇಸಾಯ ಎಂದು ಮಾತ್ರ ತಿಳಿಯಬಾರದು. ಭೂಮಿಯನ್ನು ಫಲವತ್ತಾಗಿಟ್ಟು ಆರೋಗ್ಯ ಕಾಪಾಡಲು ಸಾವಯವ ಪದಾರ್ಥಗಳನ್ನು ಗೊಬ್ಬರ ರೂಪದಲ್ಲಿ, ಬೆಳೆಯುಳಿಕೆ ರೂಪದಲ್ಲಿ, ಬೆಳೆಗಳಿಗೆ ಹೊದಿಕೆಯಾಗಿ ಮತ್ತು ಹಸಿರುಗೊಬ್ಬರವಾಗಿ ಪೂರೈಸುತ್ತಲೇ ಇರಬೇಕಾಗುತ್ತದೆ. ಲಭ್ಯವಿರುವ ಪ್ರಾಣಿಜನ್ಯ ಮತ್ತು ಸಸ್ಯಜನ್ಯ ಪದಾರ್ಥಗಳನ್ನು ಪೋಲಾಗದಂತೆ ಸಂಗ್ರಹಿಸಿ ಭೂಮಿಗೆ ಬೆರೆಸುವುದು ಸಾವಯವ ಕೃಷಿಯ ಮೂಲ ತತ್ವ. ಈ ಶತಮಾನದ ಅಂತ್ಯದ ಸಮಯಕ್ಕೆ ಭಾರತವು ಉತ್ಪಾದಿಸಬೇಕಾದ ಆಹಾರ ಬೆಳೆಗಳಲ್ಲಿ ಹೀರಲ್ಪಡುವ ಪೋಷಕಾಂಶಗಳ ಪ್ರಮಾಣ 32 ದಶಲಕ್ಷ ಟನ್ನುಗಳು. ಇಷ್ಟು ದೊಡ್ಡ ಪ್ರಮಾಣದ ಪೋಷಕಾಂಶಗಳನ್ನು ಸಾವಯವ ಪದಾರ್ಥಗಳನ್ನೊಂದೇ ಬಳಸಿ ಭೂಮಿಗೆ ತಿರುಗಿಸುವುದು ಸಾಧ್ಯವೇ ಎನ್ನುವ ಪ್ರಶ್ನೆಗೆ ಸುಲಭವಾದ ಉತ್ತರವಿಲ್ಲ. ಜಮೀನುಗಳಲ್ಲಿ ಹಸಿರೆಲೆಗೊಬ್ಬರ ಹಾಗೂ ಬೆಳೆಯುಳಿಕೆಯ ಭಾಗಗಳನ್ನು ಬಳಸುವುದು ಸಾಧ್ಯವಾದರೂ, ಖುಷ್ಕಿ ಜಮೀನುಗಳಲ್ಲಿ ಸಾವಯವ ವಸ್ತುಗಳನ್ನು ತರುವುದೆಲ್ಲಿಂದ ಎನ್ನುವುದು ಮತ್ತೊಂದು ಪ್ರಶ್ನೆ. ಪ್ರಾರಂಭದ ದಿಸೆಯಲ್ಲಿ ಸಾವಯವಗಳ ಜೊತೆಗೆ ರಾಸಾಯನಿಕ ಗೊಬ್ಬರಗಳನ್ನು ಬಳಸಿ, ಕ್ರಮೇಣವಾಗಿ ರಸಗೊಬ್ಬರಗಳ ಪ್ರಮಾಣವನ್ನು ಕಡಿಮೆ ಮಾಡುತ್ತಾ ಹೋಗಬೇಕು ಎನ್ನುವುದು ತಜ್ಞರ ಅಭಿಪ್ರಾಯ.

ಸಾವಯವ ಕೃಷಿಯನ್ನು ಅನುಸರಿಸಿದಾಗ ರೋಗ ಹಾಗೂ ಕೀಟಗಳ ಬಾಧೆ ಕಡಿಮೆಯಾಗಬಹುದಾದರೂ ಅವುಗಳನ್ನು ಸಂಪೂರ್ಣವಾಗಿ ಹತೋಟಿಯಲ್ಲಿಡುವುದು ಸಾಧ್ಯವಾಗದಿರಬಹುದು. ಇಂಥ ಸಂದರ್ಭಗಳಲ್ಲಿ ಕೃಷಿಕನ ಶ್ರಮ ವ್ಯರ್ಥವಾಗದಂತೆ ನೋಡಿಕೊಳ್ಳಲು ಅವಶ್ಯಕತೆ ಬಿದ್ದಾಗ ಕೀಟ ನಾಶಕಗಳನ್ನು ಬಳಸಿ, ಸಮಗ್ರ ಪೀಡೆ ನಿರ್ವಹಣಾ ಕ್ರಮಗಳನ್ನು ಅನುಸರಿಸಿದರೆ ತಪ್ಪೇನೂ ಇಲ್ಲ ಎಂದು ತಜ್ಞರ ಅಭಿಮತ.

ರಾಸಾಯನಿಕಗಳನ್ನು ತ್ಯಜಿಸಿ, ಸಾವಯವ ಬೇಸಾಯಕ್ಕಿಳಿದಾಗ ಮೊದಲಿನ ಕೆಲ ವರ್ಷಗಳಲ್ಲಿ ಇಳುವರಿ ಕಡಿಮೆಯಾಗುವುದು ಸಹಜ. ಧೀರ್ಘಕಾಲೀನ ಲಾಭಗಳನ್ನು ಗಮನದಲ್ಲಿಟ್ಟು ಕೊಂಡಾಗಲೂ, ಉತ್ಪಾದನೆಯಲ್ಲಿಯ ಇಳಿತವನ್ನು ಸಹಿಸಿಕೊಳ್ಳುವುದು ಸಾಮಾನ್ಯ ರೈತನಿಗೂ, ಜನನಿಬಿಡವಾದ ಭಾರತಕ್ಕೂ ಸಾಧ್ಯವಿಲ್ಲ. ಇಂಥ ವಿಷಯಗಳಲ್ಲಿ ದುಡುಕುವುದಕ್ಕಿಂತ ಸಾಧ್ಯಾ ಸಾಧ್ಯತೆಗಳನ್ನು ಪರಿಶೀಲಿಸಿ ಒಂದೊಂದೇ ಹೆಜ್ಜೆ ಇಡುವುದು ಒಳ್ಳೆಯದು.

ಕಾಣೆಯಾಗಲಿರುವ ಹಿತ್ತಲಗಿಡ

'ದೇವನ ಹಳ್ಳಿಯ ಚಕ್ಕೋತ'

''ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಳ ನಾಡಿನ ಸಿಹಿನಿಂಬೆ,
ಬೆಳಗಾವಿಯ ಸವಿ ಸಪೋಟ
ನಂಜನಗೂಡಿನ ರಸಬಾಳೆ
ದೇವನಹಳ್ಳಿಯ ಚಕ್ಕೋತ''

ಹಿಂದೆ ಮೂರನೆ ತರಗತಿ ಕನ್ನಡ ಪಠ್ಯದಲ್ಲಿ ಕಂಡ ಮೇಲಿನ ಸಾಲುಗಳು ನಮಗೆಲ್ಲ ಪರಿಚಿತ. ಕರ್ನಾಟಕದ ಹಲವು ಪ್ರಮುಖ ಸ್ಥಳಗಳಲ್ಲಿ ಹೇರಳವಾಗಿ ಸಿಗುವ ಫಲಗಳನ್ನು ಈ ಪದ್ಯ ಅಭಿವ್ಯಕ್ತಿಸುತ್ತದೆ.

ಚಕ್ಕೋತ ಕನ್ನಡ ನಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೇವನಹಳ್ಳಿ ತಾಲ್ಲೂಕಿನಲ್ಲಿ ದೊರೆಯುವ ಫಲವೆಂದು ಪ್ರಸಿದ್ಧಿ ಪಡೆದಿದೆ. ಅದಕ್ಕಾಗಿ ದೇವನಹಳ್ಳಿ ಬಸ್ ನಿಲ್ದಾಣದ ಆಸುಪಾಸಿನಲ್ಲಿ ವರ್ಷದ ಬಹುಪಾಲು ಚಕ್ಕೋತ ಮಾರಾಟವನ್ನು ಕಾಣಬಹುದು. ನಾವು ಮೊದಲು ಚಕ್ಕೋತ ಮಾರುತ್ತಿದ್ದ ನರಸಿಂಹ ಎಂಬ ಹುಡುಗನನ್ನು ಭೇಟಿ ಮಾಡಿ ಮಾತನಾಡಿಸಿದಾಗ ನಮಗೆ ದೊರೆತ ಮಾಹಿತಿ ಹೀಗಿದೆ.

ಚಕ್ಕೋತ ದೇವನಹಳ್ಳಿಯ ಸುತ್ತಮುತ್ತಲೂ ಹೆಚ್ಚು ಕಂಡು ಬರುವ ಹಣ್ಣು. ದೇವನಹಳ್ಳಿ ಬಳಿಯ ಮೇಲಿನ ತೋಟದಲ್ಲಿ ಮತ್ತು ಅದರ ಪಾಸಿನಲ್ಲೇ ಇರುವ ನಾರಾಯಣ ನಾಯಕನ ತೋಟಗದಲ್ಲಿ ನಮಗೆ ಹೆಚ್ಚಾಗಿ ಕಂಡು ಬಂದಿವೆ. ಇದು ಮನೆಯ ಹಿತ್ತಲು, ಹೊಲದ ಬದುಗಳಲ್ಲಿ ಅಲ್ಲೊಂದು, ಇಲ್ಲೊಂದು ಬೆಳೆಸಿರುವ ಬೆಳೆಯೇ ವಿನಾ ಕೃಷಿಯಾಗಿ ಈ ಬೆಳೆಯ ಮೇಲೆ ಯಾರೂ ಅವಲಂಬಿತವಾಗಿಲ್ಲ. ದೇವನಹಳ್ಳಿಯ ಸುತ್ತಮುತ್ತಲ ಊರುಗಳಾದ ಬೈಚಾಪುರ, ಗೋಖರೆ, ಆವತಿ, ದಾಸರಹಳ್ಳಿ, ಹಾರೋಹಳ್ಳಿ ಮುಂತಾದ ಊರುಗಳಲ್ಲಿ ಈ ಮರಗಳನ್ನು ವಿರಳವಾಗಿ ಕಾಣಬಹುದು.

ಹೆಚ್ಚಿನ ವಿಷಯ ಸಂಗ್ರಹಣೆಗಾಗಿ ನಾರಾಯಣ ನಾಯಕನ ತೋಟದ ರಮೇಶ್ ರವರನ್ನು ಕಂಡಾಗ:

ಎರಡು ತಲೆಮಾರುಗಳ ಹಿಂದೆ ತಮ್ಮ ತಾತನವರು ದೇವನಹಳ್ಳಿಯ ಪ್ರಸಿದ್ಧಿಯ ಫಲವಾದ ಚಕ್ಕೋತವನ್ನು ಆಗಿನ ಮೈಸೂರು ಸಂಸ್ಥಾನಕ್ಕೆ ಹೋಗಿ ಮಹಾರಾಜರಿಗೆ ಫಲಾರ್ಪಣೆ ಮಾಡಿದ್ದರಂತೆ. ಅದರ ಫಲವಾಗಿ ಮಹಾರಾಜರು ಹಣ್ಣಿನ ರುಚಿಗೆ ಮಾರುಹೋಗಿ 'ಸ್ವರ್ಣ ಪದಕ'ವನ್ನು ನೀಡಿದ್ದರಿಂದ ಆ ಗೌರವದ ಸಂಕೇತವಾಗಿ ಈ ಚಕ್ಕೋತವನ್ನು ಇನ್ನೂ ದೇವನಹಳ್ಳಿಯಲ್ಲಿ ಉಳಿಸಿಕೊಂಡು ಬರಲಾಗಿದೆ. ಆದರೆ ಆ ಸ್ವರ್ಣಪದಕ ಈಗ ಲಭ್ಯವಿಲ್ಲ.

ಚಕ್ಕೋತ ಮರವು ನಿಂಬೆಯ ಮರವನ್ನು ಹೋಲುತ್ತದೆ. ಚಕ್ಕೋತ ಹಣ್ಣಿನ ರಚನೆ ಕೂಡ ನಿಂಬೆಹಣ್ಣಿನ ರಚನೆಯನ್ನು ಹೋಲುತ್ತದೆ. ಆದರೆ ಗಾತ್ರದಲ್ಲಿ ಹಿರಿದು. ಒಂದು ಚಕ್ಕೋತದಲ್ಲಿ ಸುಮಾರು 12 ರಿಂದ 15 ತೊಳೆಗಳಿರುತ್ತವೆ. ಮಾಗಿದ ಚಕ್ಕೋತದಿಂದ ದೊರೆಯುವ ಬೀಜವನ್ನು ಭೂಮಿಯಲ್ಲಿ ಬಿತ್ತಿದರೆ ಗಿಡ ಬೆಳೆದು ನಾಲ್ಕೈದು ವರ್ಷಗಳಲ್ಲಿ ಹೂ ಬಿಡುತ್ತದೆ. ಹೂ ಬಿಟ್ಟ ಮೂರು ತಿಂಗಳಲ್ಲೇ ಕಾಯಿಗಳಾಗುತ್ತವೆ. ಕಾಯಿಗಳು ಸಂಪೂರ್ಣ ಬಲಿಯಲು ಆರು ತಿಂಗಳ ಕಾಲಾವಕಾಶ ಬೇಕು. ಅಂದರೆ ವರ್ಷಕ್ಕೆ ಒಂದೇ ಫಲವೆಂದು ಹೇಳುತ್ತಾರೆ. ಆದರೆ ತೆಂಗಿನ ಫಲದಂತೆ ನಿರಂತರವಾಗಿ ಒಂದಲ್ಲ ಒಂದು ಗೊಂಚಲು ಹಣ್ಣನ್ನು ಕೊಡುತ್ತಲೇ ಇರುತ್ತವೆ. ಚೈತ್ರ-ವೈಶಾಖದಲ್ಲಿ (ಮೇ-ಜೂನ್) ಇದರ ಫಲ ಜಾಸ್ತಿ. ಒಂದು ಆರೋಗ್ಯವಂತ ಮರದಲ್ಲಿ ಸುಮಾರು 300 ರಿಂದ 500ರವರೆಗೂ ಹಣ್ಣಗಳನ್ನು ಕಾಣಬಹುದು. ಇದರ ತಳಿಗಳ ಬಗ್ಗೆ ಇವರಿಗೆ ಅಷ್ಟಾಗಿ ಮಾಹಿತಿ ಇಲ್ಲ. ಅವಲಂಬಿತ ಕೃಷಿ ಅಲ್ಲವಾದ್ದರಿಂದ ಕೃಷಿಕರು ಈ ಹಣ್ಣಿನ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ. ಇದಕ್ಕೆ ಕಾರಣ ಸರಿಯಾದ ಮಾರಾಟದ ವ್ಯವಸ್ಥೆ ಇಲ್ಲದಿರುವುದು.

ಈ ಮರದ ಆರೈಕೆಗಾಗಿ ಕೊಟ್ಟಿಗೆ ಗೊಬ್ಬರ ಮತ್ತು ಕೆಮ್ಮಣ್ಣನ್ನು ಮಾತ್ರ ಬಳಸುತ್ತಾರೆ. ಯಾವುದೇ ತರಹದ ರಾಸಾಯನಿಕ ಗೊಬ್ಬರದ ಬಳಕೆಇಲ್ಲ. ವಾರಕ್ಕೊಮ್ಮೆ ಸಿಹಿನೀರು ಹಾಯಿಸಿದರೆ ಸಾಕು, ಕೊಚ್ಚೆ ನೀರು ಮತ್ತು ಸೋಪು ನೀರಿನ ಬಳಕೆಯಾದರೆ ಗಿಡಕ್ಕೆ ಹಾನಿ. ಸಧ್ಯಕ್ಕೆ ಈ ಜನರು ಇದಕ್ಕೆ ತಗಲುವ ರೋಗಗಳನ್ನು ಗುರ್ತಿಸಿಲ್ಲ. ಒಂದು ತರಹದ ನಂಬಿಕೆಯಂತೆ ಎಲೆಗಳು ಹಳದಿ ಬಣ್ಣಕ್ಕೆ ಬಂದಾಗ ಗಿಡವನ್ನು ಬುಡಮೇಲು ಮಾಡುತ್ತಾರೆ. ಸಾಮಾನ್ಯ ಕ್ರಿಮಿ ನಾಶಕಗಳನ್ನು ಅಪರೂಪಕ್ಕೊಮ್ಮೆ ಸಿಂಪಡಿಸುವುದು ರೂಢಿಯಲ್ಲಿದೆ.

ಈ ಗಿಡದ ಆಯಸ್ಸು ಸುಮಾರು 25 ರಿಂದ 30 ವರ್ಷಗಳು. ಈ ಹಣ್ಣಿನ ಔಷಧೀಯ ಗುಣ ಪಿತ್ತದ ಶಮನ. ಇದರ ಸಾಮಾನ್ಯ ರುಚಿ ಹುಳಿ, ಸಿಹಿ ಎಂದೂ ಸಹ ಹೇಳುತ್ತಾರೆ. ಸುಮಾರು 8-10 ಸಂಸಾರಗಳು ಈ ಹಣ್ಣಿನ ಮಾರಾಟದಿಂದ ತಮ್ಮ ಉದರ ಪೋಷಣೆ ಮಾಡಿಕೊಳ್ಳುತ್ತಿವೆ. ಒಂದು ಹಣ್ಣಿನ ಮಾರಾಟ ಬೆಲೆ 8 ರಿಂದ 15 ರೂಪಾಯಿಗಳವರೆಗೂ ಇರುತ್ತದೆ.

ಗೋಪಾಲಕೃಷ್ಣ ಜೋಯಿಸ್ ಹು. ರಂ.
ಮಾರತೀಶ ಜಿ., ಸುಬ್ರಮಣ್ಯ ಪಿ..ಎಂ.
ದೇವನಹಳ್ಳಿ

(5ನೇ ಪುಟದಿಂದ)

ವರ್ಷಕ್ಕೆ ಎರಡು ಮೂರು ಬಾರಿ ಇದನ್ನು ವಾಸನೆ ಕಡಿಮೆಯಾಗುತ್ತಾ ಬಂದಂತೆ ಬದಲಿಸ ಬೇಕಾಗುತ್ತದೆ.

ಇದಕ್ಕೆ ಮನುಷ್ಯಮಲದ ಪ್ರಯೋಗ ನಡೆಸಿದರಂತೂ ಇನ್ನೂ ಹೆಚ್ಚಿನ ಪರಿಣಾಮ ಬರಬಹುದೆಂಬುದು ಪೈಲೂರರ ಅಭಿಪ್ರಾಯ.

ಹೆಗ್ಗಣದ ಕಾಟ ತಡೆಯಲು:

ಕೈತೋಟಗಳಲ್ಲಿ ಗಿಡಗಳಿಗೆ ಹೆಗ್ಗಣಗಳಿಂದಾಗುವ ಹಾನಿಯನ್ನು ತಡೆಯಲು ಒಂದು ಸುಲಭ ಉಪಾಯವುಂಟು. ನಾಟಿ ಮಾಡಲಾದ ಗಿಡಗಳ ಬುಡದ ಸುತ್ತಲೂ ಮಣ್ಣಿನ ಮೇಲೆ (ಪಾತಿಯಲ್ಲಿ) ಸುಮಾರು 2 ಅಡಿ ಅಗಲ ತೆಳುವಾಗಿ ಒಣಗಿದ ಎಲೆ ಅಥವಾ ಹಸಿ ಎಲೆಯುಳ್ಳ ಸಣ್ಣ ಕೊಂಬೆಗಳನ್ನು ಮೇಲ್ ಹೊದಿಕೆಯಾಗಿ ಹಾಕಬೇಕು. ಹೀಗೆ ಮಾಡುವುದರಿಂದ ಹೆಗ್ಗಣಗಳು ಗಿಡದ ಬುಡದ ಸುತ್ತಲೂ ಹರಡಿದ ಎಲೆ ಅಥವಾ ಸೊಪ್ಪನ್ನು ಓರೆಮಾಡಿ ಮಣ್ಣನ್ನು ಕೆರೆದು ತೆಗೆದು ಗಿಡಗಳನ್ನು ಕಿತ್ತು ಹಾಕುವುದಿಲ್ಲ ಎಂಬುದಾಗಿ ಬಿ.ಎಸ್. ಶ್ರೀ ರಾಮುಲು ಅವರ ಸ್ವಂತ ಅನುಭವ.

ಶಾಲೆಯ ಬ್ಯಾಗುಗಳಲ್ಲಿ ಜ್ಞಾನದ ಸರಕು!

- ಜಿ. ಕೃಷ್ಣಾಪ್ರಸಾದ್

ಗ್ರಾಮೀಣಪ್ರದೇಶದಲ್ಲಿ ಬಳಕೆಯಲ್ಲಿರುವ ಔಷಧೀಯ ಸಸ್ಯಗಳನ್ನು ಕುರಿತ ಜ್ಞಾನ ಅಪಾರವಾದದ್ದು. ಪೇಟೆ ಮಂದಿಯ ಹಾಗೆ ಸಣ್ಣ ಪುಟ್ಟ ಕಾಯಿಲೆಗಳಿಗೆಲ್ಲಾ ಡಾಕ್ಟರರಲ್ಲಿಗೆ ಓಡದ ಹಳ್ಳಿಗರು, ತಮ್ಮ ಕೈಯಳತೆಯಲ್ಲೇ ಸಿಗುವ ಗಿಡಮೂಲಿಕೆಗಳನ್ನು ಬಳಸುತ್ತಾ ತಲೆತಲಾಂತರದಿಂದ ಬಂದ ನಾಟೀ ವೈದ್ಯದ ಜ್ಞಾನವನ್ನು ಜೀವಂತಗೊಳಿಸಿದ್ದಾರೆ. ಇಂಥ ಔಷಧೀಯ ಸಸ್ಯಗಳ ಜ್ಞಾನವನ್ನು ದಾಖಲಿಸಲು ಮತ್ತು ಶಾಲಾಮಕ್ಕಳಲ್ಲಿ ಇದರ ಮಹತ್ವದ ಅರಿವು ಮೂಡಿಸಲು 'ನವಧಾನ್ಯ' ಸಂಸ್ಥೆ, ತಮಿಳುನಾಡಿನ, ಜವಳಗಿರಿ ಪ್ರೌಢಶಾಲೆಯಲ್ಲಿ 'ಜೀವ ವೈವಿಧ್ಯ ಸಂರಕ್ಷಣಾ ಸ್ಪರ್ಧೆ' ಏರ್ಪಡಿಸಿತ್ತು. ಮಕ್ಕಳು ತಮ್ಮ ಶಾಲಾ ಬ್ಯಾಗುಗಳಲ್ಲಿ ಔಷಧೀಯ ಸಸ್ಯಗಳ ಬೇರು, ಹಣ್ಣು, ಕಾಯಿ, ಹೂ ಗೊಂಚಲುಗಳನ್ನು ತುಂಬಿ ಹೊತ್ತು ತಂದರು. ಅವರು ತಂದ ಔಷಧೀಯ ಸಸ್ಯಗಳ ಹೊರೆಯಲ್ಲಿ, ಕುತೂಹಲಕಾರಿಯಾದ ಕೆಲವು ಮಾಹಿತಿಗಳು ಇಲ್ಲಿವೆ:

1. 'ವಿಷಧಾರೆ' (Clerodendron inerme) ಬೇಲಿಗೆ ಬಳಸುವ, ಘಾಟು ವಾಸನೆಯುಳ್ಳ ಸಸ್ಯ. ಇದರ ಎಲೆಗಳನ್ನು ಜಜ್ಜಿ, ರಸ ಹಿಂಡಿ, ಒಂದು ಲೋಟದಷ್ಟು ಕುಡಿದರೆ ಸಾಕು. ಕುರು, ಗಾಯ, ಕಜ್ಜಿಗಳಿಂದ ಮುಕ್ತಿ ಸಿಗುತ್ತದೆ. ಈ ರಸ ಕುಡಿದ ದಿನ ಅನ್ನ-ಹಾಲಿನ ಪಥ್ಯ ಇರಬೇಕು.

2. ದನಗಳಿಗೆ ಕುಂದು ಬಂದಾಗ ಕಕ್ಕೆಗಿಡ (Cassia fistula) ಎಲೆಗಳನ್ನು ಮತ್ತು ಎಳ್ಳುಗಿಡದ (Sesame) ಒಣಗಿದ ಕಡ್ಡಿಗಳನ್ನು ಬೆಂಕಿಯಲ್ಲಿ ಹಾಕಿ, ಅದರಿಂದ ಏಳುವ ಹೊಗೆಯನ್ನು ದನಕ್ಕೆ ಹಿಡಿದರೆ, ಕಾಯಿಲೆ ಮೇಲಾಗುತ್ತದೆ.

3. ನಾಯಿ ಕಚ್ಚಿದಾಗ : ಹಲಸಿನ ಮರದ ಕಾಂಡವನ್ನು ಗಾಯ ಮಾಡಿ, ಅದರಿಂದ ಒಸರುವ ಅಂಟು ಹಾಲನ್ನು ಸಂಗ್ರಹಿಸಿಕೊಳ್ಳಬೇಕು. ಈ ಹಾಲನ್ನು ನಾಯಿ ಕಚ್ಚಿದ ಜಾಗದಲ್ಲಿ ಸವರಿ, ಅದರ ಮೇಲೆ ಹಳೆಯ ತಾಮ್ರದ ನಾಣ್ಯವನ್ನು (ಗುಡ್ಡುಕಾಸು) ಮೆತ್ತಬೇಕು; ಗಾಯ ಮಾಗಿದ ಮೇಲೆ ನಾಣ್ಯ ಬಿದ್ದು ಹೋಗುತ್ತದೆಯಂತೆ.

4. ಕೆಮ್ಮಿಗೆ: ನವಿಲುಗರಿಯ ಬುಡದಲ್ಲಿರುವ ಬಿಳಿಯ ದಿಂಡನ್ನು, ಪುಡಿ ಮಾಡಿ, ಜೇನುತುಪ್ಪದಲ್ಲಿ



ಬೆರಸಿ ನೆಕ್ಕಬೇಕು. ಹೀಗೆ ಮಾಡಿದರೆ ಕೆಮ್ಮು ಕಾಣೆಯಾಗುತ್ತದೆ.

5. ಈಶ್ವರೀ ಬೇರನ್ನು (Aristolochia bracteata) ಹಸುರಿನ ಗಂಜಲದಲ್ಲಿ ತೇದು, ಹುಳುಕಡ್ಡಿ ಇರುವ ಭಾಗದಲ್ಲಿ ಹಚ್ಚಿದರೆ, ಹುಳುಕಡ್ಡಿ ಕಾಟ ಇಲ್ಲವಾಗುತ್ತದೆ.

6. ದನಗಳಿಗೆ ಕೆಮ್ಮು ಬಂದಾಗ : ಉಮ್ಮತ್ತಿ (Argemone mexicana) ಗಿಡದ ಬೇರು, ಲವಂಗ, ವೀಳ್ಯದೆಲೆ ಮತ್ತು ಬೆಳ್ಳುಳ್ಳಿಯನ್ನು ಚೆನ್ನಾಗಿ ಅರೆದು, ಬಿಸಿನೀರಲ್ಲಿ ಬೆರೆಸಿ, ಗೊಟ್ಟದಿಂದ ದನಗಳಿಗೆ ಕುಡಿಸಬೇಕು. ಇದರಿಂದ ಕೆಮ್ಮು ಕಡಿಮೆಯಾಗುತ್ತದೆ.

- ಚಂದ್ರಶೇಖರ ಎಂ., 9ನೇ ತರಗತಿ

7. ಗುಳಿ ಸುಂಡೇಗಿಡದ (Solanum indicum) ಕಾಯಿಗಳನ್ನು ಕಿತ್ತು, ತೊಳೆದು, ಜಜ್ಜಿ, ತೊಗರಿ ಬೇಳೆ ಜೊತೆ ಸೇರಿಸಿ ಸಾರು ಮಾಡಬೇಕು. ಸಾರಿಗೆ ಹುಳಿ ಕೊಡಬಾರದು. ಈ ಸಾರನ್ನು ಆಗಾಗ ಮಾಡಿ ತಿಂದರೆ ಮೊಳಕಾಲು ನೋವು (ವಾಯು), ಮೈಕೈ ನೋವು, ಪಿತ್ತ ಇಲ್ಲದಂತಾಗುತ್ತದೆ. ಸುಂಡೇಗಿಡದ ಕಾಯಿಗಳನ್ನು ಜಜ್ಜಿ, ಕೈಕಾಲಿನ ಕೀಲುಗಳ ಬಳಿ ಬಳಿದು, ಗಿಡದ ಬುಡದಲ್ಲಿರುವ ಹಸಿ ಮಣ್ಣನ್ನು ಮೆತ್ತಿದರೂ ಕೂಡ ಒಳ್ಳೆ ಫಲಿತಾಂಶ ಕಾಣಬಹುದು.

8. ತಲೆನೋವು, ಕಣ್ಣಲ್ಲಿ ನೀರು ಸುರಿದರೆ: ತಂಗಟಿಗಿಡದ (Cassia auriculata) ಎಲೆಗಳನ್ನು ಬಿಡಿಸಿಕೊಂಡು, ಅದನ್ನು ಮಜ್ಜಿಗೆ ಜೊತೆ ಸೇರಿಸಿ ಚೆನ್ನಾಗಿ ಅರೆಯಬೇಕು. ಇದನ್ನೆಲ್ಲಾ ತಲೆಗೆ ಹಾಕಿ, ಬಟ್ಟೆಯಿಂದ ಕಟ್ಟಬೇಕು. ಇಡೀ ದಿನ ಬಿಟ್ಟು, ಸಂಜೆಗೆ ಸ್ನಾನ ಮಾಡಬೇಕು. ಇದರಿಂದ ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು ನಿಲ್ಲುತ್ತದೆ.

ನಾಗವೇಣಿ, 9ನೇ ತರಗತಿ

9. ತೊಡೆಯಲ್ಲಿ ಕುರು ಎದ್ದಾಗ, ನೀರು ತಾವರೆ ಎಲೆಗೆ ಹರಳೆಣ್ಣೆ ಸವರಿ, ಉಗುರಿನಿಂದ ಇಡೀ ಎಲೆಯನ್ನು ಸಣ್ಣ ಸಣ್ಣದಾಗಿ ಚಿವುಟಿ ಗಾಯ ಮಾಡಬೇಕು. ನಂತರ ಚಿವುಟಿ ಗಾಯ ಮಾಡಿದ ತಾವರೆ ಎಲೆಯನ್ನು ಕೆಂಡದ ಮೇಲೆ ಇಟ್ಟು, ಅರಬೆಂದ ನಂತರ ಕುರುವಿನ ಮೇಲೆ ಹಾಕಿ ಬಟ್ಟೆಯಿಂದ ಕಟ್ಟು ಹಾಕಬೇಕು. ಇದರ ಪರಿಣಾಮವಾಗಿ ಕುರು ಬೇಗ ಒಡೆದು ಮಾಯುತ್ತದೆ.

- ಹೇಮಾಕ್ಷಿ, 9ನೇ ತರಗತಿ

10. ಕಿವಿ ನೋವು ಬಂದಾಗ ಗಮಗಗ್ಗರಿ (Ocimum basilicum) ಗಿಡದ ಎಲೆಗಳನ್ನು, ಜಜ್ಜಿ ಬರುವ ರಸವನ್ನು ಕಿವಿಯೊಳಗೆ ಹಿಂಡಬೇಕು. ಇದರಿಂದ ಕಿವಿನೋವು ನಿವಾರಣೆಯಾಗುತ್ತದೆ.

- ಜಯಮ್ಮ, 8ನೇ ತರಗತಿ

11. ದನಗಳಿಗೆ ಹೆಗಲುಗಾಯ ಆದಾಗ, ಅಡ್ಡಿಕೆ ಸೊಪ್ಪಿನ (Tridax procumbem) ರಸ ಬಳಿದರೆ ಗುಣವಾಗುತ್ತದೆ.

12. ದನಗಳಿಗೆ ಬೇಧಿ ಆಗುತ್ತಿದ್ದರೆ, ನೀರು ಗಣಿಗಲು ಗಿಡದ ಸೊಪ್ಪನ್ನು, ಮೊಸರಲ್ಲಿ ಅರೆದು ಕುಡಿಸಬೇಕು.

- ಜ್ಯೋತೀಷ್, 9ನೇ ತರಗತಿ

13. ಬೇಸಿಗೆಯಲ್ಲಿ ಆಡು ಹರಳೆಲೆ (Castor) ತಿಂದು ಸೊಕ್ಕು ಬೀಳುವುದು ಸರ್ವೇಸಾಮಾನ್ಯ. ಇಂಥ ವೇಳೆಯಲ್ಲಿ ಹೊಸ ಸುಣ್ಣವನ್ನು ಎಕ್ಕದ ಎಲೆಗಳ (Calotoripis) ಜೊತೆ ಕುಟ್ಟಿ, ಬಟ್ಟೆ ಸೋಪಿನ ನೊರೆಯೊಂದಿಗೆ ಸೇರಿಸಿ ಕುಡಿಸಬೇಕು.

- ಮಾದೇಶ, 7ನೇ ತರಗತಿ

ನಾಟಿ ಪಶುಸಂಗೋಪನಾ ವಿಧಾನಗಳು

1. ಹಸುಗಳು ಬೇಗ ಬೆದೆಗೆ ಬರಿಸಲು:

'ನಾವಿಬ್ಬರು, ನಮಗಿಬ್ಬರು' ಐದು ವರ್ಷದ ಹಿಂದಿನ ಮಾತು. ಈಗ 'ನಾವಿಬ್ಬರು, ನಮಗೊಂದು.' ಆದರೆ ಈ ಮಾತು ರೈತನ ಹಸುಗಳ ಸಂತತಿಗೆ ಅನ್ವಯಿಸುವುದಿಲ್ಲ. ಬೆದೆಗೆ ಬಾರದ ಹಸು, ರೈತನಿಗೊಂದು ಸಮಸ್ಯೆ. ಉತ್ತರ ಕನ್ನಡದ ಶಾಂತಾರಾಂ ಸಿದ್ಧಿಯವರಲ್ಲಿ ಒಂದು ಉಪಾಯ. ಮುಂಡುಗ ಗಿಡ (ವಲಿಂಡೆವು। ಮುಂಡಿಗೆ ಚೆಟ್ಟು) ದ ಸುಳಿಯನ್ನು ಬೆದೆಗೆ ಬಾರದೆ ಸತಾಯಿಸುತ್ತಿರುವ ಹಸುಗಳಿಗೆ ತಿನಿಸಿದರೆ ಹಸುಗಳು ಬೇಗೆ ಬೆದೆಗೆ ಬರುತ್ತವೆಯಂತೆ. ಮುಂಡುಗದ ಸುಳಿ ಸುಮಾರು ಒಂದು ಕೆ.ಜಿ.ಯಷ್ಟು ಇದ್ದರೆ ಸಾಕೆನ್ನುತ್ತಾರೆ ಶ್ರೀ ಶಾಂತಾರಾಮ್.

2. ಗರ್ಭಪಾತ ತಡೆಯಲು/ಸುಖಪ್ರಸವ ಮಾಡಲು:

ಬೆದೆಗೆ ಬಂದ ಹಸು ಗರ್ಭಧರಿಸಬೇಕು. ಗರ್ಭ ಧರಿಸಿದ ಹಸುವಿನಲ್ಲಿ ಗರ್ಭಪಾತವಾಗದಂತೆ ನೋಡಿ ಕೊಳ್ಳುವುದು ರೈತನ ಜವಾಬ್ದಾರಿ. ಈ ಸಮಯದಲ್ಲಿ, ಉತ್ತರ ಕನ್ನಡದ ಆಶೀಸರದ ನರಸಿಂಹ ಮೂರ್ತಿಯವರು ರೈತರಿಗೊಂದು ಕಿವಿಮಾತನ್ನು ಹೇಳುತ್ತಾರೆ. 'ನಿಮ್ಮ ಹಸು ಬಿದಿರು ಸೊಪ್ಪನ್ನು ತಿನ್ನದಂತೆ ನೋಡಿಕೊಳ್ಳಿ.'

ಸಮಯಕ್ಕೆ ಸರಿಯಾಗಿ ಹಸು ಕರು ಹಾಕಲಿಲ್ಲವೇ? ಸುಮಾರು ಒಂದು ಕೆ.ಜಿಯಷ್ಟು ಕಬ್ಬಿನ ಮೇಲಿನ (ತುದಿಯ) ಎಲೆಯನ್ನು ಗಬ್ಬದ ಹಸುಗಳಿಗೆ ತಿನಿಸಿದರೆ ಅವು ಬೇಗೆ ಕರು ಹಾಕುತ್ತವೆ' - ಎನ್ನುತ್ತಾರೆ ಉತ್ತರ ಕನ್ನಡದ ಶಾಂತಾರಾಂ ಸಿದ್ಧಿ. ಕರು ಹಾಕುವಾಗ ಗರ್ಭಕೋಶ ಹೊರ ಬಂದರೆ ಹಸುವಿನ ಜೀವಕ್ಕೇ ಅಪಾಯ. ಆದಕ್ಕೊಂದು ಉಪಾಯ ಕಾರವಾರದ ಎಸ್.ಎಸ್. ಕಾಮತ್ ರಿಂದ. 'ಒಂದೆರಡು ಮುಷ್ಠಿ ನಾಚಿಕೆ ಮುಳ್ಳನ್ನು ಸಂಗ್ರಹಿಸಿ. ಅದರಿಂದ ರಸ ತೆಗೆದು, ಕೈಗೆ ಹಚ್ಚಿಕೊಂಡು ನಿಧಾನವಾಗಿ ಗರ್ಭಕೋಶವನ್ನು ಒಳದೂಡಿರಿ. ತೊಂದರೆ ತಪ್ಪುತ್ತದೆ. ನೆನಪಿಡಿ ನಾಚಿಕೆ ಮುಳ್ಳಿನ ರಸಕ್ಕೆ ನೀರು ಸೇರಿಸಬೇಡಿ.

3. ಹಾಲು ಹೆಚ್ಚಿಸಲು :

ಕರು ಹಾಕಿದ ನಂತರ ನೆರೆಹೊರೆಯವರು ಕೇಳುವ ಸಾಮಾನ್ಯ ಪ್ರಶ್ನೆ - 'ಹಸು ಹಾಲು ಎಷ್ಟು



ಕೊಡುತ್ತದೆ?' ಹಾಲು ಹೆಚ್ಚಾಗಬೇಕೆ? ಹಾಗಾದರೆ ಬೈನೆ ಎಲೆ ಸಸಿಯ ಗಡ್ಡೆಯನ್ನು ಕರು ಹಾಕಿದ ನಂತರದ ಒಂದು ತಿಂಗಳಲ್ಲಿ ದಿನವೂ ಬೇಯಿಸಿಕೊಟ್ಟರೆ ಹಾಲು ಹೇರಳವಾಗುತ್ತದೆ ಎನ್ನುತ್ತಾರೆ ಚಿಟ್ಟನ ಹಳ್ಳಿಯ ನಾರಾಯಣ ಸಿದ್ದಿ. ಪ್ರಮಾಣದ ಬಗ್ಗೆ ಹೇಳುತ್ತಾ, 'ಒಂದು ಸಮಯಕ್ಕೆ ಒಂದು ಕೆ.ಜಿಯಷ್ಟು ಗಡ್ಡೆಯನ್ನು ಬೇಯಿಸಿ' ಎನ್ನುತಾರೆ.

4. ಹೊಟ್ಟೆ ಹುಳುವಿನ ಬಾಧೆ ತಡೆಯಲು :

ಹುಟ್ಟಿದ ಕರುಗಳಲ್ಲಿ ಹೊಟ್ಟೆ ಹುಳದ ಭಾದೆ ಸಾಮಾನ್ಯ. ಉಪಯೋಗಕ್ಕೆ ಬಾರದ ಪಪ್ಪಾಯಿ ಬೀಜದ ಉಪಯೋಗ ಅಡ್ಯನಡ್ಕದ ನೆಕ್ಕರೆ ರಾಮಚಂದ್ರ ಶಾಸ್ತ್ರಿಗಳಿಂದ ಹೀಗೆ 100 ಗ್ರಾಂ ಹಸಿ ಪಪ್ಪಾಯಿ ಬೀಜವನ್ನು ಕುಟ್ಟಿ 1 ಲೀ. ನೀರಿನಲ್ಲಿ ಕರುಗಳಿಗೆ ಕುಡಿಸಿದರೆ ಹೊಟ್ಟೆ ಹುಳದ ಭಾದ ಕಡಿಮೆಯಾಗುತ್ತದೆ.

5. ಗರಟು ಬಾವು :

ಗರಟು ಬಾವು ಕರುಗಳಿಗೆ ಬರುವ ಇನ್ನೊಂದು ರೋಗ. ಕರುಗಳ ಬಾಯಿಯ ಕೆಳಭಾಗ ಊದಿಕೊಂಡಿರುತ್ತದೆ. ಈ ಸಮಯದಲ್ಲಿ ಆಹಾರ ಸೇವನೆ. ಹಾಗೂ ಮೆಲುಕು ಹಾಕುವುದು ಕರುಗಳಿಗೆ ತೊಂದರೆ. ಪಟ್ಟಣಗಳಲ್ಲಿ ಸಿಗುವ ಔಷಧಿಗಳು ಪರಿಣಾಮಕಾರಿಯಾದರೂ ಶಾಶ್ವತ ಪರಿಹಾರ ಒದಗಿಸುವುದಿಲ್ಲ. ಅದಕ್ಕಾಗಿ ತುದಿ ಸುಟ್ಟ ತೆಂಗಿನ ಕರಟವನ್ನು ಚಿತ್ರದಲ್ಲಿ ಚಿತ್ರದಲ್ಲಿ ತೋರಿಸಿದ ಹಾಗೆ ಕರುಗಳ ಕುತ್ತಿಗೆಗೆ ಕಟ್ಟಿ. ಕರು ಎರಡೇ ವಾರದಲ್ಲಿ ಮೊದಲ ಸ್ಥಿತಿಗೆ ವಾಪಸ್ ಅಷ್ಟೇ ಏಕೇ? ಪರಿಹಾರ ಶಾಶ್ವತ ಎಂದು ಹೇಳುತ್ತಾರೆ ಗೆಣಸಿನ ಕುಣಿಯ ಪ್ರಭಾಕರ್.

6. ಉಣುಗು :

ಹಸು ಕರುಗಳ ಮೈಮೇಲೆ ಕೂತು ರಕ್ತ ಹೀರಿ ಬದುಕುವ ಉಣುಗು (ticks) ಕೊಡುವ ಉಪಟಳ ಊಹೆಗೂ ಅಸಾಧ್ಯ. ಹಾಗೂ ಬಹಳ ಸಾಮಾನ್ಯ. ಆಶೀಸರದ ನರಸಿಂಹ ಮೂರ್ತಿಯವರು ಲಂಟಾನ ಗಿಡದ ಟೊಂಗೆಯನ್ನು ಸೊಪ್ಪು ಸಮೇತ ಮುರಿದುಕೊಂಡು ಬಂದು ಕೊಟ್ಟಿಗೆಯಲ್ಲಿ ಹಾಸಿಬಿಟ್ಟರಂತೆ, ಉಣುಗುಗಳೆಲ್ಲಾ 'ಲಟಲಟ' ಎಂದು ಉದುರಿಹೋದುವು ಎಂದು ಅನುಭವದ ಮಾತನಾಡುತ್ತಾರೆ ನರಸಿಂಹಮೂರ್ತಿ.

– *ಅರುಣಕುಮಾರ್ ವಿ.ಕೆ.*

7. ಅಜೀರ್ಣ ತಡೆಯಲು :

ದೇವನಹಳ್ಳಿ ತಾಲ್ಲೂಕಿನಾದ್ಯಂತ ಕಂಡು ಬರುವ ಹಾಲವಾಣ ಥರದ್ದು 'ಹುಚ್ಚೆಳ್ಳು' (Erythrina Indica) ಎಂದು ಕರೆಯಲ್ಪಡುವ ಒಂದು ಗಿಡದ ಚಿಕ್ಕ ಕಾಂಡಗಳನ್ನು ದನಗಳಿಗೆ ಅಜೀರ್ಣವಾಗಿ ಮೆಲುಕು ಹಾಕುವುದನ್ನು ನಿಲ್ಲಿಸಿದಾಗ ತಿನ್ನಿಸುವುದರಿಂದ ಅವುಗಳು ಗುಣಮುಖವಾಗುವುದು ತಿಳಿದು ಬಂದಿದೆ.

– *ಗೋಪಾಲಕೃಷ್ಣಜೋಯಿಸ್ ಹು.ರಂ,*
ಮಾರುತೀಶ ಜೆ, ಸುಬ್ರಹ್ಮಣ್ಯ ಪಿ.ಎಂ.

8. ಎತ್ತುಗಳ ನರ ಉಳುಕಿದಿಯೆ?

ಎತ್ತುಗಳಿಗೆ ನರ ಹೊರಳುವುದು/ ಉಳುಕುವುದು ಸಾಮಾನ್ಯ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾ. ರೈತರು ಕೆಲವು ನಾಡ ಔಷಧಿಗಳನ್ನು ಬಳಸುತ್ತಾರೆ. ಸ್ನಾನದ ಸಾಬೂನನ್ನು ತೆಗೆದುಕೊಂಡು ಸಣ್ಣ ತುಂಡು ಮಾಡಬೇಕಂತೆ. ನಂತರ ಈ ಸಾಬೂನಿನ ಪುಡಿಗೆ ಕೋಳಿ ಮೊಟ್ಟೆಯ ತಿರುಳನ್ನು ಬೆರೆಸುತ್ತಾರೆ. ಈ ಮಿಶ್ರಣವನ್ನು ನರ ಜಾರಿದ/ಹೊರಳಿದ ಜಾಗಕ್ಕೆ ಲೇಪಿಸುತ್ತಾರೆ. ಕ್ರಮೇಣ ಗಟ್ಟಿಯಾಗುವ ಈ ಮಿಶ್ರಣ, ಎತ್ತುಗಳು ಕಾಲನ್ನು ಜಾಡಿಸಲು ಪ್ರಚೋದಿಸುತ್ತವೆ. ಇದರಿಂದಾಗ ಸ್ಥಾನ ಪಲ್ಲಣಗೊಂಡ ನರ ಯಥಾಸ್ಥಾನಕ್ಕೆ! ಎರಡೂ ಯಾ ಮೂರು ಬಾರಿ ಲೇಪನ ಸಾಕು.

ಕೆ.ಎ. ಪರಶಿವಮೂರ್ತಿ.

9. ನಿಮ್ಮ ಹಟ್ಟಿಯಲ್ಲಿ ಇಂತಹ ಸಮಸ್ಯೆಯಿದೆಯೇ ?

ಶ್ರೀಕೃಷ್ಣ ಒಬ್ಬ ಗೋಪಾಲಕ ಅಲ್ಲವೇ? ಆತನ ಕೊಳಲ ಇಂಪಾದ ದನಿಗೆ ಹಸುಗಳು ಹಾಲನ್ನು ಸುರಿಸುತ್ತಿದ್ದವಂತೆ. ದನಿಯಿದ್ದಾಗ ಹಾಲಿಳಿಸಿದರೆ ಸಂಗ್ರಹಿಸಲು ವ್ಯವಸ್ಥೆ ಮಾಡಬಹುದು. ಬದಲಾಗಿ, ಯಾವ ಸಂಗೀತವೂ ಇಲ್ಲದಾಗ ಹಾಲು ತೊಟ್ಟಿಕ್ಕಿದರೆ.... ?

ಶಿರಸಿ ತಾಲೂಕಿನ ಅಶೀಸರ ಗ್ರಾಮದ ಎನ್.ವಿ. ಹೆಗಡೆ ಅವರ ಹಟ್ಟಿಯಲ್ಲಿ ಇಂತಹದ್ದೊಂದು ಸಮಸ್ಯೆ. ಪರಿಹಾರ ಸಿಕ್ಕಿದ್ದು ಆಯುರ್ವೇದ ಗ್ರಂಥದಲ್ಲಿ!

ಸ್ಫಟಿಕ ಗೊತ್ತಲ್ಲ. 10 ಗ್ರಾಂ. ಸ್ಫಟಿಕವನ್ನು ಒಂದು ಲೋಟ ನೀರಿನಲ್ಲಿ ಹಾಕಿ, ರಾತ್ರಿ ಹಾಗೆ ಬಿಡಿ, ಬೆಳಗ್ಗೆ ಹಾಲು ಒಸರುವ ಮೊಲೆಗಳನ್ನು ಲೋಟದಲ್ಲಿರುವ ನೀರಿನಲ್ಲಿ ಅದ್ದಿ ತೆಗೆಯಿರಿ. ನಿತ್ಯವೂ ಹೀಗೆ, ದಿನಕ್ಕೆರಡು ಬಾರಿ, ವಾರದವರೆಗೂ ಸ್ಫಟಿಕದ ನೀರಿನ ಸ್ಪರ್ಶ ಆದರೆ ಸಾಕು. ಹೆಚ್ಚು ದಿನ ಅದ್ದಿದರೆ? ಖಂಡಿತ ಯಾವ ತೊಂದರೆಯೂ ಆಗದೇನ್ನುವ ಹೆಗಡೆಯವರಿಗೆ ಶಾಶ್ವತವಾದ ಪರಿಹಾರ ದೊರೆತಿದೆ.

10. ಕೆಚ್ಚಲು ಬಾವೆ ?

ಕೆಚ್ಚಲು ಬಾವಿನಿಂದ ನರಳುತ್ತಿರುವ ಆಕಳ ಕೆಚ್ಚಲನ್ನು ಮುಟ್ಟುವ ಧೈರ್ಯ ತಾವು ಮಾಡಿದ್ದರೆ, ಖಂಡಿತ ನಿಮ್ಮ ಕೆಚ್ಚೆದೆಯನ್ನು ಮೆಚ್ಚಲೇಬೇಕು!

ಕೆಚ್ಚೆದೆಯಿಲ್ಲದವರಿಗಾಗಿ, ಸರಳ ಚಿಕಿತ್ಸೆ/ಮದ್ದನ್ನು ವರ್ತೂರಿನ ಶ್ರೀ ಎಲ್. ನಾರಾಯಣ ರೆಡ್ಡಿ ಹೀಗೆ ತಿಳಿಸುತ್ತಾರೆ. 'ಬಿದ್ದ ಅಡಿಕೆ ಮರದ ಎಲೆಯನ್ನು ಸುಟ್ಟು, ನಂತರ ಸಿಗುವ ಬೂದಿಗೆ ತುಸು ಹರಳೆಣ್ಣೆ ಬೆರಸಿ ಪೇಸ್ಟ್ ಮಾಡಿಕೊಳ್ಳಿ, ಕೆಚ್ಚಲಿಗೆ ಧೈರ್ಯದಿಂದ ಲೇಪನ ಮಾಡಿ. ದಿನಕ್ಕೆ ಎರಡು ಸಲ, ಮೂರು ದಿನ ಸಾಕು.

ಆಕಳ ಆರೋಗ್ಯ ಮತ್ತೆ ಮೊದಲ ಹಾದಿಯಲ್ಲಿ....

– ಆನಂದ, ಅ.ಶ್ರೀ.

ಕರುಹಾಕಿದ ತಕ್ಷಣದ ಪಶುಪಾಲನೆ :

ಒಂದು ಸರಿ ಕ್ರಮ : ಮತ್ತೊಂದು ತಪ್ಪು ಕ್ರಮ

ಡಾ. ಎಂ. ನಾರಾಯಣಸ್ವಾಮಿ

ಕೋಲಾರ, ಬೆಂಗಳೂರು, ತುಮಕೂರು ಮತ್ತಿತರ ಜಿಲ್ಲೆಗಳ ರೈತರು ಕರುಹಾಕಿದ ತಕ್ಷಣ ತಾಯಿ ಹಸುವಿನ ಪಾಲನೆಗಾಗಿ ಎರಡು ಕ್ರಮಗಳನ್ನು ಕೈಗೊಳ್ಳುತ್ತಾರೆ. ಅವೆಂದರೆ ಒಂದನೆಯದಾಗಿ ಸುಮಾರು ಮೂರ್ನಾಲ್ಕು ಹಿಡಿಗಳಷ್ಟು ಬಿದಿರಿನ ಎಲೆಗಳನ್ನು ತಾಯಿ ಹಸುವಿಗೆ ತಿನ್ನಿಸುವುದು, ಎರಡನೆಯದಾಗಿ ಮೊದಲ ಒಂದೆರಡು ದಿನಗಳ ಕಾಲ ಭತ್ತದ ಹುಲ್ಲನ್ನು ಸಂಪೂರ್ಣ ಆಹಾರವಾಗಿ ನೀಡುವುದು.

ಬಿದಿರಿನ ಹುಲ್ಲು ತಿನ್ನಿಸುವಿಕೆ ; ಸರಿ ಕ್ರಮ :

ತಮ್ಮ ಹಸು ಕರು ಹಾಕುವ ಚಿಹ್ನೆಗಳನ್ನು ತೋರುತ್ತಿದ್ದಂತೆ ರೈತರು ಮೂರ್ನಾಲ್ಕು ಹಿಡಿಗಳಷ್ಟು ಬಿದಿರಿನ ಎಲೆಗಳನ್ನು ಕಿತ್ತು ತರುತ್ತಾರೆ. ಕರುಹಾಕಿದ ತಕ್ಷಣ ಆ ಬಿದಿರಿನ ಎಲೆಗಳನ್ನು ಹಸುವಿಗೆ ತಿನ್ನಿಸಲಾಗುತ್ತದೆ. ರೈತರ ನಂಬಿಕೆಯ ಪ್ರಕಾರ ಬಿದಿರಿನ ಎಲೆಗಳು ಸತ್ತೆ (ಪ್ಲಾಸೆಂಟಾ)ಯನ್ನು ಹೊರಹಾಕಲು ಸಹಕಾರಿ.

ರೈತರ ನಂಬಿಕೆಗೆ ವೈಜ್ಞಾನಿಕತೆಯ ಆಧಾರ ಸಿಕ್ಕಿದ್ದು 1972ರಲ್ಲಿ. ಭಾರತೀಯ ಪಶು ಸಂಶೋಧನ ಸಂಸ್ಥೆಯ ತ್ರಿಚೂರ್ ಕೇಂದ್ರವು ಬಿದಿರಿನ ಎಲೆಗಳಲ್ಲಿ 'ಈಸ್ಟ್ರೋಜನ್ ಫ್ಯಾಕ್ಟರ್' ಇದೆಯೆಂಬುದನ್ನು ಕಂಡು ಹಿಡಿಯಿತು. ಈಸ್ಟ್ರೋಜನ್ ಮೃದು ಮಾಂಸಖಂಡವನ್ನು ಹಿಂಡುವ ಗುಣವನ್ನು ಹೊಂದಿರುತ್ತದೆ. ಬಿದಿರಿನ ಎಲೆಗಳಲ್ಲಿರುವ ಈಸ್ಟ್ರೋಜನ್ ಫ್ಯಾಕ್ಟರ್ ಗರ್ಭಚೀಲದ ಮೃದು ಮಾಂಸಖಂಡವನ್ನು ಹಿಂಡುವ ಮೂಲಕ ಸತ್ತೆಯನ್ನು ಹೊರಹಾಕುತ್ತದೆ. ಈ ಕಾರಣಗಳಿಗಾಗಿ ಸತ್ತೆ ಹೊರಬೀಳಲು ಬಿದಿರಿನ ಎಲೆಗಳನ್ನು ತಿನ್ನಿಸುವಿಕೆ ಸರಿಯಾದ ಕ್ರಮವಾಗಿರುತ್ತದೆ.

ಭತ್ತದ ಹುಲ್ಲಿನ ಆಹಾರ : ತಪ್ಪು ಕ್ರಮ :

ಹಸುವಿನ ಜಠರ ಮತ್ತು ಕರುಳು ಬಳಲಿರುತ್ತದೆಯಾದ್ದರಿಂದ ಮೆತುವಾದ ಆಹಾರವನ್ನಾಗಿ ಭತ್ತದ ಹುಲ್ಲನ್ನು ಕರುಹಾಕಿದ ನಂತರ ಒಂದೆರಡು ದಿನ ನೀಡಬೇಕೆಂಬ ತಪ್ಪು ಕಲ್ಪನೆ ರೈತರಲ್ಲಿದೆ. ಭತ್ತದ ಹುಲ್ಲನ್ನು ಸಂಪೂರ್ಣ ಆಹಾರವನ್ನಾಗಿ ನೀಡುವುದರಿಂದ ಹಲವಾರು ದುಷ್ಪರಿಣಾಮಗಳಾಗುತ್ತವೆ.

ಭತ್ತದ ಹುಲ್ಲಿನಲ್ಲಿರುವ ಆಕ್ಸಲೇಟ್ಸ್ (Oxalates) ಎಂಬ ರಾಸಾಯನಿಕ ವಸ್ತುಗಳು ಹಸುವಿನ ದೇಹದಲ್ಲಿರುವ ಕ್ಯಾಲ್ಸಿಯಂ ಲವಣದೊಂದಿಗೆ ಕೂಡಿಕೊಂಡು, ಅಂತಿಮವಾಗಿ ಕ್ಯಾಲ್ಸಿಯಂ ಕೊರತೆಯನ್ನುಂಟುಮಾಡುತ್ತವೆ. ಒಂದು ಲೀಟರ್ ಹಾಲು ಉತ್ಪಾದನೆಗೆ 1.2 ಗ್ರಾಂ. ಕ್ಯಾಲ್ಸಿಯಂ ಬೇಕಾಗುತ್ತದೆ. 500 ಕೆ.ಜಿ. ತೂಕದ ಹಸುವೊಂದು ದಿನಕ್ಕೆ 10 ಲೀಟರ್‌ಗಳಷ್ಟು ಹಾಲನ್ನು ಕೊಡುತ್ತಿದ್ದರೆ ಹಾಲು ಉತ್ಪಾದನೆಗೆ 12 ಗ್ರಾಂ. ಕ್ಯಾಲ್ಸಿಯಂ, ದೈಹಿಕ ನಿರ್ವಹಣೆಗಾಗಿ 14 ಗ್ರಾಂ. ಕ್ಯಾಲ್ಸಿಯಂ ಅಗತ್ಯ. ಆದರೆ ಭತ್ತದ ಹುಲ್ಲನ್ನು ಅತಿ ಹೆಚ್ಚಾಗಿ ತಿನ್ನಿಸಿದರೆ ಕ್ಯಾಲ್ಸಿಯಂ ಕೊರತೆ ಉಂಟಾಗಿ ಹಾಲು ಉತ್ಪಾದನೆ ಕುಂಠಿತಗೊಳ್ಳುವುದರ ಜೊತೆಗೆ ದೇಹ ನಿತ್ರಾಣಗೊಂಡು 'ಹಾಲು ಜ್ವರ (Milk Fever) ಬರಬಹುದಾದ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಆದ್ದರಿಂದ ಭತ್ತದ ಹುಲ್ಲನ್ನು ಸಂಪೂರ್ಣ ಆಹಾರವನ್ನಾಗಿ ನೀಡುವುದು ತಪ್ಪು ಕ್ರಮ.

ಡಾ. ಬಿ. ಆರ್. ಹೆಗ್ಡೆ

ಹಿತ್ತಲ ಗಿಡಕ್ಕೆ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡುವ ಮೂಲಕ ಇದರ ಬೆಳವಣಿಗೆಗೆ ಶ್ರಮಿಸಿರುವ ಡಾ. ಬಿ.ಆರ್. ಹೆಗ್ಡೆಯವರು ಬೆಂಗಳೂರು ಕೃ.ವಿ.ವಿ.ಯ ನೂತನ ಸಂಶೋಧನಾ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಡಾ. ಬಿ.ಆರ್. ಹೆಗ್ಡೆಯವರು ಬೇಸಾಯಶಾಸ್ತ್ರ, ಒಣ ಬೇಸಾಯ ವಿಚಾರಗಳಲ್ಲಿ ಅವಿರತ ಶ್ರಮ ಮತ್ತು ಸಂಶೋಧನೆ ನಡೆಸಿರುವವರು. ಡಾ. ಹೆಗ್ಡೆಯವರ ನೇತೃತ್ವದಲ್ಲಿ ಕೃಷಿ ವಿ.ವಿ. ನಮ್ಮ ರೈತನ ಸಮುದಾಯದ ಸಮಸ್ಯೆಗಳಿಗೆ ಮತ್ತಷ್ಟು ಸ್ಪಂದಿಸುವಂತಹ ಸಂಶೋಧನೆಗಳನ್ನು ಕೈಗೊಳ್ಳಲಿ ಎಂದು ಹಿತ್ತಲಗಿಡ ಹಾರೈಸುತ್ತದೆ.

ವಾಜಪೇಯ ಯಾಗ-ಮೂಲತಃ ಕೃಷಿ ಪ್ರಧಾನ ಯಜ್ಞ!

ಬಿ.ಎಸ್. ಅಪರಂಜ್ ಕೃಷ್ಣಾ ತೀರ ರೈತ ಸಂಘ, ಜಮಖಂಡಿ.

ವಾಜಪೇಯ ಯಾಗಕ್ಕೆ ಸಂಬಂಧಿಸಿದಂತೆ ವೈದಿಕ ಸಾಹಿತ್ಯದಲ್ಲಿ ದೊರಕುವ ನಂತರದ ವಿವರಣೆಗಳು ಈ ಯಾಗವು ಎಲ್ಲ ಯಾಗ ಗಳಿಗಿಂತಲೂ ಶ್ರೇಷ್ಠವಾದುದೆಂದೂ, ಯಾಗಕರ್ತನು ಮೋಕ್ಷ, ಪರಮಾಧಿಕಾರ, ವಾಕ್‌ಸಂಪತ್ತು ಮುಂತಾದ ಇಹಪರ ಉನ್ನತ ಫಲಗಳನ್ನು ಹೊಂದುವನೆಂದು, ವಾಜಪೇಯ ಅವಭೃತ ಸ್ನಾನಕರ್ತನು 'ರಾಜಸೂಯ' ಯಾಗ ಮಾಡುವ ಅವಶ್ಯಕತೆಯಿಲ್ಲವೆಂದೂ ಎಲ್ಲರಿಗಿಂತ ಶ್ರೇಷ್ಠನಾಗಿ 'ಸಾಮ್ರಾಟ'ನೆಂದು ಸ್ತುತಿಸಿ ಕೊಳ್ಳುವನೆಂದೂ ಯಜ್ಞದ ಫಲಗಳನ್ನು ಉಲ್ಲೇಖಿಸುತ್ತವೆ. ಆದರೆ ದೊರೆಯುವ ಗ್ರಾಂಥಿಕ ಆಕರಗಳ ಸೂಕ್ಷ್ಮಾವಲೋಕನದಿಂದ ಮೂಲತಃ ಈ ಯಾಗಾಚರಣೆಯು ಕೃಷಿಕರು ಆಚರಿಸ ಲಾಗುತ್ತಿದ್ದ ಒಂದು ಪ್ರಾರ್ಥನಾ ವಿಧಿಯಾಗಿತ್ತೆಂದು ಸ್ಪಷ್ಟವಾಗುತ್ತದೆ.

ಸತ್ಪಥ ಬ್ರಾಹಣಕವು ವಾಜಪೇಯ ವೆಂದರೆ ಅನ್ನ (ಆಹಾರ) ಮತ್ತು ಪೇಯ (ನೀರು)ವನ್ನು ಸಂಪಾದಿಸುವ ಮಾಧ್ಯಮ ವಾಗಿದೆಯೆಂಬುದಾಗಿ ತಿಳಿಸುತ್ತದೆ.

ತೃತ್ತರೇಯ ಬ್ರಾಹ್ಮಣಕವು ವಾಜಪೇಯ ಶಬ್ದವು 'ವಾಜಿಪ್ಯ' ಮೂಲದಿಂದ ಬಂದದೆಂದೂ ಹಾಗೂ ವಾಜ (ಆಹಾರ)ವನ್ನು ಈ ಯಾಗದ ಮೂಲಕವೇ ಪಡೆಯಬಹುದೆಂದು ತಿಳಿಸುತ್ತದೆ.

ಯಾಗಾಚರಣೆಯ ಸಂದರ್ಭದಲ್ಲಿ ನಿರ್ದೇಶಿಸಲಾದ ವಿಧಿವಿಧಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಆಚರಣೆಯ ಮೂಲ ಉದ್ದೇಶದ ಹಿನ್ನೆಲೆ ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ 'ಮರುತ್ ದೇವತೆಗಳು ಮೂಲತಃ ಕೃಷಿ ಅಭಿಮಾನಿ ದೇವತೆಗಳೆಂದೂ (ವೈಶ್ಯ:) ಈ ದೇವತೆಗಳಿಗೆ ಗೊಡ್ಡು (ಸಂತಾನ ಹೀನ) ಹಸುವನ್ನು ಅರ್ಪಿಸಿ ಕೃಷಿಯ ಅಭಿಮಾನಿಗಳಾದ ಇವರಿಂದಲೇ ಯಜ್ಞಕರ್ತನು ಆಹಾರವನ್ನು ಪಡೆಯಬೇಕೆಂಬ ಒಂದು ವಿಧಿಯನ್ನು ಸತ್ಪಥ ಬ್ರಾಹ್ಮಣಕವು ನಿರ್ದೇಶಿಸುತ್ತದೆ.

ಎರಡನೆಯದಾಗಿ ಯಜ್ಞದ ಅವಿಭಾಜ್ಯ ಅಂಗವಾದ 'ರಥಪಂದ್ಯದಲ್ಲಿ' ರಥವನ್ನು ಇಂದ್ರನ ವಜ್ರಾಯುಧಕ್ಕೆ ಹೋಲಿಸಲಾಗಿದೆ. ಅಲ್ಲದೇ ವಜ್ರಾಯುಧವನ್ನು ಆಹಾರವನ್ನು ಪಡೆಯುವ ಸಾಧನವೆಂದು ಪರಿಗಣಿಸಲಾಗಿದೆ. ಯಜ್ಞ ಕರ್ತನನ್ನು ಇಂದ್ರನಿಗೆ ಹೋಲಿಸಿ ಅವನು ಸಮೃದ್ಧವಾದ ಅನ್ನ (ಆಹಾರ)ವನ್ನು ಗೆಲ್ಲಲಿ ಎಂಬ ಪ್ರಾರ್ಥನಾ ಶ್ಲೋಕವಿದೆ.

ಮೂರನೆಯದಾಗಿ ಅಶ್ವದ ಪೋಷಣೆಯ ವಿಧಿಯಲ್ಲಿ ಅಶ್ವಗಳು 'ವಾಜ (ಆಹಾರ)ವನ್ನು ಪಡೆಯಲಿ ಎಂಬ ಹಾರೈಕೆಯ ನಿವೇದನೆಗಳನ್ನು ವಾಜಪೇಯ ಸಂಹಿತೆಯು ತಿಳಿಸಿದರೆ ಸತ್ಪಥ ಬ್ರಾಹ್ಮಣಕವು ಅಶ್ವಗಳನ್ನು ಸ್ತುತಿಸುವ ಮಂತ್ರಗಳಲ್ಲಿ 'ಓ ಅಶ್ವವೇ ಅವನು (ಯಜ್ಞ ಕರ್ತನು) ವಾಜ (ಆಹಾರ)ವನ್ನು ಪಡೆಯುವವನಾಗಲಿ' ಎಂದು ಸಾರುತ್ತದೆ.

ಯಾಗದ ಮತ್ತೊಂದು ವಿಧಿಯಾದ ದುಂದುಭಿಗಳನ್ನು ಮೊಳಗಿಸುವ ಸಂದರ್ಭದಲ್ಲಿ 'ಯಜ್ಞಕರ್ತನು (ಆಹಾರ)ವನ್ನು ಗೆಲ್ಲಲಿ' ಎಂದೂ ಅನ್ನದ ಪಾಯಸವನ್ನು ಸ್ಪರ್ಶಿಸುವ ಸಮಯದಲ್ಲಿ 'ವಾಜ (ಆಹಾರ) ಸಂಪತ್ತು ನನಗೆ ದೊರೆಯಲಿ' ಎಂದು ಪ್ರಾರ್ಥಿಸಬೇಕೆಂದು ವಾಜಸನೇಯ ಸಂಹಿತೆಯು ತಿಳಿಸುತ್ತದೆ. ಯಜ್ಞಕರ್ತನು ಯಜ್ಞಸ್ತಂಭದ ಕೊನೆ ತಲುಪಿ ಅಲ್ಲಿ ಇರಿಸಲ್ಪಟ್ಟ ಗೋದಿಯನ್ನು ಸ್ಪರ್ಶಿಸಬೇಕೆಂದು ಸತ್ಪಥ ಬ್ರಾಹ್ಮಣಕವು ನಿರ್ದೇಶಿಸುತ್ತದೆ. ಗೋದಿಯು ಇಲ್ಲಿ ಆಹಾರವನ್ನು ಪ್ರತಿನಿಧಿಸುತ್ತದೆಯಲ್ಲದೇ ಯಜ್ಞದ ಅಂತಿಮ ಗುರಿಯನ್ನು ಸಾರುತ್ತದೆ.

ಯಾಗದ ಅಂತಿಮ ಹಾಗೂ ಪ್ರಮುಖ ವಿಧಿಯಾದ ವಾಜಸ್ರವಿಯ ಹವಿಸ್ಸನ್ನು ಸಮರ್ಪಿಸುವಾಗ ಔದುಂಬರ ಮರದಿಂದ ನಿರ್ಮಿತವಾದ ಪಾತ್ರೆಯಲ್ಲಿ ಹವಿಸ್ಸನ್ನು ಇರಿಸಿ ಮೇಕೆಯ ತೊಗಲಿನಿಂದ ಪಾತ್ರೆಯನ್ನು ಮುಚ್ಚಿ ಕೃಷಿ (ಒಕ್ಕಲುತನ), ಕ್ಷೇಮ್ಯೆ (ಶಾಂತ ಜೀವನ), ರೈಯ್ಯಿ (ಸಂಪತ್ತು) ಹಾಗೂ ಪೋಷಾಯ (ಪೋಷಣ) ಗಳೆಲ್ಲವೂ ದೊರೆಯಲಿ ಎಂಬ ಮಂತ್ರ ಪಠಣದೊಂದಿಗೆ ಹವಿಸ್ಸನ್ನು ಅರ್ಪಿಸಬೇಕೆಂದು ಸತ್ಪಥ ಬ್ರಾಹ್ಮಣಕವು ತಿಳಿಸುತ್ತದೆ. ಔದುಂಬರ ವೃಕ್ಷವನ್ನು ಅನ್ನಾಧಾರ, ಪೋಷಣಶಕ್ತಿ ಹಾಗೂ ಸಂರಕ್ಷಣೆಯ ಪ್ರತೀಕವೆಂದು ಎಂದಿನಿಂದಲೂ ಪರಿಗಣಿಸ ಲಾಗಿದೆ.

ಈ ಮೇಲಿನ ಬ್ರಾಹ್ಮಣಕ ಗ್ರಂಥಗಳ ಹೇಳಿಕೆಗಳನ್ನು ವಿಶ್ಲೇಷಿಸಿದಾಗ ವಾಜಪೇಯ ಯಾಗವು ಮೂಲತಃ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಒಂದು ಯಾಗವೆಂದೂ ಸಮೃದ್ಧ ಆಹಾರ ಹಾಗೂ ನೀರನ್ನು ಪಡೆಯುವ ಪ್ರಾರ್ಥನೆಯ ಸಮಾರಂಭವಾಗಿತ್ತೆಂದು ಸ್ಪಷ್ಟವಾಗಿ ಊಹಿಸಬಹುದು. ಫಲಗಳ ವರ್ತನೆಗಳೂ ಇಲ್ಲ ಕಾಣಸಿಗುವುದಿಲ್ಲ. ಈ ಅಂಶಗಳಿಗೆ ಪೋಷಕವಾಗಿ ವೈದಿಕ ಸಾಹಿತ್ಯವು ಅನೇಕ ಆಧಾರಗಳನ್ನು ನೀಡುತ್ತದೆ. ಆರ್ಯರು ಮೂಲತಃ ಕೃಷಿಕರೇ ಭೂಸಾಗುವಳಿ ಪದ್ಧತಿ, ನೇಗಿಲಿನ ಉಪಯುಕ್ತತೆ, ಬೀಜ ಬಿತ್ತುವ ವಿಧಾನ, ನೀರಿನ ಉಪಯೋಗ, ಸಮೃದ್ಧ ಆಹಾರಕ್ಕಾಗಿ ಭೂ ದೇವಿಯ ಪ್ರಾರ್ಥನೆ ಮುಂತಾದ ಅನೇಕ ವಿವರಗಳು ನಮಗೆ ದೊರೆಯುತ್ತವೆ. ಕೃಷಿಕನನ್ನು ಕುರಿತು ಉಳುವ ರೈತನೇ ಕ್ಷೇತ್ರಪತಿ. ಅವನಿಂದಲೇ ನಾವು ಸಕಲ ಸಂಪದಗಳನ್ನು ಪಡೆಯಬಹುದು. ಸರ್ವ ಜನತೆಯ ಪೋಷಣೆಗೂ ಅವನೇ ಆಧಾರ. ಅದು ಬಹು ದೊಡ್ಡಸ್ಥಾನ. ನಾವೂ ಆ ಸ್ಥಾನವನ್ನು ಪಡೆಯೋಣ ಎಂದು ಋಗ್ವೇದದಲ್ಲಿ ತುಂಬುಹೃದಯದಿಂದ ಪ್ರಾರ್ಥಿಸಲಾಗಿದೆ. ಈ ಹಿನ್ನೆಲೆಯು ಕೂಡಾ ವಾಜಪೇಯ ಯಾಗದ ಮೂಲದ ಊಹೆಗೆ ಪುಷ್ಟಿ ನೀಡುತ್ತದೆ.

ಕಾಲಾನಂತರದಲ್ಲಿ ಈ ಯಾಗಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡಿ ಜನಸಾಮಾನ್ಯರಿಂದ ದೂರಮಾಡಿ ಕೇವಲ ಕೆಲ ಪ್ರತಿಷ್ಠಿತ ವರ್ಗಗಳಿಗಷ್ಟೇ ಮೀಸಲಿರಿಸಿ 'ಶ್ರೇಷ್ಠಯಾಗ'ವೆಂಬ ಶೀರ್ಷಿಕೆ ಯನ್ನು ನೀಡಿದುದು ದೊರೆಯುವ ಆಕರಗಳಿಂದ ವೇದ್ಯವಾಗುತ್ತದೆ.

ದೇಶೀಯ ಹವಾಮಾನ ಜ್ಞಾನ

- ಬಸವಪ್ರಭು, ವಿ.ಜಿರ್ಲಿ



ಉತ್ತರಕರ್ನಾಟಕದಲ್ಲಿ ಯಾವ ಮಳೆ ಯಾವ ಬೆಳೆಗೆ ಒಳ್ಳೆಯದು, ಯಾವ ಮಳೆಯಿಂದ ಯಾವ ಕೀಟದ ಭಾದೆ ಹೆಚ್ಚಾಗುತ್ತದೆ ಅಥವಾ ನಿಯಂತ್ರಣವಾಗುತ್ತದೆ ಎಂಬ ವಿಷಯಗಳನ್ನು ಹಿರಿಯರು ತಮ್ಮ ಅನುಭವಗಳ ಮೂಲಕ ಕಂಡುಕೊಂಡಿದ್ದಾರೆ. ಪ್ರತಿಯೊಂದು ಮಳೆಯ ಸಾಧಕ ಭಾದಕಗಳನ್ನು ಅವರು ತಮ್ಮದೇ ರೀತಿಯಲ್ಲಿ ನೆನೆಪಿಡುತ್ತಾರೆ. ಅದರ ಫಲ ವಿವರ ಇಲ್ಲಿದೆ.

ಏಪ್ರಿಲ್ 13ರ ಆಸುಪಾಸಿನಲ್ಲಿ ಪ್ರಾರಂಭವಾಗುವ ಅಶ್ವಿನಿ ಮಳೆ ಅರಿಷಿಣಕ್ಕೆ ಒಳ್ಳೆಯದು. ಆದರೆ ತೆಂಗಿಗೆ ಈ ಮಳೆ ಹಾನಿಕರ. ಈ ಮಳೆ ಚೆನ್ನಾಗಿ ಆದರೆ ಬರಗಾಲದ ಸಂಕೇತ.

ಏಪ್ರಿಲ್ 27ರಂದು ಪ್ರಾರಂಭವಾಗುವ ಭರಣಿ ಮಳೆ ಮೇ 11ರವರೆಗೆ ಸುರಿಯುತ್ತದೆ. ಈ ಮಳೆ ಅಧಿಕ ಪ್ರಮಾಣದಲ್ಲಿ ಸುರಿದರೆ ಅತ್ಯಂತ ದುರ್ಭರ ಬರಗಾಲ ಖಂಡಿತ ಎಂಬುದು ರೈತರ ಅನುಭವ.

ಮೇ 24ರಿಂದ ಜೂನ್ 7ರವರೆಗೆ ಬರುವ ರೋಹಿಣಿ ಮಳೆ ಜೋಳದ ಬೆಳವಣಿಗೆ ಮತ್ತು ಹೆಚ್ಚಿನ ಇಳುವರಿಗೆ ಅತ್ಯಂತ ಉತ್ತಮ. ಈ ಕಾಲದಲ್ಲಿ ಜೋಳವನ್ನು ಬಿತ್ತದೇ ಹೋದರೆ ಜೋಳಕ್ಕೆ ಕಾಂಡಕೊರೆಯುವ ಭಾದೆ ಖಂಡಿತ. ಜೋಳಕ್ಕೆ ಪ್ರತಿಕೂಲವಾದ ಜೂನ್ 7 ರಿಂದ 21ರವರೆಗೆ ಸುರಿಯುವ ಮೃಗಶಿರಾ ಮಳೆಯಿಂದ ಬೆಳೆ ನಾಶವಾಗುವ ಸಂಭವವಿದೆ. ಈ ಮಳೆ ಮಿಂಚಿನಿಂದ ಕೂಡಿದ್ದರೆ ಮುಂಬರುವ ಆರಿದ್ರ, ಪುನರ್ವಸು ಮತ್ತು ಪುಷ್ಯ ಮಳೆಗಳು ಬಾರದೇ ಹೋಗುತ್ತವೆ. ಈ ಮಳೆಯಾಗದಿದ್ದರೆ ಜೋಳದ ಹೊರತು ಎಲ್ಲಾ ಬೆಳೆಗಳು ಉತ್ತಮವಾಗಿ ಬರುತ್ತವೆ.

ಜೂನ್ 21ರಿಂದ ಜುಲೈ 5ರವರೆಗೆ ಬೀಳುವ ಆರಿದ್ರ, ಮಳೆ ಎಲ್ಲಾ ಬೆಳೆಗಳ ಹೆಚ್ಚಿನ ಇಳುವರಿಗೆ ಕಾರಣೀಭೂತವಾಗಿದೆ. ಆದರೆ, ಈ ಮಳೆ ಗುಡುಗು ಮಿಂಚುಗಳಿಂದ ಕೂಡಿದ್ದರೆ ಮುಂಬರುವ ಆರು ಮಳೆಗಳಾದ ಪುನರ್ವಸು, ಪುಷ್ಯ, ಆಶ್ಲೇಷ, ಮಾಘ, ಹುಬ್ಬ ಮತ್ತು ಉತ್ತರಾ ಮಳೆಗಳು ಬರುವುದಿಲ್ಲ. ಈ ಮಳೆ ಬೀಳದಿದ್ದರೆ ಹಿಂಗಾರು ಜೋಳವೊಂದನ್ನು ಹೊರತುಪಡಿಸಿ ಎಲ್ಲಾ ಬೆಳೆಗಳೂ ಭಾದೆಗಳಾಗುತ್ತವೆ.

ಸೆಪ್ಟೆಂಬರ್ 13 ರಿಂದ 26ವರೆಗೆ ಬೀಳುವ ಉತ್ತರ ಮಳೆ ಹಾಗೂ ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 10ರವರೆಗೆ ಬೀಳುವ ಹಸ್ತ ಮಳೆಯು ಹಿಂಗಾರಿ ಬೆಳೆಗಳಾದ ಜೋಳ, ಕಡಲೆ, ಗೋಧಿ, ಹತ್ತಿ ಇತ್ಯಾದಿ ಬೆಳೆಗಳಿಗೆ ಅತ್ಯಂತ ಪ್ರಮುಖವಾದವುಗಳು. ಈ ಎರಡು ಮಳೆಗಳು ಬಾರದಿದ್ದರೆ ಬೆಳೆಗಳೊಂದಿಗೆ ರೈತನೂ ನಾಶವಾಗಬೇಕಾಗುತ್ತದೆ.

ಸ್ವಾತಿಮಳೆಯು ಅಕ್ಟೋಬರ್ 23 ರಿಂದ ನವೆಂಬರ್ 6ರವರಗೆ ಸುರಿಯುತ್ತದೆ. ಈ ಮಳೆ ಧಾರಾಕಾರಕವಾಗಿ (ಬಿಡುವಿಲ್ಲದ) ಸುರಿವಾಗ ಬೆಳೆಗಳ ಬಹಳಷ್ಟು ಕೀಟಗಳನ್ನು ಕೊಲ್ಲುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟು ಕೊಂಡು ಈ ಮಳೆಯನ್ನು 'ಅಫಲವತ್ತತೆ ಮಳೆ' ಅಥವಾ 'ನಿರ್ವೀರ್ಯ ಮಳೆ' ಎಂದು ಕರೆಯಲಾಗಿದೆ.

ನವೆಂಬರ್ 6 ರಿಂದ 20ರವರೆಗೆ ಬರುವ ವಿಶಾಖ ಮಳೆಯಿಂದಾಗಿ ದನಕರುಗಳಿಗೆ ಹಾಗೂ ಮನುಷ್ಯರಿಗೆ ಆರೋಗ್ಯ ಹದಗೆಡುವುದರ ಜತೆಗೆ ಗಾಯಗಳು ಬೇಗನೇ ವಾಸಿಯಾಗುವುದಿಲ್ಲ.

ಪಶ್ಚಿಮದಿಕ್ಕಿನಿಂದ ಬೀಸುವ ಈ ಪಡುಗಾಳಿ ಜೋಳ, ಕುಸುಬೆ, ಗೋಧಿ ಇತ್ಯಾದಿ ಬೆಳೆಗಳಿಗೆ ಅತ್ಯಂತ ಪ್ರಮುಖವಾದುದು.

ಪೂರ್ವದಿಂದ ಬೀಸುವ ಮೂಡಗಾಳಿ ಬಿಸಿ ಹಾಗೂ ಒಣ ಹವೆಯಿಂದ ಕೂಡಿರುತ್ತವೆ. ಈ ಗಾಳಿ ಕಬ್ಬಿನ ಬೆಳೆಯ ನೀರಿನ ಅಂಶವನ್ನು ಹೀರಿಕೊಂಡು ಹೆಚ್ಚಿನ ಸಕ್ಕರೆಯ ಶೇಖರಣೆಗೆ ಸಹಾಯಕಾರಿಯಾಗುತ್ತದೆ.

ದಕ್ಷಿಣ ದಿಕ್ಕಿನಿಂದ ಬೀಸುವ ಹರಿಶ್ಚಂದ್ರಗಾಳಿ ಉತ್ತಮ ಮಳೆಯನ್ನು ತರುವ ಮುನ್ಸೂಚನೆ ನೀಡುತ್ತದೆ. ಕೊರವಗಾಳಿ ಬಿಸಿ ಮತ್ತು ಒಣ ಗಾಳಿಯಾಗಿದ್ದು ನೀರಿನ ಅಭಾವವನ್ನು ಸೃಷ್ಟಿಸುತ್ತವೆ.

ಕುಂಬಾರಗಾಳಿ ಉತ್ತರದಿಕ್ಕಿನಿಂದ ಬೀಸುತ್ತದೆ. ಈ ಗಾಳಿಗಳು ಉತ್ತಮ ಮಳೆಯ ಮುನ್ಸೂಚನೆ ಮತ್ತು ಬೆಳೆಗಳಿಗೆ ಹಾನಿಕರವಲ್ಲ.

ಬಯೋಡೈನಾಮಿಕ್ ಕೃಷಿಯ ಪೀಟರ್ ಪ್ರಾಸ್ಟರ್

ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಈಗ ಜನಪ್ರಿಯವಾಗುತ್ತಿರುವ 'ಬಯೋಡೈನಾಮಿಕ್' ಕೃಷಿಯ ಪ್ರತಿಪಾದಕ 'ಪೀಟರ್ ಪ್ರಾಸ್ಟರ್' ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದರು. ಈ ನಿಟ್ಟಿನಲ್ಲಿ ಪೀಟರ್ ಅತ್ಯಂತ ಕುತೂಹಲಕಾರಿಯಾದ ವಿಚಾರವನ್ನು ನಮ್ಮ ಮುಂದಿಟ್ಟಿರುತ್ತಾರೆ. ಅವರ ರೀತ್ಯ, ಈ ಭೂಮಿಯಲ್ಲಿನ ಚಟುವಟಿಕೆಗಳಿಗೂ, ಆಗು ಹೋಗುಗಳಿಗೂ, ನಭೋಮಂಡಲದಲ್ಲಿನ ಚಲನಕ್ಕೂ (Cosmic Movements) ನೇರ ಸಂಬಂಧವಿರುತ್ತದೆ ಎನ್ನುವುದು. ಮಡಿದ ಗೋವಿನ ಟೊಳ್ಳು ಕೊಂಬಿನೊಳಗೆ ಸಗಣಿಯನ್ನು ತುಂಬಿಸಿ, ಭೂಮಿಯೊಳಗೆ ಅದರ ತುದಿಯನ್ನು ಆಕಾಶದತ್ತ ಚಾಚಿ ಕೆಲ ದಿನಗಳು ಹೊತ್ತಿಟ್ಟರೆ, ಆ ಕೊಂಬಿನ ತುದಿ ಆಂಟನಾ ರೀತಿ ಸೌರಶಕ್ತಿಯನ್ನು ಹೀರಿ, ಆ ಮೂಲಕ ಕೊಂಬಿನೊಳಗೆ ಅದ್ಭುತ ಜೈವಿಕ ಕ್ರಿಯೆ ನಡೆದು ಸೃಷ್ಟಿಯಾಗುವ ಗೊಬ್ಬರ, ಎಷ್ಟು ಫಲವತ್ತಾಗಿರುತ್ತದೆ ಎಂದರೆ, ಕೆಲಗ್ರಾಂಗಳು ಇಡೀ ಎಕರೆಗೆ ಸಾಕು ಎನ್ನುವ ಕುತೂಹಲಕಾರಿ ಪ್ರಯೋಗದ ಫಲಿತಾಂಶವನ್ನು ಪೀಟರ್ ಹೊರಗೆಡಹಿರುತ್ತಾರೆ. ಇವೆಲ್ಲವನ್ನೂ ನಮ್ಮ ವಿಜ್ಞಾನಿ ಸಮುದಾಯ ಸವಾಲುಗಳೆಂದು ಸ್ವೀಕರಿಸಿ, ಶೋಧನೆ, ಪ್ರಯೋಗಗಳ ಮೂಲಕ ಅವುಗಳ ಸತ್ಯಾಸತ್ಯತೆಗಳನ್ನು ಬಯಲು ಮಾಡಬೇಕಾಗಿದೆ.

ಈ ನಿಟ್ಟಿನಲ್ಲಿ ಮಳೆ ನಕ್ಷತ್ರಗಳ ಆಧಾರದ ಮೇಲೆ ನಮ್ಮ ರೈತರು ಬಿತ್ತನೆ ಕೈಗೊಳ್ಳುವಂತಹ ಕ್ರಮಗಳಾಗಲೀ, ಕೃಷಿ ಸಂಬಂಧಿಸಿದ ಗಾದೆಗಳಾಗಲೀ, ದೇಶೀಯ ಹವಾಮಾನ ಜ್ಞಾನವನ್ನಾಗಲೀ ಸಂಶೋಧನ ಸವಾಲೆಂದು ನಮ್ಮ ವಿಜ್ಞಾನಿ ಸಮುದಾಯ ಸ್ವೀಕರಿಸಬೇಕಾಗಿದೆ. ಚಾವುಂಡರಾಯನ 'ಲೋಕೋಪಕಾರ' ಪುಸ್ತಕ ಈ ಸವಾಲಿಗೆ ಸ್ಪಷ್ಟರೂಪ ನೀಡಬಹುದಾಗಿರುತ್ತದೆ.

ಬೀಜದ ಹೋರಿಯ ಸಾಮೂಹಿಕ ಉಸ್ತುವಾರಿ

ನಮ್ಮ ದೇಶೀಯ ಪಶುಶಾಲೆಯಲ್ಲಿ ಬೀಜದ ಹೋರಿ ಅಥವಾ ಕೋಣದ ಸ್ಥಾನ ವಿಶಿಷ್ಟವಾದದ್ದು. ಅದನ್ನು ಸಾಮೂಹಿಕವಾಗಿ ಸಾಕಿ ಅದರಿಂದ ಉಪಯೋಗ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಗುಜರಾತಿನ ಕೆಲವು ಬುಡಕಟ್ಟಿನ ಜನರು ಅನುಸರಿಸುತ್ತಿರುವ ಪದ್ಧತಿಗಳು ಅತ್ಯಂತ ಗಮನಾರ್ಹವಾಗಿವೆ. ಅವುಗಳೆಂದರೆ,

1. ಸಹಕಾರಿ ಸಂಘಕ್ಕೆ ಸೇರಿದ ಬೀಜದ ಹೋರಿ ಕೋಣವನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಗೋಪಾಲರನ್ನು ನೇಮಿಸಿ ಅದರ ಆರೈಕೆ ಸಂಪೂರ್ಣ ಆತನ ಜವಾಬ್ದಾರಿಗೆ ಬಿಡುವುದು. ಆ ವೃತ್ತಿಗೆ ಸಹಕಾರಿ ಸಂಘದಿಂದ ನಿಗದಿತ ಹಣ ಕೊಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ರೀತಿ ಕೊಡುವ ಹಣ ಆ ಹಳ್ಳಿಯಲ್ಲಿನ ಜಾನುವಾರುಗಳ ಸಂಖ್ಯೆಗೆ ಮತ್ತು ಹೋರಿಯ ಉಪಯೋಗ ಪಡೆಯುವವರ ಸಂಖ್ಯೆಗೆ ಅನುಗುಣವಾಗಿರುತ್ತದೆ.

2. ಬೀಜದ ಹೋರಿ/ಕೋಣ ಸಾರ್ವಜನಿಕ ಸ್ವತ್ತಾದರೂ, ನಿಯಮಿತವಾದ ಹಾಗೂ ಸಕಾಲಿಕವಾದ ಆರೈಕೆಗಾಗಿ ಅದನ್ನು ಆ ಗೋಪಾಲಕನ ಮನೆಯ ಕೊಟ್ಟಿಗೆಯಲ್ಲೇ ಬಿಟ್ಟಿರುತ್ತಾರೆ.

3. ಕೆಲವು ಸಹಕಾರಿ ಸಂಘಗಳಲ್ಲಿ ಚಳಿಗಾಲದಲ್ಲಿ ಹೆಚ್ಚು ಸಾಂದ್ರೀಕೃತ ಹಾಗೂ ಪೌಷ್ಟಿಕ ಆಹಾರವನ್ನು ಕೊಡುತ್ತಾರೆ. ಸದಸ್ಯರು ಆಹಾರದ ಮೂಟೆಗಳನ್ನು ಒಂದು ನಿಗದಿತ ಕೊಠಡಿಯಲ್ಲಿ ಸಂಗ್ರಹಿಸಿಡುತ್ತಾರೆ. (ಗೋಪಾಲಕನು ಬೀಜದ ಹೋರಿ/ಕೋಣಕ್ಕೆ ಹಾಕಬೇಕಾದ ಆಹಾರ ತಪ್ಪಿ ತನ್ನ ಹಾಲ ಕರೆಯುವ ಹೈನುಗಳಿಗೆ ಹಾಕದಂತೆ ಎಚ್ಚರಿಕೆ).

4. ದಿನಕೊಬ್ಬ ಸದಸ್ಯನಂತೆ ಪ್ರತಿಯೊಬ್ಬರೂ ಒಣಹುಲ್ಲನ್ನು ಹೋರಿಗೆ ಒದಗಿಸತಕ್ಕದ್ದು. ಕೆಲವೊಮ್ಮೆ ಈ ರೀತಿ ನಿಗದಿಪಡಿಸಿದ ಒಣಹುಲ್ಲನ್ನು ಒಟ್ಟಾಗಿ ಒಂದೆಡೆ ಸಂಗ್ರಹಿಸಿಡುವ ಕ್ರಮವೂ ಇದೆ.

5. ಆಯಾ ಕಾಲದಲ್ಲಿ ದೊರಕುವ ವ್ಯವಸಾಯದ ಉಪಉತ್ಪನ್ನಗಳನ್ನು (by-product) ಪ್ರತಿಯೊಬ್ಬ ಸದಸ್ಯನೂ ಒದಗಿಸುತ್ತಾನೆ.

6. ಕೆಲವು ಹಳ್ಳಿಗಳಲ್ಲಿ 3-4 ವರ್ಷದ ನಂತರ ಬೀಜದ ಹೋರಿ/ಕೋಣವನ್ನು ಪಕ್ಕದ ಹಳ್ಳಿಯವರೊಂದಿಗೆ ಬದಲಾಯಿಸುವ ಕ್ರಮವೂ ರೂಢಿಯಲ್ಲಿದೆ. ಹಾಗಲ್ಲದಿದ್ದಲ್ಲಿ ಸಣ್ಣ ಗಂಡು ಕರುಗಳನ್ನು ಕೊಂಡು ತಂದು ಸಾಕುವ ಕ್ರಮವೂ ಇವೆ.

ಗುಜರಾತಿನ ಸೌರಾಷ್ಟ್ರ ಪ್ರಾಂತ್ಯದ ಜಾಮನನಗರ ಜಿಲ್ಲೆಯ ಕೆವೆಡಿ ಎಂಬ ಹಳ್ಳಿಯಲ್ಲಿ ಬೀಜದ ಹೋರಿ ಕೋಣದ ಉಸ್ತುವಾರಿಗಾಗಿ ಬೆಳೆದು ಬಂದ ಸುಸ್ಥಿರ ಪದ್ಧತಿಗಳು ಹೀಗಿವೆ-

'ಗಮೇರು ಕುಂಬ' ಎಂದು ಕರೆಯುವ ಬೀಜದ ಹೋರಿ ಒಬ್ಬ ಗೋಪಾಲಕನ ಉಸ್ತುವಾರಿಯಲ್ಲಿದ್ದು, ಪ್ರತಿ 5 ಅಥವಾ 7 ವರ್ಷಕೊಮ್ಮೆ ಅದನ್ನು ಬದಲಾಯಿಸುತ್ತಾರೆ. ಈ ನಿಟ್ಟಿನಲ್ಲಿ ಕೆಲವು ಕಟ್ಟುನಿಟ್ಟಾದ ನಿರ್ದಿಷ್ಟ ಪದ್ಧತಿಗಳನ್ನು ಅಲ್ಲಿಯ ಜನರು ಪಾಲಿಸಿಕೊಂಡು ಬಂದಿದ್ದಾರೆ. ಉದಾಹರಣೆಗೆ, ಪ್ರತಿನಿತ್ಯ ಪ್ರತಿ ಕುಟುಂಬವೂ ಒಂದು ಕೇಜಿ ಎಣ್ಣೆ ಬೀಜ ಹಾಗೂ ಒಬ್ಬ ಹುಲ್ಲನ್ನು ಕೊಡಬೇಕು. ಇದಕ್ಕೆಯಾರಾದರೂ ತಪ್ಪಿದ್ದಲ್ಲಿ ಅಂಹತವರಿಗೆ ಹಣ ಅಥವಾ ವಸ್ತುವಿನ ರೂಪದಲ್ಲಿ ಹಳ್ಳಿಯ ಜನ ಸೇರಿ ಜುಲ್ಮಾನೆ ಹಾಕುತ್ತಾರೆ. ಈ ಪದ್ಧತಿ ಅನೇಕ ವರ್ಷಗಳಿಂದ ಆ ಹಳ್ಳಿಯಲ್ಲಿ ನಡೆದುಕೊಂಡು ಬಂದಿದೆ.

(ಆಧಾರ: ಹನೀ ಬೀ ಪತ್ರಿಕೆ - ಸಂಪುಟ 5, ಸಂಚಿಕೆ 3, 1994)

ಕೃಷಿ ಗಾದೆಗಳು

ಸಂಗ್ರಹ: ಡಾ. ಜಿ. ಎನ್. ಗಜಾನನ

- ಕಲ್ಲು ಹೊಲಕೆ ಹುರಳಿ ಬಿತ್ತು
- ಮರ ನೆಟ್ಟು ಬರ ಅಟ್ಟು
- ಎರೆ ಹೊಲ ಕರಿ ಬಂಗಾರ
- ಮರಳು ಹೊಲ ಬರಿ ಶೃಂಗಾರ
- ಅಶ್ವಿನಿ ಮಳೆ (ಏಪ್ರಿಲ್ 14 ರಿಂದ 28ರವರೆಗೆ) ಬಿದ್ದರೆ ಅರಿಶಿನಕ್ಕೆ ಮೇಲು ಅಡಿಕೆಗೆ ಕೇಡು
- ಗೌರಿ ಹಬ್ಬದ ಹೊತ್ಗೆ ಗರೀ ಮೇಯಬೇಕು.
- ಮಾಘಾ ಮಳೆ (ಆಗಸ್ಟ್ 17 ರಿಂದ 30ರವರೆಗೆ) ಬಂದಷ್ಟು ಒಳ್ಳೆಯದು, ಮನೆ ಮಗ ಉಂಡಷ್ಟು ಒಳ್ಳೆಯದು
- ಎರೆ ಇದ್ದವ ದೊರೆ
- ಅಣ್ಣಿಗೆರೆ ಮಣ್ಣಿನಾಗ ಮೊಳಣಲ್ಲುಟ್ಟ ಎಣ್ಣೆ
- ಹಸ್ತದ ಮಳೆಯಲ್ಲಿ (ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 10) ಆರಂಬ ಬೇಡ.
- ಅನುರಾಧೆ (ನವೆ. 20 ರಿಂದ ಡಿಸೆ. 3) ಬಂದರೆ ನಮ್ಮ ರಾಗಿ ನಮ್ಮದು
- ಭರಣಿ ಮಳೆ (ಏಪ್ರಿಲ್ 28 ರಿಂದ ಮೇ 18) ಧರಣಿ ಎಲ್ಲಾ ಬೆಳೆ
- ಆಶ್ಲೇಷ ಮಳೆ (ಆಗಸ್ಟ್ 3 ರಿಂದ 16) ಕೈತುಂಬ ಬೆಳೆ
- ಆರಿದ್ರೆ (ಜೂನ್ 22 - ಜುಲೈ 6) ಇಲ್ದಿದ್ರೆ ದರಿದ್ರ ಖಂಡಿತ
- ರೋಹಾ ಮಳೆ (ಮೇ 25 - ಜೂನ್ 7) ಓಣಿ ಎಲ್ಲಾ ಜೋಳ
- ಮಘಾ ಮಳೆ (ಆಗಸ್ಟ್ 17-30) ಬಿದ್ದರೆ ಮಗೆ ಗಾತ್ರ ಕೆನೆ
- ಸ್ವಾತಿ ಮಳೆ (ಅಕ್ಟೋಬರ್ 25 - ನವೆಂಬರ್ 6) ಹುಯ್ದರೆ ಮುತ್ತಿನಂಥ ಜೋಳ
- ಆಶ್ಲೇಷ ಮಳೆ (ಆಗಸ್ಟ್ 3-16) ಬಿದ್ದರೆ ನಿಶ್ಶೇಷ ಕಳೆ
- ಹುಬ್ಬೇ ಮಳೆ (ಆಗಸ್ಟ್ 31 ರಿಂದ ಸೆಪ್ಟೆಂಬರ್ 17) ಅಬ್ಬೇ ಹಾಲು
- ಕುಣಿಗಲು ಕೆರೆ ತುಂಬಿದ್ರೆ ಕಾಸಿಗೆ ಸೇರು ಬತ್ತ.

ಮಳೆ ಆಶ್ರಯದ ಒಂದು ಸೂಕ್ತ ಬೆಳೆ ಪರ್ಯಾಯ ಪದ್ಧತಿ

ವಿವರ: ಕಿನ್ಯಾ ವಿಠಲ್ ರಾವ್

ದಕ್ಷಿಣ ಕನ್ನಡ ಜಿಲ್ಲೆಯ 'ಪದವು' ಭೂಮಿಯಲ್ಲಿ (ದಿಣ್ಣೆ ಅಥವಾ upland area) ರೈತರು ಅನುಸರಿಸಿಕೊಂಡು ಬಂದಿರುವ ಪರ್ಯಾಯ ಬೆಳೆ ಪದ್ಧತಿ, ಒಂದು ಮಳೆ ಆಶ್ರಯದ ಪಂಚವಾರ್ಷಿಕ ಯೋಜನೆಯಂತಿದೆ. ಇದರಲ್ಲಿ ಭೂಮಿಯ ಫಲವತ್ತತೆ ಉಳಿಸಿಕೊಳ್ಳುವ ಜೊತೆಗೆ ನಿರಂತರ ಆದಾಯ ಮತ್ತು ಮಾನವ ದುಡಿಮೆಯ ಗರಿಷ್ಠ ಉಪಯೋಗ ಪಡೆಯುವ ಸಾಧ್ಯತೆಗಳಿರುತ್ತವೆ.

ಅದರ ವಿವರವೆಂದರೆ, ರೈತರು ತಮ್ಮ ಕೃಷಿ ಭೂಮಿಯನ್ನು ಐದು ಸೂಕ್ತ ವಿಭಾಗಗಳಾಗಿ ವಿಂಗಡಿಸುತ್ತಾರೆ. ಅವುಗಳಲ್ಲಿ ಒಳ್ಳೆಯ ಆದಾಯ ತರುವ ಮೆಣಸಿನಂತಹ ಬೆಳೆ, ಭೂಮಿಯ ಪೋಷಕಾಂಶಗಳ ಸಂಪೂರ್ಣ ಉಪಯೋಗ ಪಡೆಯುವ ಗೆಣಸು, ಶುಂಠಿಯಂತಹ ಬೇರಿನ ಬೆಳೆ, ಮಳೆ ಆಶ್ರಯದ ಭತ್ತ ಅಥವಾ ರಾಗಿ, ಈ ಆಹಾರದ ಬೆಳೆಗಳನ್ನು ಕ್ರಮವಾಗಿ ಮೊದಲ ವರ್ಷಗಳಲ್ಲಿ ಬೆಳೆದು, ಉಳಿದ ಎರಡು ವರ್ಷಗಳ ಕಾಲ ಭೂಮಿಗೆ ಸಂಪೂರ್ಣ ವಿಶ್ರಾಂತಿ ನೀಡಿ, ಹುಲುಸಾಗಿ ಕಳೆ ಅಥವಾ ಹುಲ್ಲು ಬೆಳೆಯುವಂತೆ ಮಾಡುತ್ತಾರೆ. ಈ ಸಮಯದಲ್ಲಿ ಪಟ್ಟಣ ಪ್ರದೇಶಗಳಿಂದ ಅಲ್ಲಿ ಸಾಕಲು ಕಷ್ಟವಾಗಿರುವಂತಹ ಗಬ್ಬದ ಹಸುಗಳನ್ನು ಕೊಂಡು ತಂದು ಮೇಯಲು ಬಿಡಲಾಗುತ್ತದೆ. ಅವುಗಳ ಸಗಣಿ, ಗಂಜಲ ಸೇರಿ ಭೂಮಿಯ ಫಲವತ್ತತೆ ಹೆಚ್ಚಾದರೆ, ಕರು ಹಾಕಿದ ನಂತರ ಕರೆಯುವ ಹಸು ಅಥವಾ ಅದರ ಹಾಲಿನ ಮಾರಾಟದಿಂದ ಅಧಿಕ ಆದಾಯ ಬರಬಹುದಾಗಿದೆ. ಅನೇಕ ಬಾರಿ ಹಸು ಕೊಟ್ಟವರಿಗೇ ಹಿಂತಿರುಗಿಸಿ ಮಾರಾಟ ಮಾಡುವ ಒಪ್ಪಂದಗಳು ನೆನೆಸಿರುತ್ತದೆ. ಮತ್ತುಳಿದ ನಾಲ್ಕು ಭೂಭಾಗಗಳಲ್ಲಿ ಈ ಕ್ರಮಗಳು ಪರ್ಯಾಯವಾಗಿ ನಡೆಯುತ್ತಲ್ಲಿದ್ದು, ಅದನ್ನು ಈ ಮೇಲಿನ ಪಟ್ಟಿಯ ಮೂಲಕ ಸರಳವಾಗಿ ವಿವರಿಸಬಹುದಾಗಿದೆ.

ಬೆಳೆಗಳು					
ಭೂಮಿಯ/ ವಿಭಾಗ	1ನೇ ವರ್ಷ	2ನೇ ವರ್ಷ	3ನೇ ವರ್ಷ	4ನೇ ವರ್ಷ	5ನೇ ವರ್ಷ
1	ಮೆಣಸು	ಶುಂಠಿ	ಭತ್ತ/ರಾಗಿ	ಖಾಲಿ	ಖಾಲಿ
2.	ಶುಂಠಿ/ ಗೆಣಸು	ಭತ್ತ/ರಾಗಿ	ಖಾಲಿ	ಖಾಲಿ	ಮೆಣಸು
3.	ಭತ್ತ/ರಾಗಿ	ಖಾಲಿ	ಖಾಲಿ	ಮೆಣಸು	ಶುಂಠಿ/ ಗೆಣಸು
4.	ಖಾಲಿ	ಖಾಲಿ	ಮೆಣಸು	ಶುಂಠಿ/ ಗೆಣಸು	ಭತ್ತ/ರಾಗಿ
5.	ಖಾಲಿ	ಮೆಣಸು	ಶುಂಠಿ/ಗೆಣಸು	ಭತ್ತ/ರಾಗಿ	ಖಾಲಿ

ಅಂದರೆ ಇಲ್ಲಿ ಬೆಳೆ ಪರ್ಯಾಯವನ್ನು ವಾರ್ಷಿಕವಾಗಿ ಮತ್ತು ಪ್ರಾದೇಶಿಕವಾಗಿ ಎರಡೂ ನಿಟ್ಟಿನಿಂದ ಪಾಲಿಸುವಂತಾಗಿದೆ. ಇಲ್ಲಿ ವಿವಿಧ ಬೆಳೆ ತೆಗೆಯುವುದರಿಂದ ಸರಾಸರಿ ಆದಾಯದ ಖಾತರಿ, ಬೆಳೆ ಬದಲಾಯಿಸುವುದರಿಂದ ಭೂಮಿಯ ಪೋಷಕಾಂಶಗಳ ಸಂಪೂರ್ಣ ಉಪಯೋಗ ಮತ್ತು ನಿರಂತರ ಪೀಡೆಗಳ ನಿಯಂತ್ರಣ, ಹಾಗೇ ಎರಡು ವರ್ಷ ಭೂಮಿಯನ್ನು ಖಾಲಿ ಬಿಡುವುದರಿಂದ ಕಳೆಗಳ ಹತೋಟಿ ಎಲ್ಲವೂ ಸಾಧ್ಯವಾಗಿರುವುದರಿಂದ, ಇದನ್ನು ಒಂದು ಅನನ್ಯ "ಸುಸ್ಥಿರ ಬೆಳೆ ಪರ್ಯಾಯ ಪದ್ಧತಿ" ಎನ್ನಬಹುದಾಗಿದೆ.

ಸಂಗ್ರಹ: ತೇಜಸ್ವಿನಿ ಶರ್ಮ.

ಕೊಯ್ಲಿನ ಮುತುವರ್ಜಿ

ಬದನೆಕಾಯಿ ಕೀಳುವಾಗ

ಕೊಡ್ಲದ ಶ್ರೀ ಕೆ.ಎಸ್. ಗಣಪತಿ ಭಟ್ ಅವರ ಪ್ರಕಾರ ಬದನೆಕಾಯಿಯನ್ನು ಕೀಳುವಾಗ ಕಾಯಿಯನ್ನು ಹಿಡಿದು ಮೇಲ್ಮುಖವಾಗಿ ಕೀಳಬೇಕಂತೆ. ಹಾಗೆ ಮಾಡದೆ ಕೆಳಮುಖವಾಗಿ ಕಾಯಿಗಳನ್ನು ಕಿತ್ತಲ್ಲಿ, ಮುಂದಿನ ಕೊಯಿಲುಗಳಲ್ಲಿ, ಕಾಯಿಗಳ ಸಂಖ್ಯೆ ಕಡಿಮೆಯಾಗುವುದಂತೆ. ಕಾಯಿಗಳನ್ನು ಕೈಯಿಂದಲೇ ಕಿತ್ತಬೇಕಂತೆ! ಕತ್ತಿ ಉಪಯೋಗಿಸಿಕ್ಕೊದರೆ ಮುಂದೆ ಹುಟ್ಟುವ ಹೂವುಗಳು ಮತ್ತು ಕಾಯಿಗಳ ಸಂಖ್ಯೆಯಲ್ಲಿ ಗಮನಾರ್ಹವಾದ ಇಳಿಮುಖವನ್ನು ಕಾಣುತ್ತೇವೆ ಎನ್ನುತ್ತಾರೆ ಅನುಭವಿ ಕೃಷಿಕ ಗಣಪತಿ ಭಟ್.

ಅಡಿಕೆ ಕೊನೆ ಕೀಳುವಾಗ

ಅಡಿಕೆ ಗೊನೆಯನ್ನು ಕೊಯ್ಯುವ ಸಂದರ್ಭದಲ್ಲಿ ಕತ್ತಿ ಅಥವಾ ಯಾವುದೇ ಕತ್ತರಿಯಂತಹ, ಅಡಿಕೆ ಕೀಳುವ ಸಾಧನಗಳನ್ನು ಉಪಯೋಗಿಸಿದಲ್ಲಿ, ಗೊನೆಯ ಬುಡದ ಭಾಗವು ಗಿಡದಲ್ಲೇ ಉಳಿಯುವುದು. ಇದರಿಂದಾಗಿ ಗಿಡದಲ್ಲಿನ ಮುಂದೆ ಚಿಗಿಯುವ ಗೊನೆಗಳಲ್ಲಿ ಶೇಕಡಾವಾರು ಕಾಯಿ ಕಟ್ಟುವ ಸಂಖ್ಯೆಯಲ್ಲಿ ತುಂಬಾ ಇಳಿಮುಖವಾಗುವುದು. ಆದ್ದರಿಂದ ಸಾಂಪ್ರದಾಯಿಕವಾಗಿ ಬಳಕೆಯಾಗುತ್ತಿರುವ ಕೊಕ್ಕೆಯು ಹೆಚ್ಚು ಬೆತ್ತದ ಉಪಯುಕ್ತ ಎಂಬುದನ್ನು ಒತ್ತಿ ಹೇಳುತ್ತಾರೆ ಶ್ರೀ ಗಣಪತಿ ಭಟ್.

- ಉಮೇಶ ಕೊಡ್ಲ

ಇಲಿ ನಿಯಂತ್ರಣ : ವಿವಿಧ ಪ್ರದೇಶ ಹಾಗೂ ಸಂಸ್ಕೃತಿಗಳ ಹೋಲಿಕೆ


ಒಂದೇ ರೀತಿಯ ಸಮಸ್ಯೆಗೆ ಹಲವು ಬಾರಿ ಪ್ರದೇಶ ಅಥವಾ ಸಂಸ್ಕೃತಿಗಳನ್ನು ಮೀರಿ ದೇಸೀಯವಾದ ಒಂದೇ ರೀತಿಯ ಪರಿಹಾರಗಳು ಹುಟ್ಟಿಕೊಂಡಿರುತ್ತವೆ.

ಸ್ವಿಜರ್‌ಲ್ಯಾಂಡ್ ದೇಶದ ಜರ್‌ಮಾತ್ ಎಂಬ ಪಟ್ಟಣದಲ್ಲಿ ಇಲಿಗಳ ಕೈಗೆ ಸಿಗದಂತೆ ಗಿಣ್ಣನ್ನು ಸಂರಕ್ಷಿಸುವುದು ದೊಡ್ಡ ಸಮಸ್ಯೆಯಾಗಿತ್ತು. ಅದೇ ರೀತಿ ಭೂತಾನ್ ದೇಶದ ಜನರಿಗೆ ಒಣಗುವುದಕ್ಕಾಗಿ ಹಗ್ಗದಿಂದ ನೇತು ಹಾಕಿದ ಮಾಂಸ ಅಥವಾ ಗಿಣ್ಣನ್ನು ಇಲಿಗಳಿಂದ ರಕ್ಷಿಸುವುದು ಸಮಸ್ಯೆ. ಇದೇ ರೀತಿಯಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕದ ರಾಜ್ಯದ ಕೆಲವು ಪ್ರಾಂತ್ಯಗಳಲ್ಲಿ ಜನರಿಗೆ ಹಗ್ಗದಲ್ಲಿ ಕಟ್ಟಿ ನೇತುಹಾಕಿದ ಆಹಾರದ ಪದಾರ್ಥ ಹಾಗೂ ಧಾನ್ಯವನ್ನು ಇಲಿಗಳಿಂದ ಕಾಪಾಡುವುದು ಸಮಸ್ಯೆಯಾಗಿತ್ತು. ಈ ಮೂರು ಪ್ರದೇಶಗಳ ಜನರು ಕಂಡುಕೊಂಡ ಪರಿಹಾರ ಸುಮಾರಾಗಿ ಒಂದೇ ತೆರನಾದದ್ದು.

ಚಿತ್ರ 'ಅ'ದಲ್ಲಿ ತೋರಿಸಿದಂತೆ ಸ್ವಿಜರ್‌ಲ್ಯಾಂಡ್ ದೇಶದ ಜನರು ಗಿಣ್ಣನ್ನು ಸಂಗ್ರಹಿಸುತ್ತಿದ್ದ ಸಂಗ್ರಹಾಲಯಗಳ ಕಾಲುಗಳಿಗೆ ಚಪ್ಪಟೆಯಾದ ಕಲ್ಲನ್ನಿಡುತ್ತಿದ್ದರು. ಕಾಲನ್ನು ಹತ್ತಿ ಬಂದ ಇಲಿ ಚಪ್ಪಟೆಯಾದ ಕಲ್ಲನ್ನು ದಾಟಿ ಬರಲು ಸೋಲುತ್ತಿತ್ತು. ಇದೇ ರೀತಿ ಈಗಿನ ಸಂಗ್ರಹಣಾಯ (Ware House)ಗಳಲ್ಲಿ ಸುತ್ತ ಕಟ್ಟೆ ಕಟ್ಟಿ ಇಲಿ ನಿಯಂತ್ರಿಸುತ್ತಾರೆ.

ಚಿತ್ರ 'ಆ'ದಲ್ಲಿ ತೋರಿಸಿದಂತೆ ಭೂತಾನಿನ ಜನರು ಹಗ್ಗದ ಎರಡೂ ತುದಿಗೆ ಮುಳ್ಳಿರುವ ಹೂ ಅಥವಾ ಗಿಡದ ಟೊಂಗೆಗಳನ್ನು ಸಿಕ್ಕಿಸಿ ಇಲಿ ತಡೆದರು.


ಚಿತ್ರ 'ಇ'ದಲ್ಲಿ ನಿರೂಪಿಸಿದಂತೆ ಮಹಾರಾಷ್ಟ್ರ ಹಾಗೂ ಕರ್ನಾಟಕದ ಜನರು ಹಗ್ಗಕ್ಕೆ ಕೆಳಮುಖವಾಗಿರುವಂತೆ ಬುಟ್ಟಿ ಸಿಕ್ಕಿಸಿ ಇಲಿ ಬರುವುದನ್ನು ತಪ್ಪಿಸುವರಂತೆ.



ಚಿತ್ರ (ಅ)



ಚಿತ್ರ (ಆ)



ಚಿತ್ರ (ಇ)

ಇಂದ್ರ ಪ್ರಸ್ಥದ ಸಸ್ಯ ಸಂಪತ್ತು !

ಇಂದ್ರಪ್ರಸ್ಥ, ಪುರಾಣದಲ್ಲಿ ಪಾಂಡವರ ಶ್ರಮ, ಸಾಹಸಗಳ ಫಲದಿಂದ ವೈಭವವಾಗಿ ನಿರ್ಮಾಣಗೊಂಡ ನಗರ. 1983ರಲ್ಲಿ ಮೈಸೂರಿನಲ್ಲಿ ಇಂಜಿನಿಯರ್ ಪದವಿ ಮುಗಿಸಿ, ಇಂತಹದೊಂದು ಕನಸು ಹೊತ್ತ ಎ.ಪಿ. ಚಂದ್ರಶೇಖರ್, ಮೈಸೂರಿನ ಸಮೀಪ ಕಳಲವಾಡಿ ಹಳ್ಳಿಯಲ್ಲಿ ಸಸ್ಯವೈವಿಧ್ಯಗಳಿಂದ ಕೂಡಿದ 13 ಎಕ್ರೆಗಳಷ್ಟು ಸಾವಯವ ಕೃಷಿ ಫಾರಂ ಒಂದನ್ನು ನಿರ್ಮಿಸಿ, ನೀಡಿದ ಹೆಸರೂ ಇಂದ್ರಪ್ರಸ್ಥ. ಇಂದು 'ಜೀವ ವೈವಿಧ್ಯತೆ' ಬಗ್ಗೆ ಮಾತಾಡುವವರೆಲ್ಲರೂ ಇಂದ್ರಪ್ರಸ್ಥದ ಸಸ್ಯ ಸಂಪತ್ತನ್ನು ನೋಡಿದರೆ ನಿಬ್ಬೆರಗಾಗಬೇಕಾಗುತ್ತದೆ. ಅದನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

ಇಂದ್ರಪ್ರಸ್ಥದ ಈ ಅಪಾರ ಸಸ್ಯ ಸಂಪತ್ತು ಅಲ್ಲಿನ ವೈವಿಧ್ಯತೆಗಳ ಉಪಯೋಗವನ್ನು ಅಳೆಯಲು ಹೊಸ ಹೊಸ ಮಾನದಂಡಗಳೇ ಬೇಕಾಗಬಹುದು. ಸ್ಥೂಲವಾಗಿ, ಗೋಚರವಾಗಬಹುದಾದ ಉಪಯೋಗಗಳನ್ನು ಈ ರೀತಿ ಪಟ್ಟಿ ಮಾಡಬಹುದು.

1. ನಿರಂತರ ಆದಾಯ :

ಈಗ ಸದ್ಯಕ್ಕೆ ತೆಂಗು, ಅಡಿಕೆ, ಲಿಂಬೆ, ಬಾಳೆ, ಶುಂಠಿ, ಹಾಲು ಮಾರುವುದರಿಂದ ಆದಾಯ ದೊರಕುತ್ತದೆ. ಜೊತೆಗೆ ಇದು ಒಂದು ರೀತಿಯಲ್ಲಿ ಸಹಜ ವಿಮೆ ಒದಗಿಸುತ್ತಾ ದೊರಕುತ್ತಿದೆ ಎನ್ನಬಹುದು. ಅಂದರೆ, ಒಂದರಲ್ಲಾದ ನಷ್ಟ ಮತ್ತೊಂದರಲ್ಲಿ ಕೂಡಿ ಬರುವಂತಾಗಿದೆ.

ಆದರೆ ಇಲ್ಲಿರುವ ಅಪಾರ ಅಲಂಕಾರಿಕ ಸಸ್ಯಗಳಿಗೆ ಈಗಾಗಲೇ ಬೇಡಿಕೆ ಶುರುವಾಗಿದೆ. ಇದನ್ನು ಮತ್ತಷ್ಟು ವ್ಯವಸ್ಥಿತಗೊಳಿಸಿದರೆ, ಆದಾಯದ ಮೂಲ ಮತ್ತಷ್ಟು ವಿಸ್ತಾರವಾಗಬಹುದು. ಇನ್ನು ಇಂದ್ರಪ್ರಸ್ತದ ಸಹಸ್ರಾರು ಔಷಧಿ ಸಸ್ಯ, ಗಿಡಮೂಲಿಕೆ, ಎಲೆ, ಫಲಪುಷ್ಪಗಳಿಗೆ ಯಾವತ್ತಾದರೂ ಬೇಡಿಕೆ ಬಂದೇ ಬರುತ್ತದೆಂಬುದು ಚಂದ್ರಶೇಖರ್‌ರವರ ನಂಬಿಕೆ. ಈಗಾಗಲೇ ಎರಡು 'ನಾಟಿ ಔಷಧಿ ಕಂಪನಿ'ಗಳಿಂದ ಈ ಬಗ್ಗೆ ಉತ್ಸಾಹಕರ ಪ್ರತಿಕ್ರಿಯೆ ಬಂದಿದೆ ಎನ್ನಲಾಗಿದೆ.

2. ಗೃಹಿಣಿಯ ಸಂತೃಪ್ತಿ:

ಸಸ್ಯವೈವಿಧ್ಯತೆಯ ಮತ್ತೊಂದು ಮಹತ್ವದ ಆಯಾಮ ಎಂದರೆ, ಮನೆ ಮಡದಿಯ ಹಲವು

ಇಂದ್ರ ಪ್ರಸ್ಥದ ಸಸ್ಯ ಸಂಪತ್ತು

ಸಸ್ಯದ ಹೆಸರು	ಸಂಖ್ಯೆ/ವಿಸ್ತೀರ್ಣ	ತಳಿಗಳ ಸಂಖ್ಯೆ	ಮುಖ್ಯ ತಳಿಗಳು
ವಾಣಿಜ್ಯ ತಳಿಗಳು			
ತೆಂಗು	500	6	ತಿಪಟೂರು, ಗಂಗಾಪಾನಿ
ಅಡಿಕೆ	1100	10	ರತ್ನಗಿರಿ, ಮಂಗಳ, ಸಿಂಗಾಪುರ, ಮೋಹಿತ್ ನಗರ
ಹಣ್ಣಿನ ಬೆಳೆಗಳು			
ಬಾಳೆ	4000	17	ಏಲಕ್ಕಿ, ಪಚ್ಚೆ, ರಸಬಾಳೆ, ಬೂದಿಬಾಳೆ, ಚಂದ್ರಬಾಳೆ
ಸಪೋಟ	60	3	ಎಲ್ಲಾ
ಮಾವು	70	16	ಉಪ್ಪಿನ ಕಾಯಿ, ರಸಪುರಿ, ರಾಜಗೀರ್, ಬಾದಾಮಿ
ಮೂಸಂಬಿ/ಕಿತ್ತಳೆ	45	3	
ಸೀಬೆ	8	5	ಅಲಹಾಬಾದ್, ಬೀಜರಹಿತ
ಕಾಫಿ	500	5	ಕಾವೇರಿ, ಅರೇಬಿಯಾ, ರೊಬಸ್ಟ್
ಹಲಸು	30	15	ರುದ್ರಾಕ್ಷಿ, ಬೇರುಹಲಸು
ಲಿಂಬೆ ಜಾತಿಗಳು	41	11	ಗಜಲಿಂಬೆ, ಹೆರಳೆ, ದುಡ್ಲೆ, ಮಾಬಲಹುಲಿ
ನೇರಳೆ	12	5	ನೀಲಿ, ಜಂಬು, ಪನ್ನೇರಳೆ
ದಾಳಿಂಬೆ	50	2	ಗಣೇಶ, ಜ್ಯೋತಿ
ಪಪ್ಪಾಯಿ	30	2	-
ಅನಾನಸ್	15	3	-
ನೆಲ್ಲಿ	6	3	ಬೆಟ್ಟದ ನೆಲ್ಲಿ, ರಾಜನೆಲ್ಲಿ
ಹುಳಿ ಹಣ್ಣುಗಳು	15	7	ದಾರೆ, ಚಾಪೆ, ಉಂಡೆ ಹುಳಿ, ಪುನರ್‌ಪುಳಿ, ಅಂಬ್ಗನಿ
ಬೆಣ್ಣೆ ಹಣ್ಣು	25	3	-
ಚೆರಿ	10	4	ಮಲ್ಬೇರಿಯನ್, ಬಾಬುಡನ್
ಇತರ ಹಣ್ಣುಗಳು	67	21	ಚಕೋತ, ರಾಮಫಲ, ದ್ರಾಕ್ಷಿ, ಬಾದಾಮಿ, ಅಂಜೂರ
ಗೆಡ್ಡೆಗಳು	5	13	ಸುವರ್ಣ, ಅರಿಶಿನ, ಗೆಣಸು, ಶುಂಠಿ, ಕಣವೆ
ತರಕಾರಿ	1 ಎಕ್ರೆ		
ಸೊಪ್ಪು	-	12	ಬಸಳೆ, ತಿಮರೆ, ಹರಿವ, ನುಗ್ಗೆ
ಅವರೆ	-	9	ತಿಂಗಳ ಚತುರ್ಭುಜ, ಅಲಸಂದೆ,
ಇತರ ತರಕಾರಿ	-	17	ತೊಂಡೆ, ಹಾಗಲ, ಬದನೆ, ಬೆಂಡೆ, ಮೂಲಂಗಿ

ಇಂದ್ರ ಪ್ರಸ್ಥದ ಸಸ್ಯ ಸಂಪತ್ತು (ಮುಂದುವರೆದಿದೆ)

ಸಸ್ಯದ ಹೆಸರು	ಸಂಖ್ಯೆ/ವಿಸ್ತೀರ್ಣ	ತಳಿಗಳ ಸಂಖ್ಯೆ	ಮುಖ್ಯ ತಳಿಗಳು
ಸುವಾಸನಾ ಗಿಡಗಳು	ತೋಟದೊಳಗೆ	24	ಪಚ್ಚೆತೆನೆ, ಪುದಿನ, ಲಾವಂಚ, ಏಲಕ್ಕಿ, ದಾಲಚಿನ್ನಿ, ಕಾಮಕಸ್ತೂರಿ, ಬಡೇ ಸೊಪ್ಪು
ಔಷಧಿ ಗಿಡಗಳು	-	40	ಮಧುನಾಶಿನಿ, ಗರಿಕೆ, ದೊಡ್ಡ ಪತ್ರೆ, ಎಕ್ಕ, ತುಳಸಿ, ಆಡುಸೋಗೆ, ತುಂಬೆ, ಬಿಲ್ವ
ಹುಲ್ಲು	-	5	ಗಿನಿ, ಪ್ಯಾರೆ
ಹೂವು	ಮನೆಸುತ್ತ		
ಮಲ್ಲಿಗೆ		15	ದುಂಡುಮಲ್ಲಿಗೆ, ಮಂಗಳೂರು ಮಲ್ಲಿಗೆ, ಹಳದಿ, ಸಂಜೆ ಮಲ್ಲಿಗೆ
ಪಾಮ್‌ಗಳು	-	10	ಬೀಸಾಳ, ಈಚಲ, ಅಡಿಕೆ
ಇತರೆ	-	50	ಗುಲಾಬಿ, ದಾಸವಾಳ, ಸುರುಳಿ, ಸಂಪಿಗೆ, ತಾವರೆ, ಚೆಂಡು
ಮರಗಳು	87 ಬಗೆಗಳು		
ಸುರಾಯಿ	500	-	
ತೇಗ	200	-	
ಸಿಲ್ವರ್ ಓಕ್	50	-	
ಬಿದಿರು	-		11 ವಿಧ
ಬೇವು	50	-	
ಬತ್ತ	1/4 ಎಕ್ರೆ	2	ಗಂಧಸಾಲೆ, ಬಾಸುಮತಿ

ಅತ್ಯಗತ್ಯಗಳ ಪೂರೈಕೆಗಳಿಗೆ ಒತ್ತು ಕೊಡುವಂತಾಗಿರುವುದು. ಅವುಗಳನ್ನು ಎ.ಪಿ. ಚಂದ್ರಶೇಖರ್‌ರವರ ಪತ್ನಿ ಶ್ರೀಮತಿ ನಿರ್ಮಲರವರು ಈ ರೀತಿ ವಿವರಿಸುತ್ತಾರೆ.

ಅ) ಮಕ್ಕಳು, ಮನೆಮಂದಿಗೆ ಬರುವ ಸಣ್ಣಪುಟ್ಟ ಕಾಯಿಲೆಗಳಿಗೆ ತಕ್ಷಣ ನಾಟಿ ಔಷಧಿ ತಯಾರಿಸಲು ಶುಂಠಿ, ದೊಡ್ಡಪತ್ರೆ, ತಂಬಳಿಗಳಂತವುಗಳು ಲಭ್ಯ.

ಆ) ಸಾವಯವ ಮೂಲದ, ವಿಧ ವಿಧದ ನಾಟಿ ತಳಿಗಳು ಹಣ್ಣು, ಹಂಪಲು ತರಕಾರಿಗಳು, ಕಬ್ಬಿನ ರಸ, ಇತ್ಯಾದಿಗಳಿಂದ ಸದಾ ರುಚಿರುಚಿ ಊಟ, ಆಹಾರ, ಮಾಡಿ ಬಡಿಸುವ ಭಾಗ್ಯ.

ಇ) ಮುಡಿಯಲು, ದೇವರಿಗೆ, ಮನೆಗೆ ಬಂದ ಇತರ ಗೃಹಿಣಿಯರಿಗೆ, ಹಬ್ಬ ಹರಿದಿನಗಳಿಗೆ ಸದಾ ಪುಷ್ಪಗಳು ಲಭ್ಯ.

ಈ) ಮಕ್ಕಳಿಗೆ ವಿರಾಮದಲ್ಲಿ ವಿಧ ವಿಧದ ಸಸ್ಯಗಳ ಪಶುಪಕ್ಷಿಗಳ, ಕ್ರಿಮಿ ಕೀಟಗಳ ಬಗ್ಗೆ 'ಸಹಜ ಶಿಕ್ಷಣ' ನೀಡುವಂತಾಗುವುದು.

ಉ) ದಾಸವಾಳದ ಸೊಪ್ಪಿನ ದೋಸೆ, ಅದರ ಇಡ್ಲಿ, ಬಸಲೇ ದೋಸೆ, ಜಾಯಿಕಾಯಿ ಉಪ್ಪಿನ ಕಾಯಿ, ಚರ್ರಿಗಳಿಂದ ಜಾಮ್, ವಿವಿಧ ಜಾತಿಯ ಸೊಪ್ಪುಗಳಿಂದ 'ಪತ್ರೊಡೆ' ಹೀಗೆ ಇಂದು ಎಲ್ಲೂ ದೊರೆಯದಂತಹ ರೀತಿಯಲ್ಲಿ 'ಆಹಾರದ ವಿವಿಧತೆಗಳನ್ನು' ಸದಾ ಬಡಿಸಿ, ಮನೆಮಂದಿಯನ್ನು ತೃಪ್ತಿಪಡಿಸುವ ನೆಮ್ಮದಿ.

3. ಮಣ್ಣಿನ ಫಲವತ್ತತೆ:

ಮಣ್ಣಿನ ಫಲವತ್ತತೆ ಈ ರೀತಿಯ ಸಸ್ಯಸಂಪತ್ತಿನಿಂದ ಹೇಗೆ ಸಮೃದ್ಧವಾಗಿರುತ್ತದೆ ಎಂದು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲ. ಅದೂ, ಚಂದ್ರಶೇಖರ್‌ರವರು ಸಾವಯವ, ಪ್ರಾಕೃತಿಕ ಬೇಸಾಯ ನಡೆಸುವುದರಿಂದ, ಬಿದ್ದ ಎಲೆ, ಸಮೃದ್ಧ ಕಳೆ, ಜೊತೆಗೆ ಹಾಲುವಾಣ, ಗ್ಲಿರಿಸೀಡಿಯ, ಕಾಡು ಅಗಸೆ, ಕಡಲೆಗಳಂತಹ ದ್ವಿದಳ ಧಾನ್ಯಗಳಿಂದ ಸಾರಜನಕ ಹಿಡಿದಿಡುವಂತಾಗುವುದು. ಹೀಗೆ ಹಲವು ಹತ್ತು ದಾರಿಗಳಿಂದ ಭೂಮಿಯ ಫಲವತ್ತತೆ, ಮಣ್ಣಿನ ಚೈತನ್ಯ ಇಮ್ಮಡಿಯಾಗುವಂತಾಗಿದೆ. ಹೀಗೆ ಬಾಳೆಯಿಂದ ಪೊಟ್ಯಾಷ್, ಕ್ಯಾಂಪ್ರಿಯಿಂದ ರಂಜಕ, ಬಸಳೆ, ಹರಿವೆಗಳಿಂದ ಕಬ್ಬಿಣ, ನರಗೋಳು ಸೊಪ್ಪಿನಿಂದ ತಾಮ್ರ ಇತ್ಯಾದಿ ಸೂಕ್ಷ್ಮ ಪೋಷಕಾಂಶಗಳು ದೊರೆತು ಭೂಮಿಯ ಫಲವತ್ತತೆ ಪರಿಪೂರ್ಣವಾಗುವಂತಾಗಿರುತ್ತದೆ. ಹಾಗೆಯೇ ವಿವಿಧ ನಮೂನೆಗಳ ಗೆಡ್ಡೆ, ಗೆಣಸುಗಳು ಭೂಮಿಯಡಿಯಲ್ಲಿ ಸಹಜ 'ಉಳುಮೆ' ನಡೆಸಿ ಹದಮಾಡಿ, ಗಾಳಿಯಾಡಿಸುವಂತೆ ಮಾಡುತ್ತದೆ. ಇವೆಲ್ಲಾ ಇಂದ್ರಪ್ರಸ್ಥದ ಭೂಮಿಯ ಸಾರ ಸತತ ಹೆಚ್ಚಾಗುವಂತೆ ಮಾಡಿ, ಅದರಿಂದ ಪ್ರತಿಫಲ ನಿರಂತರವಾಗಿ ದೊರಕುವಂತೆ ಮಾಡುತ್ತವೆ

4. ಪೀಡೆಗಳ ನಿವಾರಣೆ:

ಸಾವಯವ ಕೃಷಿಯಿಂದ ಮಣ್ಣಿನ ಆರೋಗ್ಯ ಕಾಪಾಡಿಕೊಂಡು, ಸಸ್ಯಗಳಲ್ಲಿ ಪ್ರತಿರೋಧ ಶಕ್ತಿ ಅಧಿಕವಾಗಿರುವುದರಿಂದ, ತಮ್ಮ ಬೆಳೆಗಳಲ್ಲಿ ಸಹಜವಾಗಿ ಪೀಡೆ,ರೋಗಗಳನ್ನು ಎದುರಿಸುವ ಎಂಬುದು ಚಂದ್ರಶೇಖರ್‌ರವರ ಅನುಭವ. ಜೊತೆಗೆ ತೋಟ, ಮನೆ ಸುತ್ತಲೆಲ್ಲಾ ತುಳಸಿ, ಪುದಿನ, ದೊಡ್ಡ ಪತ್ರೆ, ಬೇವು ಇಂತಹ ಸಹಜವಾಗಿ ಕ್ರಿಮಿ ಕೀಟಗಳನ್ನು ದೂರವಿರಿಸುವಂತೆ ಮಾಡುವ ಔಷಧಿ ಸಸ್ಯಗಳಿಂದ ತುಂಬಿರುವುದರಿಂದ ಅವುಗಳು ಸ್ವಾಭಾವಿಕ ರಕ್ಷಣೆ ನೀಡುತ್ತಿವೆ ಎನ್ನಲಾಗಿದೆ. ಇವುಗಳಿಗಿಂತ ಮಿಗಿಲಾಗಿ, ಇಂದ್ರಪ್ರಸ್ಥದ ಸಸ್ಯ, ಮರ, ಗಿಡಗಳ ನಡುವೆ ವಿಧ ವಿಧದ ಹಕ್ಕಿಗಳು, ಜೇಡ, ಹಲ್ಲಿ ಮುಂತಾದ ಕೀಟ ಭಕ್ಷಗಳು ತುಂಬಿ ನೆಲೆಸಿರುವುದರಿಂದ ಇಲ್ಲಿ ಇವುಗಳಿಂದ ದೊರೆಯುವ ಸೇವೆ ಕೂಡ ಅಪಾರವಾಗಿದೆ. ಕುಂಚಾಲೆ, ಗಸಗಸೆಹಣ್ಣು, ನೇರಳೆ, ಚೆಲ್ಪಿ ಇವೇ ಮೊದಲಾದ ಹಣ್ಣಿನ ಮರಗಳನ್ನು ಹಕ್ಕಿಗಳಿಗಾಗಿಯೇ ಬೆಳೆಸಿರುವ

ಎನ್ನುತ್ತಾರೆ ಚಂದ್ರಶೇಖರ್. ಹೀಗೆ ಇಲ್ಲಿ ಪ್ರಕೃತಿ, ಪಶು ಪಕ್ಷಿಗಳೊಡನೆ ಕೂಡಿ ಸಾಮರಸ್ಯದ ಕೃಷಿ ನಡೆಸುತ್ತಿರುವುದು ನಮ್ಮೆಲ್ಲರ ಕಣ್ಣು ತೆರೆಸಬೇಕಾಗಿದೆ.

5. ಸಹಜ ಹವ್ಯಾಸ :

ಈ ಇಂದ್ರಪ್ರಸ್ಥವನ್ನರಿಯುತ್ತಾ ಹೋದಂತೆ, ಕೃಷಿಯ ಆಧ್ಯಾತ್ಮಿಕ ಆಯಾಮ ನಮಗೆ ಗೋಚರಿಸುತ್ತದೆ. ಲಾಭ ನಷ್ಟಗಳಿಂದ ತೂಗಿ ನೋಡುವ ಅನ್ನ, ವಸ್ತ್ರಗಳ ಲೌಕಿಕ ಬದುಕಿಗಿಂತ ಮಿಗಿಲಾದ ಅಲೌಕಿಕ ಬದುಕಿನ ಅಗತ್ಯತೆ ಮನುಷ್ಯರಿಗೆ ಅತ್ಯಗತ್ಯವಾಗಿದೆ ತಾನೆ. ಅದು ಆಧ್ಯಾತ್ಮಿಕತೆ ಇರಬಹುದು ಅಥವಾ ಇಂದಿನ ಆಧುನಿಕ ಜಗತ್ತಿನ ರೀತಿ 'ಹವ್ಯಾಸ' ಗಳಿರಬಹುದು. ವಿಧ ವಿಧದ ಸಸ್ಯಗಳನ್ನು, ತಳಿಗಳನ್ನು ಮರಗಿಡಗಳನ್ನು ತಂದು ಕಲೆಹಾಕಿ, ಪೋಷಿಸಿ ಬೆಳೆಸುವುದೇ ಒಂದು 'ಹವ್ಯಾಸ' ಎಂದು ಹೇಳುತ್ತಿರುವ ಚಂದ್ರಶೇಖರ್‌ರವರು, ಆ ಸಸ್ಯ ವಿವಿಧತೆಯನ್ನು, ಆ ಮೂಲಕ ಪ್ರಕೃತಿಯ ನಿಗೂಢತೆಯನ್ನು ಅರಿಯುತ್ತಾ ಅದರಿಂದ ದೊರೆಯುತ್ತಿರುವ ತೃಪ್ತಿ, ಆಧ್ಯಾತ್ಮಿಕ ಬದುಕಿನಿಂದ ದೊರೆಯುವ ಸಾರ್ಥಕತೆಯಷ್ಟೇ ಗಹನವಾಗಿರುತ್ತದೆ ಎನ್ನುತ್ತಾರೆ. ಹೀಗೆ ಚಂದ್ರಶೇಖರ್‌ರವರ ಇಡೀ ಕುಟುಂಬ, ಅವರ ಪತ್ನಿ, ಮಕ್ಕಳಾದ ಅಭಿಜಿತ್ ಮತ್ತು ಶಿಲ್ಪ, ಈ ವಿಶಿಷ್ಟ ಪ್ರಯೋಗದ ಮೂಲಕ ಬದುಕಿನ ಸಾರ್ಥಕತೆ ಕಂಡುಕೊಳ್ಳುತ್ತಿರುವುದನ್ನು ಅಳೆಯುವ ಮಾನದಂಡವಾದರೂ ಎಲ್ಲಿದೆ?

ಹಾಗೇ ಇಂದ್ರಪ್ರಸ್ಥದಲ್ಲಿ ದುಡಿಯುವ ಆಳುಗಳಿಗೆ ದೊರೆಯುವ ಹಿತಕರವಾದ ತಣ್ಣನೆಯ ವಾತಾವರಣ, ವಿಧವಿಧವಾದ ಹಣ್ಣು ಹಂಪಲುಗಳ ರುಚಿ, ಅಲ್ಲಿನ ದನ, ಕರು, ನಾಯಿ, ಬೆಕ್ಕುಗಳು ಅನುಭವಿಸುತ್ತಿರುವ ನಿಷ್ಕಲ್ಮಷ ಗಾಳಿ, ನೀರು, ಆಹಾರ, ಮೈಸೂರು ನಗರದ ಆ ಉಸಿರು ಕಟ್ಟುವ ವಾತಾವರಣದಿಂದ ಬೇಸತ್ತ ಪ್ರಕೃತಿ ಪ್ರಿಯ ಕುಟುಂಬಗಳಿಗೆ ಬೇಟಿ ನೀಡಿ ಪಡೆಯಬಹುದಾಗಿರುವ ಆ ಆಹ್ಲಾದಕತೆ, ಮಿಗಿಲಾಗಿ ಸಸ್ಯಶಾಸ್ತ್ರದ ವಿದ್ಯಾರ್ಥಿಗಳ ಯಾವುದೇ ಪ್ರಯೋಗಗಳಿಗೆ ಸದಾ ತೆರೆದಿರುವಂತಿರುವ ನೈಸರ್ಗಿಕ ಪ್ರಯೋಗ ಶಾಲೆಯ ಲಾಭ, ಇವುಗಳೆಲ್ಲವುಗಳ ಅಪಾರ ಅಗತ್ಯ ನಮ್ಮೆಲ್ಲರಿಗೆ ಗೋಚರಿಸುತ್ತದೆ. ಅಂದಮೇಲೆ ಇಂದ್ರಪ್ರಸ್ಥ ನಮ್ಮ ಕೃಷಿ ಪಂಡಿತರ ಕಣ್ಣು ತೆರೆಸುವಂತಾಗಲು ಹೆಚ್ಚು ಸಮಯ ಬೇಕಾಗದು ಎನಿಸುತ್ತಿದೆ.

ಸಂಶೋಧನಾಲಯದಿಂದ ಹೊರಬಂದ ಹಿತ್ತಲಗಿಡ

ಪಂಚಗವ್ಯ

- ಡಾ. ಎಂ.ಜಿ. ಚಂದ್ರಕಾಂತ್ ಮತ್ತು ವಾಸುದೇವ

ಪಂಚಗವ್ಯವನ್ನು ಪ್ರಾಯಶ್ಚಿತ-ವಾಗಿಯೂ, ಶುದ್ಧೀಕರಣಕ್ಕೂ ಸೇವಿಸು- ವುದು ಒಂದು ಆಚಾರ. ಪಂಚಗವ್ಯ; ಹಾಲು, ಮೊಸರು, ತುಪ್ಪ, ಸಗಣಿ ಮತ್ತು ಗಂಜಲಗಳ ಮಿಶ್ರಣ. ಪ್ರಾಚೀನ ಸಾಹಿತ್ಯಗಳಲ್ಲಿ ಪಂಚಗವ್ಯವನ್ನು ಸಸ್ಯಗಳಿಗೆ ಉಪಯೋಗಿಸಿ- ರುವುದು ಉಲ್ಲೇಖಿಸಿಲ್ಲ. ಆದರೆ ಗಂಜಲ, ಸೆಗಣಿ, ಮೊಸರು, ಹಾಲು ಮತ್ತು ತುಪ್ಪವನ್ನು ಬಿಡಿಬಿಡಿಯಾಗಿ ವಿವಿಧ ರೀತಿಯಲ್ಲಿ ಸಸ್ಯ ಪೀಡೆ ನಿವಾರಕಗಳಾಗಿ, ಬೀಜ ಸಂಸ್ಕಾರಕ್ಕೆ ಉಪಯೋಗಿಸಿರುವುದು ಕಂಡು ಬರುತ್ತದೆ.

ಪಂಚಗವ್ಯವನ್ನು ಸಸ್ಯರೋಗ ನಿವಾರಕವಾಗಿಯೂ ಉಪಯೋಗಿಸಬಹುದೆಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಸ್ಯರೋಗ ಪ್ರಾಧ್ಯಾಪಕರಾದ (ನಿವೃತ್ತ) ಡಾ॥ ಎಚ್. ರಾಮಚಂದ್ರರೆಡ್ಡಿಯವರೂ ಹಾಗೂ ಶಿಷ್ಯ ಶ್ರೀ ಪದ್ಮೋದಯನವರು ತೋರಿಸಿಕೊಟ್ಟಿದ್ದಾರೆ. ಇವರಿಗೆ ಜೆವನ್ ಮಾರ್ಟಿನ್ ಎಂಬುವರ ಪ್ರಯೋಗ ಸ್ಫೂರ್ತಿ.

ಶ್ರೀ ಪದ್ಮೋದಯರು 48 ಭಾಗ ಸೆಗಣಿ, 40 ಭಾಗ ಗಂಜಲ, 5 ಭಾಗ ಹಾಲು, 5 ಭಾಗ ಮೊಸರು, 2 ಭಾಗ ತುಪ್ಪ, ರವೆಯಷ್ಟು ಉಪ್ಪು ಮತ್ತು ಈಸ್ಟ್ ಬೆರಸಿದ ಪಂಚಗವ್ಯ ತಯಾರಿಸಿ, ಮಣ್ಣು ಜನ್ಯ ಪುಸೇರಿಯಂ ಎನ್ನುವ ಶಿಲೀಂಧ್ರದಿಂದ ಬರುವ ಟೊಮಾಟೋ ಸೊರಗು ರೋಗಕ್ಕೆ ಬಳಕೆ ಮಾಡಿ ಯಶಸ್ವಿಯಾಗಿದ್ದಾರೆ. ಮಾರ್ಪಡಿಸಿದ ಪಂಚಗವ್ಯವನ್ನು 15 ದಿವಸ ಅಲುಗಾಡಿಸುತ್ತಿದ್ದು, ಶೋಧಿಸಿದ ದ್ರಾವಣಕ್ಕೆ 10 ಪಟ್ಟು ನೀರು ಸೇರಿಸಿ ರೋಗ ಪೀಡಿತ ಸಸ್ಯಗಳಿಗೆ ಸಿಂಪಡಿಸಿದರು. ಇದರ ಪರಿಣಾಮವನ್ನು ಕಾರ್ಬಂಡೈಜಿಯಂ ಎಂಬ ಶಿಲೀಂದ್ರ ನಾಶಕ ಉಪಯೋಗಿಸಿದ ಸಸ್ಯಗಳಿಗೆ ಹೋಲಿಕೆ ಮಾಡಿದಾಗ ಮಾರ್ಪಡಿಸಿದ ಪಂಚಗವ್ಯ ಬಳಸಿದ ಸಸಿಗಳಿಂದ ಇಳುವರಿ 12.3 ಟನ್/ಹೆಕ್ಟೇರ್ ಮತ್ತು ಕಾರ್ಬಂಡೈಜಿಯಂನಿಂದ 10.3 ಟನ್/ಹೆಕ್ಟೇರ್ ಇಳುವರಿ ದೊರಕಿತು. ಖರ್ಚು ಮತ್ತು ಲಾಭದ ಪ್ರಮಾಣ 1:21 ಅಂದರೆ ಒಂದು ರೂ. ಖರ್ಚಿಗೆ ರೂ. 21 ರಷ್ಟು ಲಾಭ ಈ ಪಂಚಗವ್ಯದ ಉಪಯೋಗದಿಂದ ದೊರಕುತ್ತದೆ. ಅದೇ ಕಾರ್ಬಂಡೈಜಿಯಂನಲ್ಲಿ ಈ ಪ್ರಮಾಣ 1:1.1 ಆಗಿದೆ.

ಇದರಿಂದ ತಿಳಿದುಕೊಳ್ಳಬಹುದಾದ ಅಂಶಗಳೇನೆಂದರೆ ಕಾರ್ಬಂಡೈಜಿಯಂಗಿಂತ ಮಾರ್ಪಡಿಸಿದ ಪಂಚಗವ್ಯ ಎಲ್ಲಾ ವಿಧಗಳಿಂದಲೂ ಉತ್ತಮವಾಗಿದೆ. ಅಂದರೆ ಕಡಿಮೆ ರೋಗ, ಹೆಚ್ಚು ಇಳುವರಿ ಹಾಗೂ ಕಡಿಮೆ ಖರ್ಚು ಹೆಚ್ಚು ಲಾಭ. ಯಾಕೆಂದರೆ ಮಾರ್ಪಡಿಸಿದ ಪಂಚಗವ್ಯ ಅನೇಕ ಸೂಕ್ಷ್ಮ ಜೀವಿಗಳಿಂದ ಕೂಡಿದ ಜೀವಜಲ. ಇವು ಅನೇಕ ರೋಗಾಣುಗಳಿಗೆ ಪ್ರತಿದ್ವಂಧಿಗಳಾಗಿ ಹಾಗೆಯೇ ಪೋಷಕಾಂಶಗಳ ಮಿಶ್ರಣ ವಾಗಿದ್ದು ಸಸ್ಯ ಬೆಳವಣಿಗೆಗೆ ಪೂರಕವಾದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಇದೇ ಪ್ರಯೋಗ ಬಾಳೆಯ ಕಟ್ಟೆರೋಗದ ಮೇಲೆ ಈಗ ಕೈಗೊಳ್ಳಲಾಗಿದೆ.

ಆಧಾರ: ಕೃಷಿ ವಿಜ್ಞಾನ, ಜೂನ್ 1995.

ನೆಲಮಾವಿನ ಮಿಡಿ ಉಪ್ಪಿನ ಕಾಯಿ

- ಸವಿತಾ ಮತ್ತು ನರಸಿಂಹ ಎನ್.

ಮಲೆನಾಡಿನ ಒಂದು ವಿಶೇಷ ಉಪ್ಪಿನ ಕಾಯಿಯ ಪರಿಚಯ ಇಲ್ಲಿದೆ. ಉತ್ತರ ಕನ್ನಡದ ನೆಲವಾಂವ್ ಹಳ್ಳಿಯ ದಿ। ಶ್ರೀಮತಿ ಯಂಕಮ್ಮನವರು ಅನುಸರಿಸುತ್ತಿರುವ ಕ್ರಮದ ಆಹಾರದ ಮೇಲೆ ಈ ಲೇಖನ ಸಿದ್ದ ಪಡಿಸಲಾಗಿದೆ. ಉತ್ತಮ ಪರಿಮಳದ, ದಪ್ಪ ಸಿಪ್ಪೆಯ ಗೋಲಿಯಾಕಾರದ ಮಾವಿನ ಮಿಡಿಗಳನ್ನು ಸಂಗ್ರಹಿಸಿ. ಉದ್ದ ತೊಟ್ಟಿನ ಮಿಡಿಗೆ ಪೆಟ್ಟು ತಗಲದಂತೆ ನೋಡಿಕೊಳ್ಳಿ. ಸಂಗ್ರಹಿಸಿದ ಮಿಡಿಗಳ ತೊಟ್ಟನ್ನು ಅರ್ಧ ಸೆಂಟಿಮೀಟರ್ ಉದ್ದಕ್ಕಿಳಿಸಿ ಸ್ವಚ್ಛಗೊಳಿಸಿ. ಒಂದು ರಾತ್ರಿ ಸ್ವಚ್ಛ ಬಟ್ಟೆಯ ಮೇಲೆ ಆರಲು ಬಿಡಬೇಕು. ಈ ಮಿಡಿಗಳನ್ನು ಮರದ ದೊಡ್ಡ ಪಾತ್ರೆಗಳಲ್ಲಿ ಅಥವಾ ಕಲಾಯಿ ಇರುವ ಹಿತ್ತಾಳೆ ಪಾತ್ರೆಯಲ್ಲಿ - ಒಂದು ಪದರ ಕಲ್ಲುಪ್ಪು, ಇನ್ನೊಂದು ಪದರ ಮಿಡಿ - ಹೀಗೆ ಒಂದರ ಮೇಲೊಂದರಂತೆ ಹಲವು ಪದರಗಳಲ್ಲಿರಿಸಿ, ಪಾತ್ರೆಗೆ ಹೊಂದುವಂತೆ ಬಾಳೆ ಎಲೆಯನ್ನು ಇರಿಸಿ ಮುಚ್ಚಿಬಿಡಿ. ಅದರ ಮೇಲೆ ಭಾರವಾದ ವಸ್ತು (ರುಬ್ಬುಕಲ್ಲಿನಂತ) ವೊಂದನ್ನಿಡಿ. ಏಳು-ಎಂಟು ದಿನಗಳಲ್ಲಿ ಗುಂಡನೆಯ ಮಿಡಿ ಚಿರುಟಿಕೊಂಡಿರುತ್ತದೆ.

ಕೊತ್ತಂಬರಿ (ದನಿಯಾ), ಜೀರಿಗೆ, ಕಾಳುಮೆಣಸು, ಲವಂಗ, ಸಾಸಿವೆ (ಹೆಚ್ಚು ಪ್ರಮಾಣದಲ್ಲಿ) - ಇವುಗಳನ್ನು ಹುರಿದು, ಇಂಗು ಸೇರಿಸಿ, ಚೆನ್ನಾಗಿ ಒಣಗಿದ ಕೆಂಪು ಮೆಣಸಿನಕಾಯಿಯೊಂದಿಗೆ ನುಣ್ಣಗೆ ರುಬ್ಬಿ, ಈ ಹಿಟ್ಟನ್ನು (ಕುದಿಸಿ, ಆರಿಸಿದ) ಉಪ್ಪಿನ ದ್ರಾವಣದಲ್ಲಿ ಮಿಶ್ರ ಮಾಡಿ. ಚಿರುಟಿದ ಮಿಡಿಯೊಂದಿಗೆ ಸೇರಿಸಿ. ಈ ರೀತಿ ಕಲಸಿದ ಉಪ್ಪಿನಕಾಯಿಯನ್ನು ಜಾಡಿಗಳಲ್ಲಿ ತುಂಬಿಸಿ, ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಿ. ನಂತರ ಮುಚ್ಚಳವಿರಿಸಿ ನಾಲ್ಕೈದು ಪದರದ ಶುಭ್ರ ಬಟ್ಟೆಯೊಂದನ್ನು ಕಟ್ಟಿ, ಈ ಜಾಡಿಗಳನ್ನು ಹೆಚ್ಚು ಗಾಳಿ ಬೀಸದ ಬೆಚ್ಚಗಿನ ಒಳಮನೆಯಲ್ಲಿರಿಸಿ. ಮಿಡಿ ಉಪ್ಪಿನ ಕಾಯಿ ವರ್ಷವೆರಡು ಕಳೆದರೂ ಹಾಳಾಗಿರುವುದಿಲ್ಲ. ಹ್ಞಾಂ! ನೆನಪಿಡಿ. ಮಿಡಿ ಉಪ್ಪಿನ ಕಾಯಿ ತಯಾರಿಸುವಾಗ ನೀರು ಎಲ್ಲೂ ಬೀಳದಂತೆ ನೋಡಿಕೊಳ್ಳಿ ಹಾಗೂ ಉಪ್ಪಿನಕಾಯಿ ತಯಾರಿಸುವ ಕೈ, ಪಾತ್ರೆ ಮುಂತಾದವುಗಳು ಚೆನ್ನಾಗಿ ಒಣಗಿಸಿಕೊಂಡಿರಬೇಕು.

ಸಂಜೀವಿನಿ ಚಹ

- ಬಿ.ಎನ್. ಪ್ರಕಾಶ್

ಈಗ್ಗೆ ಕೆಲವು ತಿಂಗಳ ಹಿಂದೆ ನಮ್ಮ ಮನೆಗೆ ಅನೀರಿಕ್ಷಿತವಾಗಿ ಪತ್ನಿಯ ಕಡೆಯಿಂದ ಸಂಬಂಧಿಕ ಮಹಿಳೆಯರಿಬ್ಬರು ಮೈಸೂರಿನಿಂದ ಬಂದು, ಒಂದು ದೊಡ್ಡನೆಯ ಸ್ಟೀಲ್ ಪಾತ್ರೆಯಿಂದ ಪ್ಲಾಸ್ಟಿಕ್ ರೀತಿ ಮೆತ್ತಗೆ, ಲೋಳೆಯಾಗಿದ್ದು, ಹುಳಿ ವಾಸನ ಬರುತ್ತಿರುವ 'ಖರಗೋಷಕ್' ಶಿಲೀಂದ್ರ ಪದರವನ್ನು ಮುಂದಿಟ್ಟರು. ಎಚ್.ಎಸ್ ಪೂರ್ಣಿಮ ಮತ್ತು ಉಷಾರಿಗೆ ಇದರಿಂದ ತಯಾರಿಸಿದ ಚಹಾ ಸೇವನೆ ಬಹುದಿನಗಳಿಂದ ಪರಿಚಿತ. ಆಗಾಗ್ಗೆ ಮನೆಯಲ್ಲಿ ಮೊಸರು ಹೆಪ್ಪು ಹಾಕಿದ ರೀತಿಯಲ್ಲೇ ಈ ಖರಗೋಷಕ್ ಚಹಾವನ್ನು ಆಗಾಗಿ ಹೆಪ್ಪು ಹಾಕಿ ತಯಾರಿಸಿಟ್ಟು ಕೊಂಡಿರುತ್ತಾರೆ. ಪಾನೀಯದಷ್ಟೇ ಇದರ ಔಷಧೀಯ ಗುಣಗಳು ಮುಖ್ಯ ಎಂಬುದು ಇವರು ಇದರ ಬಳಕೆಗೆ ಕಾರಣ.

ಖರಗೋಸಕ್ ರಷ್ಯಾ ದೇಶದ ಒಂದು ಸ್ಥಳ. ಅಲ್ಲಿ ಈ ರೀತಿಯ ಚಹಾ ಪಾನೀಯ ಕುಡಿದ ಜನರು ಆರೋಗ್ಯ ಶಾಲಿಗಳೂ, ಸದೃಢರೂ, ಧೀರ್ಘಾಯುಶಿಗಳೂ ಆಗಿದ್ದರು ಎಂದು ಪ್ರತೀತಿ. ಹಾಗಾಗಿ ಈ ಹೆಸರು.

ಈ ಪಾನೀಯದ ಬಗ್ಗೆ, ನಮ್ಮ ಕೃಷಿ ವಿ.ವಿ.ಯಲ್ಲಿ ಸೂಕ್ಷ್ಮ ಜೀವಿಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ। ಎಸ್.ವಿ. ಹೆಗ್ಗಡೆಯವರು ಸಂಶೋಧನೆ ನಡೆಸಿ, ಇದರ ತಯಾರಿಕೆ, ಉಪಯೋಗದ ಬಗ್ಗೆ ಪ್ರಚಾರ ಮಾಡುತ್ತಿದ್ದು, ಇವರಿಂದ ತಾವು ತಯಾರಿರುವ ಈ ಶಿಲೀಂದ್ರ ಪದರದ ಪರೀಕ್ಷೆ ನಡೆಸುವಂತೆ ಮೈಸೂರಿನ ಈ ಸಹೋದರಿಯರು ಕೋರಿದರು. ಈ ಹೊಸ ನಮೂನೆಯ ಚಹಾಕ್ಕೆ ಡಾ. ಹೆಗ್ಡೆಗವರು 'ಸಂಜೀವಿನಿ ಚಹಾ ಅಥವಾ Bio-T' ಎಂದು ನಾಮಕರಣ ಮಾಡಿದ್ದು, ಇದನ್ನು ಸರಳವಾಗಿ ತಯಾರಿಸುವ ಕ್ರಮವನ್ನು ಈ ರೀತಿ ವಿವರಿಸುತ್ತಾರೆ.

ಮೊದಲಿಗೆ ಸಾಮಾನ್ಯ ಚಹಾ ತಯಾರಿಸುವ ರೀತಿಯಲ್ಲೇ ಚಹಾ ಡಿಕಾಕ್ಷನ್ ತಯಾರಿಸಿ, ಅದಕ್ಕೆ ಅಗತ್ಯವಿದ್ದಷ್ಟು ಸಕ್ಕರೆ ಹಾಕಿ ತಣಿಸಬೇಕು. ನಂತರ, ಕ್ಯಾಂಡಿಡಾ ಜಾತಿಗೆ ಸೇರಿದ ಒಂದು ಶಿಲೀಂದ್ರ ಮತ್ತು ಅಸಿಟೋಬ್ಯಾಕ್ಟರ್ ಜಾತಿಗೆ ಸೇರಿದ ಏಕಾಣುಗಳ ಒಂದು ಮಿಶ್ರಣವನ್ನು, ಮೊಸರು ಹೆಪ್ಪು ಹಾಕುವ ರೀತಿಯಲ್ಲಿ, ಈ ಚಹಾದ ಡಿಕಾಕ್ಷನ್‌ಗೆ ಸೇರಿಸಿ, ಪಾತ್ರೆಯ ಬಾಯಿಯನ್ನು ಮುಚ್ಚಿ, ನಾಲ್ಕು ದಿನಗಳು ಹುಳಿ ಬರಿಸಲು ಇಡಬೇಕು. ಮೊದಲಿಗೆ ಈ ಏಕಾಣು ಮಿಶ್ರಣವನ್ನು ಹೊರಗಡೆಯಿಂದ ತರಬೇಕು. ನಂತರ ಮೊಸರಿನ ಹೆಪ್ಪಿನ ರೀತಿಯಲ್ಲೇ ಹುಳಿ ಬರಿಸಿದ ಚಹಾ ಮಿಶ್ರಣವನ್ನು ಶೇಖರಿಸಿಟ್ಟುಕೊಂಡು ಸತತವಾಗಿ ಬಳಸಬಹುದು. ಈ ಹುಳಿ ಬರಿಸಿದ ದ್ರಾವಣವನ್ನು ಬಿಸಿ ಮಾಡಿ, ಆರಿಸಿ, ಬಾಟಲ್‌ಗಳಲ್ಲಿ ತುಂಬಿ, ರೆಫ್ರಿಜರೇಟರ್‌ನಲ್ಲಿ ಕೂಡಿಟ್ಟರೆ, ಸುಮಧುರ ಹುಳಿ-ಸಿಹಿ ಮಿಶ್ರಿತ ಈ ಸಂಜೀವಿನಿ ಚಹಾ ಯಾವಾಗಬೇಕೆನಿಸದರೂ ಲಭ್ಯ ಎಂದು ಡಾ. ಹೆಗ್ಡೆಯವರು ಒಂದು ಕಪ್ಪಿನಲ್ಲಿ ಹಾಕಿ ನನ್ನ ಮುಂದಿಟ್ಟರು. ಅಳುಕುತ್ತಾ ತುಟಿಗೇರಿಸಿದಾಗ, ಹಿಂದೆ ಇಂಗ್ಲೇಂಡ್‌ನಲ್ಲಿದ್ದಾಗ ಕಪ್ಪು ಚಹಾ (ಹಾಲಿಲ್ಲದ) ವನ್ನು ಅನಿವಾರ್ಯವಾಗಿ ಕೆಲವೊಮ್ಮೆ ಕುಡಿಯುವಂತಾಗಿದ್ದು, ಸ್ವಲ್ಪ ಅದರಂತೇ ರುಚಿ, ಜೊತೆಗೆ, ಹುಳಿ, ಸಿಹಿ, ಮಜ್ಜಿಗೆ ಹೆಪ್ಪಿನ ರುಚಿ ಎಲ್ಲಾ ಕೂಡಿ, ತಣ್ಣನೆಯ ಅನನ್ಯ ಸ್ವಾದ ಅನುಭವಿಸುವಂತಾಗಿ, ಹಾಕಿದ ಅರ್ಧ ಕಪ್ಪು ಸಂಜೀವಿನಿ ಚಹಾ ಅರ್ಧ ನಿಮಿಷದಲ್ಲಿ ಮಾಯವಾಗಿತ್ತು.

ಸಂಜೀವಿನ ಚಹ ಅಗ್ಗದಲ್ಲಿ, ಸುಲಭವಾಗಿ ತಯಾರಿಸ ಬಹುದಾಗಿರುವ, ಚೇತೋಹಾರಿ, ಸ್ವಾದಿಷ್ಟ ಪೇಯ ಎನ್ನುವುದರಲ್ಲಿ ನನ್ನ ಅನುಮಾನ ಪೂರ್ತಿ ಹೋಗುವಂತಾಯ್ತು. ಇದಕ್ಕೆ ಹಾಲಿನ ಖರ್ಚಿಲ್ಲ, ಇದರಲ್ಲಿ ವಿನೇಗಾರ್, ಆಲ್ಕೋಹಾಲ್, ನೈಸರ್ಗಿಕ ಅನಿಲಾಮ್ಲ ಗಳಿರುವುದರಿಂದ ಕೆಡುವ ಸಾಧ್ಯತೆ ಇಲ್ಲ. ಜೊತೆಗೆ ಇದರಲ್ಲಿ ಆರೋಗ್ಯ ಕಾಪಾಡಲು ಅಗತ್ಯವಾದ ಹಲವು ಅಮಿನೋ ಆಮ್ಲಗಳೂ, ಜೀವಸತ್ವಗಳೂ, ಸಸಾರಜನಕಗಳೂ ಇರುವುದರಿಂದ, ಅನೇಕ ರೋಗಗಳಿಗೆ ಔಷಧಿ ಎಂಬುದು ಹಿಂದಿನಿಂದಲೂ ಪ್ರತೀಕ. ಇದರ ಬಗ್ಗೆ ಅರಿವು ಮೂಡಿಸಿದ ಮೈಸೂರು ಸಹೋದರಿಯರಿಗೆ ಮತ್ತು ಡಾ. ಹೆಗ್ಡೆಯವರಿಗೆ ಮನದಲ್ಲೇ ಕೃತಜ್ಞತೆ ಸಲ್ಲಿಸಿ, ನಮ್ಮ ಮನೆಯಲ್ಲೇ ತಯಾರಿಸುವಂತೆ ಪತ್ನಿಯನ್ನು ಪುಸಲಾಯಿಸಲು ಮುಂದಾದೆ.

ವ್ಯವಸ್ಥಿತಗೊಳ್ಳುತ್ತಿರುವ ಹಿತ್ತಲ ಗಿಡ!

ಪುನರ್‌ಪುಳಿ ಉದ್ದಿಮೆ

– ಪ್ರಕಾಶ್ ಕಮ್ಮರಡಿ

'ಪುನರ್ ಪುಳಿ' ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಮನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಹುಳಿ ಆಹಾರ ಅಥವಾ ಪಾನೀಯ ಪದಾರ್ಥ. ಈ ಬಾರಿ ದಕ್ಷಿಣ ಕನ್ನಡ ಜಿಲ್ಲೆಗೆ ಹೋದಾಗ, ಹಲವು ಮನೆಯಲ್ಲಿ ಇದರ ತಂಪು ಪಾನೀಯ, ಇದರಿಂದ ತಯಾರಿಸಿದ ತಿಳಿ ಸಾರು ಕಂಡುಬಂದಿತು. ಹಿರಿಯರಾದ ಅಯ್ಯನ ಕಟ್ಟೆ ಗೋವಿಂದಯ್ಯನವರಂತೂ, ತಮ್ಮ ಆಯುರ್ವೇದ ದಾಖಲು ಪುಸ್ತಕಗಳಿಂದ ಇದರ ಬಗ್ಗೆ ವಿವರವನ್ನೇ ನೀಡಿದರು. Garcinia Indica ಎಂಬ ವೈಜ್ಞಾನಿಕ ಹೆಸರಿನ ಈ ಮರದ ಹಣ್ಣಿನ ರಸ ಮೂಲತಃ 'ಪಿತ್ತ ಹರ' ಔಷಧಿಗುಣಕ್ಕೆ ಹೆಸರುವಾಸಿ. ಇದರ ಔಷಧಿಯ ಗುಣದ ಬಗ್ಗೆ 1898ರಷ್ಟು ಹಿಂದೆಯೇ, ಲಂಡನ್‌ನ ಒಂದು ಔಷಧಿಗಳ ಬಗೆಗಿನ ಪತ್ರಿಕೆಯಲ್ಲಿ ವಿವರಣೆ ನೀಡಿರುವುದನ್ನು ಗೋವಿಂದಯ್ಯ ಜ್ಞಾಪಿಸಿದರು. ನೀರು ಅಧಿಕ ಬೇಡದ, ಕಲ್ಲುಮಣ್ಣು, ಬರುಡು ಪ್ರದೇಶಗಳಲ್ಲೂ ಬೆಳೆಯಬಹುದಾಗಿರುವ, ಮಧ್ಯಮ ಗಾತ್ರದ, ಗಟ್ಟಿಮರ ಈ ಪುನರ್‌ಪುಳಿ. ಇದನ್ನು ಯಾರಾದರೂ ಮುತುವರ್ಜಿ ವಹಿಸಿ ಬೆಳೆಸುವರೇ ಎಂದು ವಿಚಾರಿಸಿದಾಗ, ಹಕ್ಕಿ, ಮಂಗಗಳ ಮೂಲಕ ಪ್ರಸರಣ ಹೊಂದಿ, ಮನೆ ಹತ್ತಿರ ಬೆಳೆದರೆ ಸ್ವಲ್ಪ ಗಮನ ವಹಿಸಿ ನೋಡುತ್ತಾರೇ ಹೊರತು, ಯಾರೂ ಪ್ರಯತ್ನಿಸಿ ಇದನ್ನು ಬೆಳೆಸುವುದು ಅಪರೂಪ ಎಂದು ಎಲ್ಲರು ತಿಳಿಸಿದರು.. ಆದರೆ ಪುತ್ತೂರಿನ ಸಮೀಪದ ಉತ್ಸಾಹಿ ತರುಣ ರೈತರಾದ ಸೇಡಿಯಾಪು ಜನಾರ್ಧನ ಭಟ್ ಇದರ ಒಂದು ಉದ್ಯಮಕ್ಕೆ ಕೈ ಹಾಕಿರುವರು ಎಂದು ಕೇಳಿದಾಗ ಅಲ್ಲಿಗೆ ತಕ್ಷಣಾ ಧಾವಿಸಿದೆವು. ಜನಾರ್ಧನ ಭಟ್ಟರು ತಮ್ಮ ನಾಲ್ಕು ಎಕರೆ ಬರಡು ಭೂಮಿಯಲ್ಲಿ ಎರಡೂವರೆ ಅಡಿ ಅಂತರದಲ್ಲಿ ಎರಡೂವರೆ ಅಡಿ ಹೊಂಡದಲ್ಲಿ, ಎಕರೆಗೆ 200ರಂತೆ ಸಸಿ ನೀಡಿ, ಈ ಪುನರ್‌ಪುಳಿ ಕೃಷಿ ಪ್ರಾರಂಭಿಸಿರುವರು. ಇದಕ್ಕೆ ಸಸಿಯನ್ನು ತಮ್ಮ ಮನೆ ಹತ್ತಿರದ ಒಂದು ಅಧಿಕ ಫಲ ಬರುವ ಮರದ ಬೀಜವನ್ನು ಆಯ್ಕೆ ಮಾಡಿಕೊಂಡಿರುವರು. ಇದಕ್ಕೆ ಪ್ರೇರಣೆ ಬಂದಿದ್ದು, ಅವರು ಈಗಾಗಲೇ ಸ್ಥಾಪಿಸಿರುವ ಈ ಪುನರ್‌ಪುಳಿ ಪಾನೀಯದ ಉದ್ದಿಮೆಯಿಂದ.

ತಮ್ಮ ಮನೆಯಲ್ಲೇ ಸುಮಾರು ಒಂದೂವರೆ ಲಕ್ಷದಷ್ಟು ಬಂಡವಾಳ ತೊಡಗಿಸಿ, ಈ ಪುನರ್‌ಪುಳಿ ಹಣ್ಣಿನ ರಸ ಹಿಂಡಿ, ಬಾಟಲ್ ಮಾಡಿ ಸಾಗಿಸುವ ಉತ್ಪಾದನಾ ಘಟಕವೊಂದನ್ನು ಜನಾರ್ಧನಭಟ್ಟರು ಈಗಾಗಲೇ ಸ್ಥಾಪಿಸಿರುವರು. ಒಂದು ದಿನಕ್ಕೆ 500 ಬಾಟಲ್ ರಸಹಿಂಡಿ, ತುಂಬಿಡುವ ಸಾಮರ್ಥ್ಯವರಿಗೆ ಇದು ಇದಕ್ಕೆ ಬೇಕಾಗುವಷ್ಟು ಪುನರ್‌ಪುಳಿ ಅಥವಾ 'ಬಿರಿಂಡ' ಹಣ್ಣುಗಳು ಸಿಗುವುದೇ ಕಷ್ಟವಾಗಿದೆ. ಸಧ್ಯಕ್ಕೆ ಉತ್ತರ ಕನ್ನಡ, ಮಲೆನಾಡಿನ ಇತರ ಪ್ರದೇಶಗಳಿಂದ ಒಂದು ಕೆ.ಜಿ.ಗೆ ಹತ್ತು ರೂ.ಗಳವರೆಗೆ ನೀಡಿ ಸಂಗ್ರಹಿಸುತ್ತಿರುವರು. 750 ಮಿಲಿ ಮೀಟರ್ ಬಾಟಲ್‌ಗೆ ರೂ. 30ರಂತೆ ಬೆಲೆ ಕಟ್ಟಿ ಇವರು ಮಾರಾಟ ಮಾಡುತ್ತಿದ್ದು, ಇದಕ್ಕೆ ಈಗ ದಕ್ಷಿಣ ಕನ್ನಡದಾದ್ಯಂತ ಬೇಡಿಕೆ ಬರುತ್ತಿದೆ. ಅಷ್ಟೇ ಅಲ್ಲದೆ, ಇತ್ತೀಚೆಗೆ ಬಾಂಬೆಯಿಂದಲು ಕರೆ ಬಂದಿರುವುದಾಗಿ ತಿಳಿಸಿರುತ್ತಾರೆ. ಈ ಬೇಡಿಕೆಗೆ ಸರಿಯಾಗಿ ಉತ್ಪಾದನೆ ಮಾಡಲು, ಕಚ್ಚಾಸಾಮಗ್ರಿ ಕೊರತೆ ಬಂದಿರುವುದರಿಂದಲೇ ಸ್ವತಃ ವ್ಯವಸ್ಥಿತವಾಗಿ ಬೆಳೆಯಲು ಮುಂದಾಗಿರುವರು. ಬೇರೆಯವರು ಇದೇ ರೀತಿ ಬೆಳೆದರೆ, 7-8 ವರ್ಷದ ಮರ ಒಂದರಲ್ಲಿ ಕನಿಷ್ಠ 100 ಕೆ.ಜಿ. ಗಳಷ್ಟು ಹಣ್ಣು ಬರುವುದರಿಂದ ಅದೊಂದು ಲಾಭದಾಯಕ ಬೆಳೆ ಆಗಬಹುದೆಂಬುದು ಇವರ ಆಶಯ. ಯಾವುದೇ ರಸಾಯನಿಕ ಬಳಸದೇ ಬರಿದೆ ಹಣ್ಣಿನ ರಸ, ಸಕ್ಕರೆ, ನೀರು ಹಾಕಿ, ಮಿಶ್ರಣ ಮಾಡಿ, ವರ್ಷಗಟ್ಟಲೆ ಕೂಡಿಡಬಹುದಾದ ಈ ಪಾನೀಯ ತಯಾರಿಸುವ ಕಲೆಯನ್ನು ಇವರು ಕಲಿತಿದ್ದು, ತಮ್ಮ ತಂದೆಯಿಂದ. ಇವರ ತಂದೆ 30 ವರ್ಷಗಳಷ್ಟು ಹಿಂದೆ ಮಾಡಿ, ಹೊಗೆ ಕಟ್ಟಿಸಿ, ಅಟ್ಟದಲ್ಲಿ ಕೂಡಿಟ್ಟಿರುವ ಬಾಟಲ್ ಒಂದನ್ನು ತಂದು, ಎದುರಿಗೆ ಬಾಯಿ ತೆಗೆದು, ರಸವನ್ನು ಒಂದು ಲೋಟದಲ್ಲಿ ಹಾಕಿ ಮುಂದಿಟ್ಟರು. ಸ್ವಲ್ಪವೂ ರುಚಿ ಗುಣದಲ್ಲಿ ಹಾಳು ಕಂಡುಬರದ ಅದರ ಸ್ವಾದವನ್ನು ನೋಡಿ ಆಶ್ಚರ್ಯಗೊಂಡೆ. ಇದರ ಈ ಉದ್ದಿಮೆ ಬೆಳೆದು, ಬೆಂಗಳೂರಿನಂತಹ ಪ್ರದೇಶಗಳಲ್ಲೂ ಇದರ ಮಹತ್ವ ಅರಿತ ನಮ್ಮಂತಹವರಿಗೆ ಸದಾ ಈ ಪುನರ್ ಪುಳಿ ದೊರೆಯುವಂತಾಗಲೆಂದು ಹಾರೈಸಿ, ಅವರಿಂದ ಒಂದು ಬಾಟಲ್ ಸ್ಯಾಂಪಲ್ ಪಡೆದು ಹೊರಟೆ.

ಉಪ್ಪು ತಿಂದ ಮೇಲೆ ನೀರು ಕಟ್ಟಬೇಕು

– ಆನಂದ ಆ.ಶ್ರೀ.

ಮನೆಯ ಹಿಂದಣದ ತಿಪ್ಪೆಯ ರಾಶಿ, ನೆಲದ ಮೇಲೆ ಹರಡಿಕೊಂಡು ಬೆಳೆಯುವ ತರಕಾರಿ ಬಳ್ಳಿಗಳ ಪ್ರಿಯವಾದ ತಾಣ. ಬೆಚ್ಚನೆಯ ಪರಿಸರವನ್ನೊದಗಿಸುವ ತಿಪ್ಪೆಯ ರಾಶಿ ಬಳ್ಳಿಗಳ ಆಹಾರಕ್ಕೂ ಮೂಲ.

ಮಳೆಗಾಲದ ನೀರನ್ನು ಹೆಚ್ಚಾಗಿ ಸಾವಯವ ಪದಾರ್ಥಗಳು ಹೀರುತ್ತವೆ. ಇದಕ್ಕೆ ಗೊಬ್ಬರದ ಗುಂಡಿಗಳು ಅಪವಾದವೇನಲ್ಲ. ಇದೇ ನೀರು ಬಳ್ಳಿಗಳೊಳಗೆ ಹಬ್ಬುತ್ತದೆ. ಇದರಿಂದಾಗಿ ಬಳ್ಳಿ ಸೊಂಪಾಗಿ ಬೆಳೆಯುತ್ತದೆಯೇ ವಿನಃ ಹೂ-ಕಾಯಿ ಕಚ್ಚದು ಎನ್ನುತ್ತಾರೆ ಗ್ರಾಮಸ್ಥರು.

ಇದಕ್ಕೊಂದು ಉಪಾಯ ಮಲೆನಾಡಿನ ಕೃಷಿಕರೊಬ್ಬರ ಸ್ವಾನುಭವದಲ್ಲಿದೆ. ಬೇಗ ಓದಿ ನೆಲದಿಂದ ಎರಡಡಿ ಮೇಲೆ ಬಳ್ಳಿಯ ಕಾಂಡದಲ್ಲಿ '1' ಅಂಕೆ ಬರೆದಂತೆ ಬ್ಲೇಡ್‌ನಿಂದ ಗಾಯ ಮಾಡಬೇಕಂತೆ. ನಂತರ ಆ ಗಾಯದಲ್ಲಿ ಒಂದು ಸಣ್ಣ ಉಪ್ಪಿನ ಹರಳನ್ನು ತುರುಕಿ ದಾರ ಕಟ್ಟಿದರ ಮುಗಿಯಿತು. 'ಕಾಯಿ ಸಾಕು' ಎಂದು ನೀವು ಹೇಳಿದಾಗಲೇ ಬಳ್ಳಿ ಮೌನವಾಗೋದು.

ಹಿತ್ತಲಗಿಡದ ಬಳಗ ಬೆಳಸಿ

ಹಿತ್ತಲ ಗಿಡದ ಬಳಗಕ್ಕೆ ಸೇರಲು ಬಯಸುವವರು ತಮ್ಮ ವೃತ್ತಿ, ಹೊಲ, ಬೆಳೆ ಹವ್ಯಾಸ ಇತ್ಯಾದಿಗಳನ್ನು ವಿವರಗಳನ್ನು ಬರೆದು ಕಳಿಸಬೇಕಾಗಿ ವಿನಂತಿ.

ಹಿತ್ತಲಗಿಡಕ್ಕೆ ಕೃಷಿ, ಗ್ರಾಮೀಣ ಕಸುಬು, ಪರಿಸರ, ಪಶು, ಪಕ್ಷಿಗಳ ಕುರಿತಾದ ಜನಪದ ಕಥೆ, ನಂಬಿಕೆ, ಲಾವಣಿ, ಗಾದೆಗಳನ್ನು ಕಳುಹಿಸಬಹುದು.

– ಸಂ.

ಪಂಚಮ ದನಿಗಳು :

ಕುರ್ದೆ ಮತ್ತು ರಾಮಿಯ ಚತುರತೆ

ಟಿ.ಎನ್. ಪ್ರಕಾಶ್ ಕಮ್ಮರಡಿ

ಕುರ್ದೆ : ಆತನ ನಿಜವಾದ ಹೆಸರು ಹಿರಿಯ, ಆದರೆ ಕರೆಯುವುದು ಕುರ್ದೆ ಎಂದು. ದಲಿತ ಜನಾಂಗದಲ್ಲಿ ಜನಿಸಿದ ಈತನ ಕಸುಬು ದನಕಾಯುವುದು. ಆದೂ, ಮದುವೆ, ಮುಂಜಿ, ರೋಗ ರುಜಿನಗಳ ಹಿನ್ನೆಲೆಯಲ್ಲಿ ಋಣಬಾಧೆಗೆ ಬಿದ್ದು, ಮಲೆನಾಡಿನ ಪ್ರಾಂತ್ಯದಲ್ಲಿ ದನಕಾಯುವ ಈ ಕಸುಬಿಗೆ ಹಿರಿಯನಂತಹವರು ಸಿಕ್ಕಿಬೀಳುವುದು ಸಾಮಾನ್ಯ. ಆದರೆ ಕಸುಬಿನಲ್ಲಿ ಇಂತಹವರು ಸಾಧಿಸಿದ ವೃತ್ತಿಪರತೆ, ಜಾಣ್ಮೆ, ಸಾಮರ್ಥ್ಯತೆ ಅಸಾಧ್ಯವಾಗಿತ್ತು.

ಬೆಳಗಿನ ಜಾವದಲ್ಲಿ ಆತ ಕೊಳಲೂದುತ್ತಾ ಬಂದೊಡನೆ ಸುತ್ತಮುತ್ತಲಿನ ಮನೆಗಳಿಗೆ ದನ ಬಿಡಲು ಸಿದ್ದರಾಗುವಂತೆ ಸೂಚನೆ. ಹಾಗೇ ದನಗಳೂ ಕಿವಿನಿಗುರಿಸಿ ಹಾಯಾಗಿ ಕಾಲಾಡಿಸಲು ಹೋಗಲು ತಯಾರಾಗುತ್ತಿದ್ದವು. "ಹಾ, ಹೂಂ, ಬ್ಯಾ ಬ್ಯಾ, ಹೆ ಹೇ" ಎಂದು ಹೆದರಿಸಿ, ಗದರಿಸುತ್ತಾ ಆತ ನಾಲ್ಕಾರು ಮನೆಗಳ ದನಗಳನ್ನು ಒಟ್ಟು ಸೇರಿಸಿ, ಹೊರಗಿನ ಹಾಡ್ಯಕ್ಕೆ ತೆಗೆದುಕೊಂಡು ಹೋಗುತ್ತಿದ್ದ. ಬೇರೆಯವರಿಗೆ ತಂಟೆಮಾಡುವ ದನ, ಎತ್ತನ್ನು ಒಂಟಿಯಾಗಿ ನಿಯಂತ್ರಿಸಲೂ ಕಷ್ಟವಾಗಿರುವಾಗ, ಇವನೆದುರು ಅವೆಲ್ಲಾ ತುಟಿಪಿಟಕ್ಕೆನ್ನದೆ, ಮಂದಿಯಲ್ಲಿ ಒಂದಾಗಿ, ಶಿಸ್ತಿನ ಸಿಪಾಯಿಗಳಂತೆ ಚಲಿಸುತ್ತಿದ್ದವು. ದೂರದ ನಾರಾಯಣ ಹಾಡ್ಯ ಶೃಂಗೇರುಪಾಲು ಹಾಡ್ಯಗಳಿಗೆ ಕಾಲಾಡಿಸಿಕೊಂಡು, ಅಲ್ಲಲ್ಲಿ ಮೇವು ಹುಡುಕುತ್ತಾ ಹೋಗುವುದೇ ಒಂದೆರೆಡು ಗಂಟೆಗಳು. ಏರುಬಿಸಿಲಿನ ಸಮಯಕ್ಕೆ ಒಂದು ನಿರ್ದಿಷ್ಟ ಜಾಗಕ್ಕೆ ತಲುಪಿ, ಅಲ್ಲೇ ಎಲ್ಲಾ ಒಂದೆಡೆ ಸುತ್ತಾಡುತ್ತಾ ಮೇಯುವಂತೆ ಹಿಂಡಿಗೆ 'ಅಗ್ಚು, ಪಗ್ಚು' ಎಂದು ಸೂಚನೆ ನೀಡಿ, ತಾನು ಒಂದು ಮರದಡಿ ವಿಶ್ರಾಂತಿ ಪಡೆದು, ಕೆಲಕಾಲ ತನ್ನ ಕೊಳಲು ತೆಗೆದು ನುಡಿಸುತ್ತಿದ್ದ. ದನಗಳು ಆಲಿಸುತ್ತಾ ಮೇಯುತ್ತಿದ್ದವು ಇಲ್ಲವೇ ಮೆಲುಕು ಹಾಕುತ್ತಾ ವಿಶ್ರಮಿಸುತ್ತಿದ್ದವು. ನಂತರ ಸಂಜೆವರೆಗೆ, ತುಂಟ ದನಗಳಿಗೆ ಅವುಗಳ ಓಡಾಟದ ಸುಳಿವು ಹಿಡಿಯಲು ಬಿದಿರಿನ ಗಂಟೆಯನ್ನೊ, ಇನ್ನೂ ಹಠಮಾರಿ ದನಗಳಿಗೆ, ಭಾರದ, ಕುತ್ತಿಗೆಗೆ ನೇತುಹಾಕುವ ಕುಂತೆಯನ್ನೊ, ಮನೆಯೊಡೆಯನ ಮಕ್ಕಳಿಗೆ ಬೈನೆ ಮರದ ಬುಗರಿಯನ್ನೋ ಅಥವಾ ಬಿದಿರಿನ ಕೊಳಲನ್ನೊ ಮಾಡುತ್ತಾ, ಆಗಾಗ್ಗೆ ದನಗಳ ಹಿಂಡನ್ನು ನಿಯಂತ್ರಿಸಿ, ಒಂದೆಡೆ ಕಲೆ ಹಾಕಿರುವಂತೆ ಸೂಚನೆ ನೀಡುತ್ತಾ ಅಥವಾ ಜಾಗ ಬದಲಿಸುತ್ತಾ, ಹಾಗೇ ತುಂಟ ಹಠಮಾರಿ ದನಗಳ ಮೇಲೆ ವಿಶೇಷ ನಿಗಾ. ಹತೋಟಿ ತೋರಿಸುತ್ತಾ ಕಾಲ ಕಳೆಯುತ್ತಿದ್ದ. ಹಾಗೇ, ದನಗಳಿಗೆ ಬರುವ ಗಳಲು ಬಾವು, ಕೆಚ್ಚಲು ಗಾಯ, ಕಾಲು ಒಡೆತ ಇತ್ಯಾದಿ ಸಣ್ಣಪುಟ್ಟ ಕಾಯಿಲೆಗಳಿಗೆ ಕಾಡಿನ ಎಲೆ, ಬೇರು, ದಂಟುಗಳಿಂದ ನಾಟಿ ಔಷಧಿ ತಯಾರಿಸಿ, ಆರೈಕೆ ಕೂಡ ಮಾಡುತ್ತಿದ್ದ. ಸಂಜೆಯಾದೊಡನೆ, ಅಷ್ಟೇ ಶಿಸ್ತಿನಿಂದ ದನಗಳನ್ನು ಆಯಾ ದೊಡ್ಡಿಗಳಿಗೇ ತಂದು, ಕಟ್ಟುತ್ತಿದ್ದ, ಮನೆಯೊಡೆಯರು ಕೊಟ್ಟ ಊಟ, ಕಾಳು ಪಡೆದು ಹಿಂತಿರುಗುತ್ತಿದ್ದ.

ಈಗ ಕುರ್ದೆಗೆ ವರ್ಷ ದಾಟಿರ-ಬಹುದು. ಜನಸಂಖ್ಯಾ ಒತ್ತಡ ಮತ್ತು ಆಕ್ರಮ ಒತ್ತುವರಿಗಳ ಪರಿಣಾಮವಾಗಿ ಇಂದು ದನಗಳು ಕಾಲಾಡಿಸಲು, ಮೇವಾಡಿಸಲು, ಗೋಮಾಳ-ಗಳೀ ಹಳ್ಳಿಗಳಲ್ಲಿ ಕಾಣೆಯಾಗಿವೆ. ಹಾಗೇ, ಅಧಿಕ ಹಾಲು, ಕಡಿಮೆ ಜಾಗದ ಕಾರಣ ನಾಟಿ ಹಸುಗಳ ಬದಲು ಕೆಲವೇ ಕೆಲವು ಎಮ್ಮೆ ಅಥವಾ ಸೇಂದಿ ಹಸುಗಳನ್ನು ಸಾಕಲು ಮಲೆನಾಡ ರೈತರು ಪ್ರಾರಂಭಿಸಿರುವರು. ಹಾಗಾಗಿ ದನಕಾಯುವ ಕಸುಬು ಕಣ್ಮರೆಯಾಗುತ್ತಿದೆ. ಕುರ್ದೆಗೆ ಕೆಲಸ, ಆತನ ವೃತ್ತಿಪರತೆ, ಕುಶಲತೆಗಳೂ ಕಾಣೆಯಾಗುತ್ತಿವೆ. ಜೊತೆಗೆ ಪಟ್ಟಿಗೊಬ್ಬರದ ಪ್ರಮಾಣ ನಮ್ಮ ಕೃಷಿಗೆ ಕಡಿಮೆಯಾಗುತ್ತಿದೆ. ಮತ್ತು ದನಸಾಕುವ ವೆಚ್ಚ, ಕ್ರಮಗಳೂ ಏರುತ್ತಿವೆ. ಮಿಗಿಲಾಗಿ ಕುರ್ದೆಯ ಕೊಳಲು ನಾದಕ್ಕೆ ಹೆಜ್ಜೆಹಾಕುತ್ತಾ, ಮನಸಾರೆ ಕಾಲಾಡಿಸಿ, ಮೆಂದು ಹಿಂತಿರುಗುತ್ತಾ, ಆ ನಾಟಿ ದನಗಳಲ್ಲಿ ಕಂಡು ಬರುತ್ತಿದ್ದ, ಹೊರಹೊಮ್ಮುತ್ತಿದ್ದ ಆ ಪಶುತೃಪ್ತಿಯ, ಗೋವಿನ ಹಾಡಿನ ಸ್ಥಾನದಲ್ಲಿ ಕಟ್ಟು ಹಾಕಿ, ಕೃತಕ ಆಹಾರ ತಿಂದು, ಅಸಹನೆಯಿಂದ ನಿಟ್ಟುಸಿರಿಡುತ್ತಿರುವ ಸೀಮೆದನಗಳ ಸುತ್ತ ಪಾಶವಿ ಪ್ರವೃತ್ತಿ ಎದ್ದು ಕಾಣುವಂತಾಗಿದೆ.

ರಾಮಿ : ಈಕೆ ಹಿರಿಯನ ಹೆಂಡತಿ. ದಿನನಿತ್ಯ ದಣಿಗಳ ಮನೆಗೆ ಮುಂಜಾನೆ ಬಂದು ಹೊರಸುತ್ತ ಗುಡಿಸಿ, ಸಾರಿಸಿ, ದನಕರುಗಳಿಗೆ ತಿನ್ನಲು ಮುರ, ಹುಲ್ಲು ತಂದು, ಕೊಟ್ಟಿಗೆಗೆ ಸೊಪ್ಪು, ದರಗು ಹಾಕುವುದು ಈಕೆಯ ದಿನಚರಿ. ಆದರೆ ಈಕೆಯ ಪ್ರವೀಣತೆ ಬತ್ತಕುಟ್ಟಿ, ಅಕ್ಕಿ ಅವಲಕ್ಕಿ, ತಯಾರಿಸುವುದು. ಅದಕ್ಕಿಂತ ಮುಖ್ಯವಾಗಿ ಅವುಗಳ ನೆಲ್ಲು, ಬತ್ತ, ಕಾಳು, ಜೊಳ್ಳು, ಪೊಳ್ಳು ಬೇರ್ಪಡಿಸುವ ಅದ್ಭುತ ಕಾರ್ಯ ಅಥವಾ ಚತುರತೆ ಎನ್ನಬಹುದು. ಅಕ್ಕಿಗೇರುವ ಮರವನ್ನು ಹಿಡಿದು, ಆಡಿಸುತ್ತಾ, ಅಕ್ಕಿ, ನೆಲ್ಲು, ಹೊಟ್ಟುಗಳನ್ನು ಬೇರ್ಪಡಿಸುವ ಆಕೆಯ ಕಲೆ ನೋಡುತ್ತಾ ಕೂರುವಂತಿತ್ತು. ಆಗಾಗ್ಗೆ ಏಕಾಂತದಲ್ಲಿ ಲಾವಣಿ ಹಾಡನ್ನು ಗೊಣಗುತ್ತಾ, ಸಂಜೆಯ ಹೊತ್ತಿಗೆ ಉದ್ದಾ ಗಿಡ್ಡ ಒಂದು ಪಲ್ಲ (ನೂರು ಸೇರು ಅಥವಾ ಸುಮಾರು ಒಂದು ಕ್ವಿಂಟಾಲ್) ಬತ್ತ ಕುಟ್ಟಿ, ಅಕ್ಕಿ ಮಾಡಿ, ಸ್ವಚ್ಛ ಮಾಡಿಡುವುದು, ಯಾವುದೇ ಮಾನದಂಡದಿಂದ ಅಳೆದರೂ ಈಕೆಯ ಸಾಮರ್ಥ್ಯತೆಗೆ ಸರಿಸಾಟಿ ಇಲ್ಲದಂತಾಗಿತ್ತು. ಅದೇ ರೀತಿ ಬತ್ತ ನೆನೆಸಿ, ಬೇಯಿಸಿ, ಕುಟ್ಟಿ ಅವಲಕ್ಕಿ ಮಾಡುವಾಗ ಈಕೆ ಒನಕೆ ಹಿಡಿದು ಬಡಿಯುವ ಶೈಲಿ, ಚತುರತೆ ಮತ್ತು ಸಾಮರ್ಥ್ಯತೆಗೆ ಕೂಡ ಬೇರೆಲ್ಲೂ ಸಮವಿರದಾಗಿತ್ತು.

ಈಗ ರಾಮಿಗೂ ವಯಸ್ಸಾಗಿದೆ. ಜೊತೆಗೆ ರೈಸ್ ಮಿಲ್, ಅವಲಕ್ಕಿ ಮಿಲ್‌ಗಳು ಬಂದು ಈಕೆಯ ಅವಶ್ಯಕತೆ ಕೂಡ ಕಡಿಮೆಯಾಗಿದೆ. ಹಾಗೇ ಕುಟ್ಟಿದ ಬತ್ತದ, ಅವಲಕ್ಕಿಯ ಆ ರುಚಿ, ಪೌಷ್ಟಿಕದಾಯಕತೆಗಳು ಕೂಡ ಮಲೆನಾಡಿನ ಜನಕ್ಕೆ ಇಂದು ಇಲ್ಲದಾಗಿದೆ.


ಇಡಿಚಲು :

ಕಾಡು ಪ್ರಾಣಿಗಳ ಹಾವಳಿ ತಡೆಯಲು ಒಂದು ದೇಶೀಯ ಸಾಧನ

ಎಸ್. ಇ. ತ್ಯಾಗರಾಜ್ ಮತ್ತು ಎ.ಕೆ. ಚಕ್ರವರ್ತಿ

ಮಲೆನಾಡಿನಲ್ಲಿ ಇಲಿ, ಹೆಗ್ಗಣ, ಅಳಿಲು ಇತ್ಯಾದಿಗಳಿಂದ ಬೆಳೆಗಳಿಗೆ ಹಾನಿಯು ಸರ್ವೇಸಾಮಾನ್ಯ. ಇಲ್ಲಿಯ ರೈತರು ಈ ಪ್ರಾಣಿಗಳನ್ನು ನಾಶಪಡಿಸಲು ಕಂಡುಕೊಂಡ ಸಾಧನವೊಂದರ ಕುರಿತು ವಿವರ ಇಲ್ಲಿದೆ.

ದಂಶಕಗಳು ಬಹಳ ಸೂಕ್ಷ್ಮ ಮತ್ತು ಸಂಶಯಾಸ್ಪದ ಪ್ರಾಣಿಗಳಾಗಿದ್ದರಿಂದ ಇವುಗಳ ನಿಯಂತ್ರಣ ಮಾಡುವಲ್ಲಿ ಅವುಗಳ ಕಾರ್ಯಚಟುವಟಿಕೆಗಳು, ಓಡಾಡುವ ರೀತಿ, ಆಹಾರ ಬಯಸುವ ರೀತಿಯ ಬಗ್ಗೆ ಸ್ವಲ್ಪ ಗಮನ ಹರಿಸಿ ಮಾಹಿತಿ ಸಂಗ್ರಹಿಸಿದಲ್ಲಿ ಸ್ಥಳೀಯ ಸಾಧನಗಳು ಹೆಚ್ಚಿನ ಫಲಕಾರಿಯಾಗುತ್ತವೆ. ಈ ಎಲ್ಲಾ ದೃಷ್ಟಿಯಲ್ಲಿ ಮಲೆನಾಡು ಪ್ರದೇಶದಲ್ಲಿ ಬಳಸುತ್ತಿರುವ ಇಡಿಚಲು (Snap Trap) ಪ್ರಮುಖವಾದುದು ಎಂದರೆ ತಪ್ಪಾಗಲಾರದು. 'ಇಡಿಚಲು ಮರದ ಹಲಗೆಗಳ ತುಂಡುಗಳ ಒಂದು ಜೋಡಣೆ. ಕೆಳಭಾಗದ ಹಲಗೆಯ ಮಧ್ಯದಲ್ಲಿ ತೆಳುವಾದ ನಾಲಿಗೆಯಂತಹ, ಹಲಗೆಗಳಿಂತ ಸ್ವಲ್ಪ ಗಿಡ್ಡವಾದ ಜೋಡಣೆ ಇರುತ್ತದೆ. ಈ ನಾಲಿಗೆಯಂತಹ ಜೋಡಣೆಯ ಪಟ್ಟಿಯ ತುದಿಯಲ್ಲಿ ಸಿಡಿ ಸಿಕ್ಕಿಸಲು ಸಹಾಯವಾಗುವಂತೆ ಸ್ವಲ್ಪ ಕತ್ತರಿಸಲ್ಪಟ್ಟಿರುತ್ತದೆ. ಹಲಗೆಗಳ ಜೋಡಣೆಯ ಮುಂಭಾಗದಲ್ಲಿ '-' ಆಕಾರದ ಕಡ್ಡಿಗಳನ್ನು ಮಾಡಿ ಅದರ ಮಧ್ಯದಲ್ಲಿ



ಗೋಣಿದಾರವನ್ನು ಬಿಟ್ಟು ಅದಕ್ಕೆ ಸಿಡಿಕಡ್ಡಿಯನ್ನು ಕಟ್ಟಿರುತ್ತದೆ. ಈ ಸಿಡಿಕಡ್ಡಿಯ ಮೇಲ್ಭಾಗ ಮಂಡಾಗಿದ್ದು ಕೆಳತುದಿಯು ಚೂಪಾಗಿರುತ್ತದೆ. ಈ ಸಿಡಿಕಡ್ಡಿಯ ಮೇಲ್ಭಾಗವನ್ನು ಹಲಗೆಯ ಮುಂಭಾಗಕ್ಕೆ ಸೇರಿಸಿ ಮೇಲೇರಿಸಿ ಇನ್ನೊಂದು ತುದಿಯನ್ನು ನಾಲಿಗೆ ಪಟ್ಟಿಯಂತೆ ಕತ್ತರಿಸಿಕೊಂಡು ಮಾಡಿದ ಜಾಗಕ್ಕೆ ಬಹಳ ಸೂಕ್ಷ್ಮವಾಗಿ ಸಿಕ್ಕಿಸಿರುತ್ತದೆ. ಹಲಗೆಯ ಮೇಲ್ಭಾಗಕ್ಕೆ ಕಲ್ಲುಗಳನ್ನಿಟ್ಟು ಭಾರ ಹಾಕಿರುತ್ತದೆ. ಈ ಇಡಿಚಲು ಆಧಾರದ ಮೇಲೆ ತಯಾರಿಸಿದ ವಿನ್ಯಾಸವನ್ನು ಮೇಲೆ ಕೊಡಲಾಗಿದೆ. ಸಿಡಿ ಕಡ್ಡಿ ಜೋಡಿಸಿದ ನಾಲಿಗೆಯಂತಹ ಭಾಗದ ಮೇಲೆ ಆಕರ್ಷಕ ಆಹಾರಗಳಾದ ಬತ್ತ, ಬಾಳೆಹಣ್ಣಿನ ತುಂಡು, ವಡೆ, ಹುರಿದ ತೆಂಗಿನಕಾಯಿ ಯಾ ಮೀನಿನ ತುಂಡುಗಳನ್ನು ಇಡುತ್ತಾರೆ. ಆಕರ್ಷಿತ ಪ್ರಾಣಿ (ಇಲಿ, ಅಳಿಲು, ಇನ್ನಿತರ ಚಿಕ್ಕ ಪ್ರಾಣಿಗಳು) ತಿಂಡಿ ತಿನ್ನುವ ಅವಸರದಲ್ಲಿ ಒಳಗೆ ನುಗ್ಗಿದಾಗ ನಾಲಿಗೆಯಂತ ಕಡ್ಡಿ ಸಿಡಿದು ಭಾರವಾದ ಹಲಗೆ ಮೇಲೆ ಬಿದ್ದು ಜಜ್ಜಿ ಸತ್ತು ಹೋಗುತ್ತದೆ. ಹೀಗೆ ಸತ್ತ ಪ್ರಾಣಿಗಳನ್ನು ತೆಗೆದು, ಸ್ವಚ್ಛಗೊಳಿಸಿ, ಹೊಸದಾದ ಆಹಾರ ಇಟ್ಟು ಆಕರ್ಷಿಸುತ್ತಾರೆ. ದಂಶಕಗಳು ಬಹಳ ಸೂಕ್ಷ್ಮವಾಗಿ ಓಡಾಡುವ ಪ್ರಾಣಿಗಳಾದುದರಿಂದ ಇದೊಂದು ನಿರಂತರ ಕೈಗೊಳ್ಳಬೇಕಾದ ವ್ಯವಸ್ಥೆ ಆಗಿರುತ್ತದೆ. ಮತ್ತು ಇಲ್ಲಿ ಯಾವುದೇ ರೀತಿಯ ವಿಷವಸ್ತುಗಳನ್ನು ಬಳಸದಿರುವುದು ಪರಿಸರಸಂರಕ್ಷಣೆಯ ದೃಷ್ಟಿಯಿಂದ ಬಹಳ ಮುಖ್ಯವಾಗಿರುತ್ತದೆ.

ಕಡಿಮೆ ವೆಚ್ಚದ, ಸುಲಭ, ಸರಳ ಸಾಧನವಾದ ಇದು ನಮ್ಮ ಗುರಿಗಿಂತ ಹೊರತಾದ ಪ್ರಾಣಿಗಳಿಗೆ, ಮನುಷ್ಯರಿಗೆ ತೊಂದರೆ ಮಾಡುವುದಿಲ್ಲ. ಆದರೆ ಮಳೆಗಾಲದಲ್ಲಿ ಇದರ ಉಪಯೋಗವಾಗಲಾರದು. ಮಳೆ ಹನಿಯಿಂದ ಮಣ್ಣಿನ ಕಣಗಳು ಹಾರಿ ಮರದ ಹಲಗೆಯ ಹಾಗೂ ನಾಲಿಗೆಯಂತಹ ಸಿಡಿಯ ಮೇಲೆ ಕುಳಿತು ಉಪಯೋಗಕ್ಕೆ ಬಾರದಂತೆ ಮಾಡುತ್ತವೆ. ಹಾಗೆಯೇ ಸಿಡಿಕಡ್ಡಿಯನ್ನು ಕಟ್ಟಿದ ಗೋಣಿದಾರ ತೇವಾಂಶ ಹೀರಿಕೊಂಡು ತುಂಡಾಗಿ ಕೆಳಗೆ ಬೀಳುತ್ತವೆ.

ಮರಕ್ಕೆ ಗೆದ್ದಲುಗಳ ಕಾಟ ಹಾಗೂ ಆಕರ್ಷಕ ಆಹಾರಗಳಿಗೆ ಇರುವೆ ಕಾಟ ವಿರಬಹುದು. ಈ ಎಲ್ಲಾ ಅಡಚಣೆಗಳಿದ್ದರೂ ಪರಿಸರ ಸಂರಕ್ಷಣೆ ಹಾಗೂ ಸಮತೋಲನದ ದೃಷ್ಟಿಯಿಂದ ಇದೊಂದು ಮುಖ್ಯವಾದ ದೇಶೀಸಾಧನವಾಗಿರುತ್ತದೆ.

ಉರುವಲು ಉಳಿಸುವ 'ಗ್ರಾಮೀಣ ಕುಕ್ಕರ್'

- ಶಿವರಾಜ್ ಕೆ.

ಮಲೆನಾಡಿನಲ್ಲಿ ಅಡಿಗೆಗೆ, ಸ್ನಾನಕ್ಕೆ ನೀರು ಕಾಯಿಸಲು ಉರುವಲಿನ ಬಳಕೆ ಸಾಮಾನ್ಯ. ಅಡುಗೆ ಅನಿಲ (ಎಲ್.ಪಿ.ಜಿ.) ಸಿಕ್ಕರೂ ಕೂಡಾ ಗ್ಯಾಸ್ ಹಂಡೆಯ ಸಾಗಣೆ ವೆಚ್ಚದ ಹಾದಿ. ಮಳೆಗಾಲದಲ್ಲಂತೂ ವಿದ್ಯುತ್ ವಾರವಿಡೀ ಕೈಕೊಡುವುದು ಅಪರೂಪವೇನಲ್ಲ. ಈ ದೃಷ್ಟಿಯಲ್ಲಿ ಉರುವಲು ಉಳಿಸುವ ಗ್ರಾಮೀಣ ಕುಕ್ಕರ್ ಭರವಸೆದಾಯಕವೇ ಹೌದು.

ಸುಮಾರು ಒಂದಿಂಚು ವ್ಯಾಸದ, ಅರ್ಧ ಅಡಿ ಉದ್ದದ 4-5 ಗಟ್ಟಿ ಸೌದೆ ಇದ್ದರೆ ಉರಿ ಉರಿಸಲು ಸಾಕು. ಪುನಃ ಇಷ್ಟೇ ತುಂಡುಗಳಿದ್ದರೆ ಒಂದು ಗಂಟೆ ಕಾಲ ಶಾಖ ಇರಿಸಿಕೊಳ್ಳಬಹುದು. 70-75 ನಿಮಿಷಗಳಲ್ಲಿ ಐದಾರು ಮಂದಿಯ ಕುಟುಂಬಕ್ಕೆ ಬೇಕಾದ ಕುಚ್ಚಿಲಕ್ಕಿ ಅನ್ನ, ಪದಾರ್ಥ ಮಾಡಬಹುದು ಎನ್ನುತ್ತಾರೆ ಕೃಷಿಕ - ಸಂಶೋಧಕ ದೇವಪ್ಪ ಶ್ಯಾಮ ಭಟ್.

ಒಲೆ ಉರಿಸಿ 8-10 ನಿಮಿಷಗಳಲ್ಲಿ ಉಗಿ ಹೊರ ಬರತೊಡಗುತ್ತದೆ. ಆಗ ಬೇಯಿಸಬೇಕಾದ ವಸ್ತುವನ್ನು ಪಾತ್ರೆಯಲ್ಲಿ ಹಾಕಿ ಕುಕ್ಕರ್‌ನ ಮೇಲಿರಿಸಬೇಕು. ಹೊರಬರುವ ಉಗಿಯನ್ನು ಪೈಪಿನ ಮೂಲಕ ಇನ್ನೊಂದು ಪಾತ್ರೆಗೆ ತಲುಪಿಸಿ ಆ ಪಾತ್ರೆಯಲ್ಲೂ ಅಡಿಗೆ ಮಾಡಬಹುದು. 1 ಕಿ.ಗ್ರಾಂ. ಕುಚ್ಚಲಕ್ಕಿ ಬೇಯಲು 70-75 ನಿಮಿಷ, ಬೆಳ್ತಿಗೆ ಅಕ್ಕಿಗೆ 15-20 ನಿಮಿಷ, ತರಕಾರಿಗಳಿಗೆ 15 ರಿಂದ 25 ನಿಮಿಷ ಸಾಕು ಎಂಬುದು ಶ್ರೀ ಭಟ್‌ರವರ ಅಭಿಪ್ರಾಯ.

ಉಗಿ ಕೊಳವೆಯನ್ನು ಒಂದು ಬಕೆಟ್ ತಣ್ಣೀರಿನಲ್ಲಿ ಮುಳುಗಿಸಿಟ್ಟರೆ 10- 15 ನಿಮಿಷಗಳಲ್ಲಿ ಸ್ನಾನಕ್ಕೆ ಬೇಕಾದ ಕುದಿಯುವ ಬಿಸಿ ನೀರು ಸಿದ್ಧವಾಗುತ್ತದೆ. ಉಗಿಯನ್ನು ನಿಯಂತ್ರಿಸಲು ಕವಾಟ ಹಾಗೂ ಅಳೆಯಲು ಮೀಟರ್ ಸಹ ಇದೆ.

ಕುಕ್ಕರಿನ ಮೇಲೆ ಸ್ಟೀಲ್ ಶೀಟ್ ಹಾಕಿದರೆ ಹಾಟ್‌ಪ್ಲೇಟಿನಂತೆ ಬಳಸಬಹುದು. ಮಸಿಯ ಸಮಸ್ಯೆಯಿಲ್ಲ ಎನ್ನುವ ಭಟ್‌ರವರು ಉಗಿ ಕೊಳವೆಯನ್ನು ಇಡ್ಲಿ ಪಾತ್ರೆಗೆ ಜೋಡಿಸಿ ಇದೇ ಉಗಿಯಿಂದ 15 ನಿಮಿಷಗಳಲ್ಲಿ ಇಡ್ಲಿ ಬೇಯುವಂತಹ ಇಡ್ಲಿ ಪಾತ್ರೆಯೊಂದನ್ನು ಸಿದ್ಧಪಡಿಸಿದ್ದಾರೆ. ಸಾಂಪ್ರದಾಯಿಕ ಒಲೆಯಲ್ಲಿ 30 ಕಿ.ಗ್ರಾಂ. ಕಟ್ಟಿಗೆ ಬೇಕಾಗುವಲ್ಲಿ ಇದಕ್ಕಾದರೆ 10 ಕಿ.ಗ್ರಾಂ. ಮಾತ್ರ ಸಾಕು ಎಂಬುದು ಈ ಕುಕ್ಕರ್‌ನ ಬಳಕೆದಾರರೊಬ್ಬರ ಅನುಭವ.

ಎರಡು ಪಾತ್ರೆಗಳಲ್ಲಿ ಅಡುಗೆ ಮಾಡಲು ಅವಕಾಶ ನೀಡುವ ಈ ಕುಕ್ಕರ್ ಗ್ರಾಮಾಂತರ ಪ್ರದೇಶಗಳಲ್ಲಿ ಗಣನೀಯ ಪ್ರಮಾಣದ ಕಟ್ಟಿಗೆ ಉಳಿಸಬಲ್ಲದು. ಇದರಿಂದ ಕಾಡಿನ ಅವಲಂಬನೆಯನ್ನು ಸಹ ಕಡಿಮೆ ಮಾಡಬಹುದಲ್ಲವೇ?

ವಿಳಾಸ: ದೇವಪ್ಪ (ಸಿ.ಪಿ.ಸಿ.ಆರ್.ಐ. ಬಳಿ) ಅಂಚೆ: ವಿಟ್ಲ, ದಕ್ಷಿಣ ಕನ್ನಡ ಜಿಲ್ಲೆ : 574243.

ಪುಸ್ತಕಾವಲೋಕನ

ಚಾವುಂಡರಾಯನ — ಲೋಕೋಪಕಾರ

ಪ್ರೊ. ಹೆಚ್.ಕೆ. ನರಸಿಂಹೇಗೌಡ

ಲೋಕೋಪಕಾರ ಗ್ರಂಥದ ಕರ್ತೃ ಚಾವುಂಡರಾಯ. ಈತನ ಕಾಲ ಕ್ರಿ.ಶ. 1025 ಎಂದು ನಿರ್ಧರಿಸಲಾಗಿದೆ. ಈ ಕವಿ 10ನೇ ಶತಮಾನದ ವೀರಪರಂಪರೆಗೆ ಸೇರಿದ ಕವಿ ಹಾಗೂ ಕಲಿಯಾಗಿ ಮೆರದ ಚಾವುಂಡರಾಯನಿಗಿಂತ ಭಿನ್ನನು.

ಲೋಕೋಪಕಾರ ಗ್ರಂಥವು ಮದ್ರಾಸ್ ಸರ್ಕಾರದ ಪ್ರಾಚ್ಯ ಗ್ರಂಥಾಲಯದಿಂದ 1950ರಲ್ಲಿ ಪ್ರಕಟಿತವಾದ ಸಂಪಾದಿತ ಕೃತಿ. ಈ ಗ್ರಂಥವನ್ನು ನಾಲ್ಕು ಹಸ್ತಲಿಖಿತ ಪ್ರತಿಗಳನ್ನು ಆಧರಿಸಿ ಸಂಪಾದಿಸಲಾಗಿದೆ. ಈ ನಾಲ್ಕು ಹಸ್ತಪ್ರತಿಗಳಲ್ಲಿ ಒಲೆಗರಿ ಪ್ರತಿ ಹಾಗೂ ಕಾಗದದ ಪ್ರತಿಗಳೆರಡೂ ಸೇರಿಕೊಂಡಿವೆ. ಈ ಗ್ರಂಥದಲ್ಲಿ ಹೇಳಿರುವ ವಿಷಯಗಳೆಲ್ಲವೂ ಜನಗಳಿಗೆ ಸಂಬಂಧಿಸಿರುವುದರಿಂದ ಹಾಗೂ 'ಲೋಕ' ಶಬ್ದಕ್ಕೆ 'ಜನ' ಎಂಬ ಅರ್ಥವಿರುವುದರಿಂದ ಜನಗಳಿಗೆ ಉಪಕಾರವನ್ನು ಮಾಡುವುದು ಎಂಬ ಈ ಗ್ರಂಥದ ಹೆಸರಿನ ಶಬ್ದಾರ್ಥವಾಗುತ್ತದೆ ಹಾಗೂ ಮನುಷ್ಯನಿಗೆ ಜೀವಿತಕಾಲದಲ್ಲಿ ಅವಶ್ಯವಾಗಿರುವ ವಿದ್ಯೆಗಳೆಲ್ಲ ಈ ಗ್ರಂಥದಲ್ಲಿ ಅಡಗಿರುವುದರಿಂದ ಈ ಹೆಸರು ಸಂಪೂರ್ಣವಾಗಿ ಅನ್ವರ್ಥವಾಗಿದೆ ಎಂದು ಗ್ರಂಥ ಕರ್ತೃವೇ ಪೀಠಿಕೆಯ 23ನೇ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಈ ಗ್ರಂಥದಲ್ಲಿ 12 ಅಧಿಕಾರಗಳಿವೆ. ಕಂದಗಳೇ ಹೆಚ್ಚಾಗಿರುವ ಈ ಗ್ರಂಥದಲ್ಲಿ ಅಲ್ಲಲ್ಲಿ ಹಲವು ಜಾತಿಯ ವೃತ್ತಗಳೂ, ಕೆಲವು ಅಲಂಕಾರಗಳೂ, ಕಾವ್ಯಶೈಲಿಯ ಪ್ರೌಢವಾಕ್ಯಗಳೂ ಕಂಡುಬರುತ್ತವೆ. ಈ ಗ್ರಂಥದಲ್ಲಿರುವ 12 ಅಧಿಕಾರಗಳಲ್ಲಿ 6ನೇ ಅಧಿಕಾರ 'ವೃಕ್ಷಾಯುರ್ವೇದ'ಕ್ಕೆ ಸಂಬಂಧಿಸಿರುವುದರಿಂದ ಆ ಅಧಿಕಾರದ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ವೃಕ್ಷಾಯುರ್ವೇದ ಎಂಬ ಈ 6ನೇ ಅಧಿಕಾರದಲ್ಲಿ 60 ಕಂದ ಹಾಗೂ ವೃತ್ತಗಳಿದ್ದು ಮಾನವನು ಆಹಾರಕ್ಕಾಗಿ ಹಾಗೂ ಅಲಂಕಾರಕ್ಕಾಗಿ ಅತ್ಯಾವಶ್ಯಕವಾದ ಫಲ, ಪುಷ್ಪ, ವೃಕ್ಷಲತೆಗಳನ್ನು ಬೆಳೆಸುವ ಮತ್ತು ಹೆಚ್ಚು ಫಲಬಿಡಲು ಅನುಸರಿಸುವ ಕ್ರಮಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ವ್ಯವಸಾಯ, ಸಸ್ಯಗಳನ್ನು ಒಗ್ಗಿಸಿಕೊಂಡು ಅವುಗಳನ್ನು ಬೆಳೆಸುವ ಕಲೆ. ಸಸ್ಯಗಳನ್ನು ಬೆಳೆಸಬೇಕಾದರೆ ಭೂಮಿಯ ಬಗ್ಗೆ ವ್ಯವಸಾಯಗಾರನಿಗೆ ಅರಿವಿರುವುದು ಅತ್ಯಗತ್ಯ. ಸಸ್ಯ ಜೀವನವನ್ನು ಅರಿತು ಅವುಗಳನ್ನು ಲಾಭದಾಯಕವಾಗಿ ಬೆಳೆಸಿಕೊಳ್ಳುವ ಕಲೆಯು ನಮ್ಮ ಪ್ರಾಚೀನ ಜನರಿಗೆ ಋಗ್ವೇದ ಕಾಲದಿಂದಲೂ ಗೊತ್ತಿತ್ತು.

ಈ ಪ್ರಕರಣದ ಮೊದಲಲ್ಲಿ ಶ್ರವಣಾದಿ ನಕ್ಷತ್ರಗಳು ಧಾನ್ಯ, ಬೀಜ ಬಿತ್ತಲು ಶುಭಗಳೆಂದೂ, ಬಿತ್ತುವುದಕ್ಕೆ ಮೊದಲ ನೆಲವನ್ನು ಶೋಧಿಸಿ ಹದಮಾಡಿ ಗೊಬ್ಬರ ಹಾಕಬೇಕೆಂದೂ, ಮರಗಳನ್ನು ನಾಟುವಾಗ ತೆಗೆವ ಗುಳಿಗಳ ಅಂತರ 2 4 ಮೊಳಗಳಿದ್ದು ಆ ಗುಳಿಗಳಿಗೆ ಗೊಬ್ಬರವನ್ನು ಹಾಕಬೇಕೆಂದೂ ತಿಳಿಸಲಾಗಿದೆ. ಅಲ್ಲದೆ ತಾನಾಗಿಯೇ ಮರದಿಂದ ಬಿದ್ದ ಹಣ್ಣಿನ ಬೀಜಕ್ಕೆ ಸಗಣಿಯನ್ನು ಬಳಿದು 5 ದಿವಸ ಒಣಗಿಸಿ, ಬಳಿಕ 7 ದಿವಸಗಳ ಕಾಲ ಹಾಲಿನಲ್ಲಿ ನೆನೆಸಿ, ಒಣಗಿಸಿ, ವಾಯುವಿಳಂಗ (Embelia ribes) ಮರದ ಧೂಪವನ್ನು ಕೊಟ್ಟು ಶುಭದಿನಗಳಲ್ಲಿ ಕುಳಿಗಳಲ್ಲಿ ಬಿತ್ತಬೇಕೆಂದು ತಿಳಿಸಲಾಗಿದೆ. ಅದಕ್ಕೆ ತಕ್ಕ ಕಾಲದಲ್ಲಿ ನೀರನ್ನು ಎತ್ತಿ ಹುಯ್ಯಬೇಕು. ಹೀಗೆ ನೆಟ್ಟ ಗಿಡಗಳಿಗೆ ಆಲಿಕಲ್ಲು, ಸಿಡಿಲು, ಮಂಜು ಇತ್ಯಾದಿಗಳ ಬಾಧೆ ಇಲ್ಲದಂತೆ ಮಾಡಲು ಮೊಸರನ್ನ, ಬೂದಿ ಇವುಗಳನ್ನು ಹಾಕಬೇಕು. ಇದಲ್ಲದೆ ಕೆಲವು ಕೀಟನಾಶಕ ಹಾಗೂ ರೋಗನಿವಾರಣಾ ಕ್ರಮಗಳನ್ನು ಸಹ ಇಲ್ಲಿ ಸೂಚಿಸಲಾಗಿದೆ. ಇಂಗು, ಬಜೆ ಮೊದಲಾದ ಪದಾರ್ಥಗಳನ್ನು ಅರೆದು ಗಿಡಗಳಿಗೆ ಬಳಿದರೆ ಹುಳುಗಳು ಸಾಯುತ್ತವೆ. ವಿಳಂಗಾದಿಗಳನ್ನು ಧೂಪಿಸಲು ಗಿಡಗಳು ರೋಗಕ್ಕೆ ಗುರಿಯಾಗದೆ ಬೆಳೆಯುತ್ತವೆ. ಗಿಡಮರಗಳ ಕುಡಿ ಮುರಿಯುವುದು, ಮುರುಟಿಕೊಳ್ಳುವುದು, ನರುಕಿಹೋಗುವುದು ಮೊದಲಾದ ರೋಗಗಳ ನಿವಾರಣಕ್ಕೆ ಆ ರೋಗವಿರುವ ಸ್ಥಳವನ್ನು ಕತ್ತರಿಸಿ ತೆಗೆದು ಬಿಸಿಯ ತುಪ್ಪ, ವಿಳಂಗ, ಕರಿಯ ಮಣ್ಣು ಇವನ್ನು ತುಂಬಿ ಬಳಿಯಬೇಕೆಂದು ಪ್ರಸ್ತಾಪಿಸಲಾಗಿದೆ.

ಜವೆ (ಬಾರ್ಲಿ) ಹೆಸರು ಮೊದಲಾದವನ್ನು ಹಾಲಲ್ಲಿ ಬೇಯಿಸಿ ಮರದ ಬುಡದಲ್ಲಿ ತಳಿದರೆ ಅವು ಎಲ್ಲಾ ಋತುಗಳಲ್ಲಿಯೂ ಫಲಪುಷ್ಪಗಳಿಂದ ರಂಜಿಸುತ್ತದೆ. ಅನಂತರ ಮರಗಿಡಗಳಿಗೆ ಸಂಸ್ಕಾರ ಮಾಡುವುದರಿಂದ ಫಲ ಬಿಡುವುದರಲ್ಲಿ ಕೆಲವು ಆಶ್ಚರ್ಯಕರವಾದ ವಿಷಯಗಳನ್ನು ತಿಳಿಸಿದ್ದಾನೆ.

ಒಂದು ಮರದ ಕೊಂಬೆಯನ್ನಾಗಲಿ, ಬೀಜವನ್ನಾಗಲಿ ಸಮನಾಗಿ ಸೀಳಿ ಸೇರಿಸಿ ಕಟ್ಟಿ ತುಪ್ಪ, ಜೇನು ಇವನ್ನು ಚೆನ್ನಾಗಿ ಬಳಿದು ನೆಟ್ಟರೆ ಒಂದೇ ಬುಡದ ಮರದಲ್ಲಿ ಎರಡು ಬಗೆಯ ಹಣ್ಣುಗಳು ಬಿಡುವುವು. ಕಮಲ, ಕುಮುದಾ, ಮೊದಲಾದ ಜಲಪುಷ್ಪಲತೆಗಳ ಗಡ್ಡೆಗಳನ್ನು ಕತ್ತರಿಸಿ ಸೇರಿಸಿ ಆಜ್ಯ ಮಧುಗಳನ್ನು ತೊಡೆದು ಹರಿಣಾಮಿಷ ಜಲವನ್ನು ಬುಡಕ್ಕೆ ತಳಿದರೆ ಒಂದೇ ಬಳ್ಳಿಯಲ್ಲಿ ಕಮಲ, ಕುಮುದ, ನೀಲೋತ್ಪಲ ಪುಷ್ಪಗಳು ಬಿಡುವುವು ಎಂದು ಹೇಳಿ ಬಳಿಕ ಮಾವಿನ ಮರವು ಇಮ್ಮಾವಿನ ಮರವಾಗುವ ಸಂಸ್ಕಾರ, ಬಾಳೆಯ ದಪ್ಪನಾದ ಹಣ್ಣನ್ನು ಬಿಡುವ ಸಂಸ್ಕಾರ, ಬಾಳೆಯ ಹಣ್ಣು ದಾಳಿಂಬೆ ಹಣ್ಣಿನಂತಾಗುವ ಸಂಸ್ಕಾರ, ಹಲಸಿನ ಮರ ಬುಡದಿಂದ ತುದಿಯವರೆಗೂ ಹಣ್ಣು ಬಿಡುವ ಸಂಸ್ಕಾರ, ತೆಂಗು ತುಂಬಾ ಫಲಬಿಡುವಂತೆ ಮಾಡುವ ಸಂಸ್ಕಾರ, ಈಳೆ (ಕಿತ್ತಳೆ ಹೇರಿಳೆ) ಯು ಹೆಚ್ಚು ಫಲಬಿಡುವಂತೆ ಮಾಡುವುದು, ಮಾದಲದ ಗಿಡ, ದಾಳಿಂಬೆ ಗಿಡ ಇವುಗಳಲ್ಲಿ ಚೆನ್ನಾಗಿ ದಪ್ಪನಾದ ಹೆಚ್ಚುಕಾಯಿಗಳನ್ನು ಬಿಡಿಸುವ ಸಂಸ್ಕಾರ, ಮೊದಲಾದವುಗಳನ್ನು ಹೇಳಿ ಹಣ್ಣುಗಳಲ್ಲಿ ಬೀಜಗಳಿಲ್ಲದಂತೆ ಮಾಡಲು ಮರಗಿಡಗಳ ಬುಡದಲ್ಲಿ ಮಧುಕ, ಮಧುಕಪುಷ್ಪ, ಮಧು, ಸಕ್ಕರೆ, ಕೋಷ್ಠಗಳನ್ನು ಹೂಳಬೇಕು. ಹೀಗೆ ಹೂಳಿದ ಮರಗಳು ಫಲಬಿಟ್ಟರೆ ಆ ಫಲಗಳಲ್ಲಿ ಬೀಜಗಳೇ ಇರುವುದಿಲ್ಲವೆಂದು ತಿಳಿಸಿರುತ್ತಾನೆ.

ಅನಂತರ ಮಲ್ಲಿಗೆ, ಜಾಜಿ, ದಾಸವಾಳ ಇವುಗಳು ಹೆಚ್ಚು ಹೂಬಿಡಲು ಮಾಡಬೇಕಾದ ಸಂಸ್ಕಾರ, ಕೆಟ್ಟ ವಾಸನೆಯ ಹೂಗಳಲ್ಲಿ ಸುವಾಸನೆಯನ್ನು ಹುಟ್ಟಿಸುವುದು, ದ್ರಾಕ್ಷಿ ಬಳ್ಳಿಗಳಲ್ಲಿ ಹೆಚ್ಚು ಫಲಬಿಡುವಂತೆ ಮಾಡುವುದು, ಔಡಲದ ಗಿಡದಲ್ಲಿ ಹಾಗಲಕಾಯಿ ಬಿಡಿಸುವ, ಕುಂಬಳದ ಬಳ್ಳಿಯಲ್ಲಿ ಬದನೆಕಾಯಿ ಬಿಡಿಸುವ, ಒಂದು ಬಳ್ಳಿಯಲ್ಲಿ ಲೋಕವೆಲ್ಲಾ ತೃಪ್ತಿಪಡುವಂತೆ ಫಲಬಿಡಿಸುವ ಹಾಗೂ ಬಳ್ಳಿಗಳು ಯಾವ ಕಾಲದಲ್ಲೂ ಫಲಬಿಡುವಂತೆ ಮಾಡುವುದೇ ಮೊದಲಾದ ಸಂಸ್ಕಾರಗಳನ್ನು ಹೇಳಿ ಈ ವೃಕ್ಷಾಯುರ್ವೇದ ಪ್ರಕರಣಕ್ಕೆ ಅಂತಿಮ ಹಾಡಿದ್ದಾನೆ.

ಮೇಲೆ ಹೇಳಿದ ಎಲ್ಲಾ ಪ್ರಾಚೀನ ಕೃಷಿ ಪದ್ಧತಿಗಳನ್ನು ಆಧುನಿಕ ದೃಷ್ಟಿಯಿಂದ ತೂಗಿ ನೋಡುವುದು ಹಾಗೂ ತುಲನಾತ್ಮಕವಾಗಿ ವಿವೇಚಿಸಿ ಚರ್ಚಿಸುವುದು ಅಗತ್ಯವೆನಿಸುತ್ತದೆ. ●

ಪ್ರತಿಕ್ರಿಯೆ

'ಹಿತ್ತಲಗಿಡ' ಎಂಬ ಹೆಸರು ಅತ್ಯಂತ ಸೂಕ್ತವಾಗಿದೆ. ಹೆಸರನ್ನು ಸೂಚಿಸಿದವರಿಗೆ ವಿಶೇಷ ಅಭಿನಂದನೆಗಳು. ನಗರೀಕರಣ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ರೂಪುಗೊಂಡ 'ಅಭಿವೃದ್ಧಿ' ಮಾದರಿಯ ಮೌಲ್ಯಗಳಡಿಯಲ್ಲಿ ಹೊಸಕಿ ಹೋಗಿರುವ ಜ್ಞಾನ, ವಿವೇಕಗಳನ್ನು ಕಂಡುಕೊಂಡು ಬದಲಾಗಿರುವ ಕಾಲಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವುದು ಪ್ರಯಾಸವೇ ಸರಿ. ಹಸಿರು ಕ್ರಾಂತಿಯ ಮಾದರಿಯೊಂದೇ ವೈಜ್ಞಾನಿಕ ಸತ್ಯ ಎಂದು ಪ್ರಚಾರ ಮಾಡುವ ವಿಶ್ವವಿದ್ಯಾನಿಲಯದ ಆಸರೆಯಲ್ಲಿ 'ಹಿತ್ತಲಗಿಡ' ಅಂಕುರಿಸಿರುವುದು ನಿಮ್ಮ/ನಮ್ಮ(?) ಉಳಿದಿರುವ ವೈಜ್ಞಾನಿಕ ವಿಶ್ಲೇಷಣೆಯ ಕುರುಹಾಗಿದೆ. ಹಿತ್ತಲ ಗಿಡವೆಂಬ ಜ್ಞಾನ ಭಂಡಾರವನ್ನು ಅದನ್ನು ನಂಬಿ ಜೀವಾಧಾರವಾಗಿ ಇಟ್ಟುಕೊಂಡ ಜನರನ್ನು, ವೈಜ್ಞಾನಿಕವೆನಿಸಿಕೊಂಡ ಸಂಸ್ಥೆಗಳೂ, ವಿಶ್ವವಿದ್ಯಾಲಯಗಳೂ ತಾತ್ಸಾರದಿಂದಲೇ ಕಂಡಿವೆ. ಅವರಿಗೆ ಇಷ್ಟು ವರ್ಷ ತಳ್ಳಿಹಾಕಲ್ಪಟ್ಟ ತಮ್ಮ ನಂಬಿಕೆ, ಆಚಾರ ಮತ್ತು ಜ್ಞಾನಗಳಲ್ಲಿ ವಿಶ್ವಾಸ ಮೂಡುವುದರಲ್ಲಿ ಒಂದು ಮುಖ್ಯ ಹೆಜ್ಜೆಯಾಗುತ್ತದೆ. 'ಹಿತ್ತಲ ಗಿಡ'ದ ಅನ್ವೇಷಣೆ, ಸಂಶೋಧನೆಯನ್ನು ಸೂಕ್ತ ನಮ್ರತೆಯಿಂದ ನಡೆಸಿ ಇಂತಹ ಆತ್ಮವಿಶ್ವಾಸದ ಬೆಳವಣಿಗೆಗೆ ವಿಶೇಷ ಗಮನ ಕೊಡುತ್ತೀರಾ ಎಂದು ನಂಬುತ್ತೇನೆ. ಹಳೆಯದೆಲ್ಲಾ ಹೊನ್ನು ಎನ್ನುವ ಹುಸಿ ಪೋಷಣೆಯನ್ನು ಮೀರಿ ಪ್ರಕೃತಿಗೆ ಸ್ನೇಹಮಯವಾಗಿ ಹಾಗೂ ಸಾಮಾಜಿಕ ನ್ಯಾಯದ ತತ್ವಗಳ ಎಡೆಗೆ ನಡೆಯುವಂತೆ ಆಗಲಿ.

ಕೃಪಾ ಕೆ. ಬೆಂಗಳೂರು.

ಪತ್ರಿಕೆ ಚೆನ್ನಾಗಿದೆಯಾದರೂ ಸುಧಾರಣೆ ಬೇಕು. ಮೊದಲೊಂಭತ್ತು ಪುಟಗಳ 'ಸುಸ್ಥಿರ ಕೃಷಿ' ಪ್ರತಿಪಾದನೆ ವಿಷಯವಿದ್ದರೂ ಕೂಡಾ ಒಂದಷ್ಟು ತಾಂತ್ರಿಕ ಚೌಕಟ್ಟಿನ ಲೇಪನ ಹೊಂದಿದ್ದರಿಂದ ಓದುಗನನ್ನು ಹಿಡಿದಿಟ್ಟುಕೊಳ್ಳುವ ಕೊರತೆಯಿದೆ. ನಿರೂಪಣಾ ರೀತಿಯಲ್ಲಿ ಬದಲಾವಣೆ ಬೇಕೆನಿಸುತ್ತದೆ. ಇತರ ಲೇಖನಗಳಲ್ಲಿ ಅನುಸರಿಸಲು ಸಾಧ್ಯವಾಗುವಂತೆ ವಿವರಗಳು, ಸ್ಪಷ್ಟತೆ ಹಾಗೂ ಮೂಲಗಳ ವಿಳಾಸ ಬೇಕು.

ಎಸ್.ಎ. ಕೋರಿ, ಗದಗ

ಕೃಷಿ ಸೇರಿ ಎಲ್ಲಾ ಕ್ಷೇತ್ರದಲ್ಲಿ ನಾವು ಪಾಶ್ಚಾತ್ಯರ ಅಂಧಾನುಕರಣೆ ಮಾಡಿದ್ದರಿಂದ ಸ್ಥಳೀಯ ಅರಿವು, ಆಚರಣೆಗಳು ಕಮರಿದವು. ನಮ್ಮ ಕಾಲ ಬಳಿ ಅನುಭವದ ಜ್ಞಾನದ ಖಣಿ ಇದ್ದರೂ ಅದನ್ನರಿಯದ ನಾವು ಪಾಶ್ಚಾತ್ಯರ ಅನುಭವ, ಜ್ಞಾನದ ಅನುಕರಣೆ ಮಾಡುತ್ತಿದ್ದೇವೆ. ಅದಕ್ಕಾಗಿಯೇ ನಾವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಸುಸ್ಥಿರ ಕೃಷಿಗೆ ಅಗತ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಸಂರಕ್ಷಿಸಿಕೊಂಡು ಬಂದಿರುವ ದಟ್ಟದಾರಿದ್ರ್ಯದಲ್ಲಿರುವ ನಮ್ಮ ಬುಡಕಟ್ಟು ಜನರು, ಗುಡ್ಡಗಾಡು ಜನರು ಮತ್ತು ಇತರರು ವಂಶಪಾರಂಪರಿಯಿಂದ ಬಳಸುತ್ತಿರುವ ಔಷಧಿ ಆಚರಣೆಗಳು ಎಲ್ಲರ ಅರಿವಿಗೆ ಬರಬೇಕು. ಬೆಳಕಿಗೆ ಬರಬೇಕು. ಹಿತ್ತಲ ಗಿಡ ಆ ಗುರಿ ಸಾಧಿಸುವಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತದೆಂದು ಭಾವಿಸುತ್ತೇನೆ. ಸ್ಥಳೀಯ ಜ್ಞಾನ, ತಂತ್ರಜ್ಞಾನ ಹಾಗೂ ರೈತ ಮೂಲದ ಅನ್ವೇಷಣೆಗಳಿಗೆ ಒಂದು ವ್ಯವಸ್ಥಿತ ನೆಲೆ ಒದಗಿಸುವುದು ಕೃಷಿಯಲ್ಲಿ ವಿಶ್ವಾಸ ಹೊಂದಿರುವ ಪ್ರತಿಯೊಬ್ಬರ ನೈತಿಕ ಜವಾಬ್ದಾರಿಯಾಗಿದೆ. 'ಹಿತ್ತಲ ಗಿಡ' ಆ ಜವಾಬ್ದಾರಿ ನಿರ್ವಹಣೆಗೆ ಸದಾ ಪ್ರೇರಣೆ, ಸ್ಫೂರ್ತಿ ನೀಡುತ್ತಿರಲೆಂದು ಹಾರೈಸುತ್ತಾ ಪತ್ರಿಕೆಗೆ ಶುಭ ಕೋರುವ,

ಡಿ.ಆರ್. ಪಾಟೀಲ್, ಹುಲಕೋಟಿ.

'ಹಿತ್ತಲಗಿಡ' ಕೃಷಿ ವಿ.ವಿ. ಆವರಣದಲ್ಲಿ ಹೊಸಗಾಳಿ ಬೀಸಿತೆಂದು ಆಶಿಸುವೆ. ಆದರೆ ಅಂತಹ ಬೆಳವಣಿಗೆ ಆರೋಗ್ಯಕರವಾಗಿರುವಂತೆ ಎಚ್ಚರ ವಹಿಸುವುದು ಅಗತ್ಯ.

ಶಿವರಾಂ ಪೈಲೂರು, ಮಂಗಳೂರು.

ನಮ್ಮ ದೇಸೀ ಜ್ಞಾನವನ್ನು, ಜನಪದ ಮದ್ದಿನ ವಿಶ್ವವನ್ನು - ಮಾಧ್ಯಮದಿಂದ ಬೆಳಕಿಗೆ ಒಡ್ಡುವುದರಿಂದಾಗಿ ಪ್ರಯೋಜನವೂ ಇದೆ, ದೋಷವೂ ಬರಬಹುದು ಎಂದು ಎಚ್ಚರಿಸುವ ಚಿಂತಕರೂ ಇದ್ದಾರೆ. ಬಹುದೇಶೀಯ ಕಂಪನಿಗಳು ಶ್ರೀಸಾಮಾನ್ಯರ ಈ ಸುಲಭಲಭ್ಯ ಪರಿಹಾರಗಳನ್ನು ವ್ಯಾಪಾರದ ಮುಸುಕು ಹಾಕಿ ನಮಗೇ ದುಬಾರಿ ಬೆಲೆಗೆ ಮಾರುವುದು ಮಾತ್ರವಲ್ಲ, ಈ ಜ್ಞಾನ ತಮ್ಮ ಸೊತ್ತೆಂದು ಏಕಸ್ವಾಮ್ಯಗೊಳಿಸುವ ಅಪಾಯವೂ ಇದೆ ಎಂಬ ಎಚ್ಚರಿಕೆ ಗಂಟೆ ಹಿತ್ತಲಗಿಡ ಮೊಳಕೆಯೊಡೆಯುವ ಸಮಯದಲ್ಲಿ ಬಂದಿತು. ನಮ್ಮ ಜನರ ಸುಪ್ತ ಜ್ಞಾನಕ್ಕೆ ಮಾಧ್ಯಮದ ಬೆಳಕು ಹರಿಸಿದ್ದರಿಂದಾಗಿ ಅವರೇ ಈ ಸಂಪತ್ತನ್ನು ಕಳೆದುಕೊಳ್ಳುವಂತಾಗಬಾರದು ಎಂಬುದು ಇದರ ಹಿಂದಿನ ಕಳಕಳಿ. ಇದು ಪ್ರತಿ ಹಂತದಲ್ಲೂ ನೆನಪಲ್ಲುಳಿದರೆ ಸಾಲದು. ರೈತರ ಜ್ಞಾನವನ್ನು ಅವರ ಹೆಸರಲ್ಲೇ ಪೇಟೆಂಟ್ ಮಾಡಿಸುವ ಸರಳ ನಿಯಮಾವಳಿ ಏನಾದರೂ ಬಾರದೆ ಈ ಸಮಯಕ್ಕೆ ಖಾಯಂ ಪರಿಹಾರ ಆಗದು. ಈ ದ್ವಂದ್ವ ಜತೆಯಲ್ಲೇ ಇದ್ದರೂ, ಹಿತ್ತಲ ಗಿಡದ ಚೊಚ್ಚಲ ಸಂಚಿಕೆ ನಮ್ಮ ಮೌಲ್ಯಗಳನ್ನು, ನಮ್ಮ ಚಿಂತನೆಗಳನ್ನು ಮೆಚ್ಚಿಕೊಳ್ಳುವ, ದೇಸೀ ಜ್ಞಾನದಲ್ಲಿ ಆಸಕ್ತಿ ಇರುವವರೆಲ್ಲಾ ಪ್ರೋತ್ಸಾಹಿಸಬೇಕಾದ ಸೃಜನಶೀಲ, ಶ್ರಮಶೀಲ ಯತ್ನ, ಈ ಯತ್ನ ಸುಸ್ಥಿರವಾಗಲಿ ಮಾತ್ರವಲ್ಲ, ನಮ್ಮವರ ಮಾಮೂಲಿನ ಹಿತ್ತಲ ಗಿಡವಾಗದಿರಲಿ.

ಅಡಿಕೆ ಪತ್ರಿಕೆ, ಮಾರ್ಚ್ 1995

ಪತ್ರಿಕೆಯ ಮೊದಲ ಸಂಚಿಕೆಯ ಸ್ವಾರಸ್ಯವನ್ನು ಕಂಡಾಗ ಇದು ವಾರ ಪತ್ರಿಕೆಯಾಗಿದ್ದರೂ ಚೆನ್ನಿರುತ್ತಿತ್ತು ಎನಿಸದಿರದು.

– ಕನ್ನಡ ಪ್ರಭ, ಮಾರ್ಚ್ 5, 1995

ವೈಜ್ಞಾನಿಕತೆಯ ಹೆಸರಿನಲ್ಲಿ ಪಾಶ್ಚಾತ್ಯರು ನಡೆಸುತ್ತಿರುವ ಸಂಸ್ಕೃತಿಗೆ ಮಾರು ಹೋಗಿ ಅಭಿವೃದ್ಧಿಯೆಂಬ ಭ್ರಮೆಗೆ ಸಿಲುಕಿ ನಾವು ನಮ್ಮ ಸಂಸ್ಕೃತಿಯನ್ನೇ ಮರೆಯುತ್ತಿದ್ದೇವೆ. ನಮ್ಮ ಅಪ್ಪಟ ಜ್ಞಾನಭಂಡಾರ ನಿಜಕ್ಕೂ ಮೂಲೆಗುಂಪಾಗುತ್ತಿದೆ. ಆದರೆ ಇಂತಹ ತಿಳುವಳಿಕೆಗಳನ್ನು ಬೆಳಕಿಗೆ ತರುವುದರೊಂದಿಗೆ ದೇಶೀಯ ಕೃಷಿ ಪದ್ಧತಿ, ಆಚಾರ-ವಿಚಾರಗಳನ್ನು ವ್ಯವಸ್ಥಿತವಾಗಿ ಜನಪರಗೊಳಿಸಬಹುದು.

– ಸ್ಪೈಸ್ ಇಂಡಿಯಾ (ಕನ್ನಡ),
ಏಪ್ರಿಲ್ 1995

ತಾವು 'ಹಿತ್ತಲ ಗಿಡ' ಎಂಬ ಸಂಚಿಕೆ-1, ಸಂಪುಟ-1, 1995ರ ಒಂದು ಪ್ರತಿಯನ್ನು ನನಗೆ ಕಳುಹಿದ್ದಕ್ಕಾಗಿ ಧನ್ಯವಾದಗಳು. ಈ ಸಂಚಿಕೆಯ ನಾಟಿ ಪಶು ಸಂಗೋಪನಾ ವಿಧಾನಗಳು ಎಂಬ ಅನುವಾದವನ್ನು ನಾನು ಓದಿರುತ್ತೇನೆ. ಇದರ ಬಗ್ಗೆ ನನ್ನ ಕೆಲವು ಅನಿಸಿಕೆಯನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

1. ದನಗಳ ಹಾಲು ಜ್ವರದ ನಿಯಂತ್ರಣವನ್ನು ವಿವರಿಸುವುದು ಒಂದು ಕಟ್ಟು ಕಥೆಯಂತೆ ಕಾಣುತ್ತದೆ. ಇಂತಹ ಸಲಹೆಗಳು ಪಶುಪಾಲಕರಿಗೆ ಮಾರಕ ವಾಗುವುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಇಂತಹ ನಾಟಿ ಪಶು ಸಂಗೋಪನಾ ವಿಧಾನವನ್ನು ದಯಮಾಡಿ ತಮ್ಮ ಸಂಚಿಕೆಯಲ್ಲಿ ಪ್ರಕಟಿಸಬಾರದೆಂದು ನನ್ನ ಕೋರಿಕೆ.

2. ಕ್ಯಾಸ್ಟ್ರೇಷನ್ ನಂತರ ಸಾಸುವೆ ಎಣ್ಣೆ ಮತ್ತು ಅರಿಶಿನ ಪುಡಿ ಲೇಪಿಸುವುದರಲ್ಲಿ ಯಾವುದೇ ತರದ ಪರಿಣಾಮವಾಗುವುದಿಲ್ಲ, ಇದರ ಸಲಹೆಯು ಸರಿಯಷ್ಟೆ.

3. ಗರ್ಭಧರಿಸಲು ಅಡಿಗೆ ಉಪ್ಪಿನ ಬಳಕೆ - ಇಂತಹ ಸಲಹೆಗೆ ಯಾವುದೇ ರೀತಿಯ ವೈಜ್ಞಾನಿಕವಾದ ವಿವರಗಳು ಇರುವುದಿಲ್ಲ. ಇಂತಹ ಸಲಹೆಯನ್ನು ಉತ್ತಮವೆಂದು ಹೇಳಲಾಗುವುದಿಲ್ಲ.

4. ಕರುಗಳು ಕರುಳಿನಲ್ಲಿಯ ಪರಾವಲಂಬಿಗಳ ನಿಯಂತ್ರಣ - ಮೊಸರು ಅಥವಾ ಮಜ್ಜಿಗೆಯನ್ನು ತಾಮ್ರದ ಪಾತ್ರೆಯಲ್ಲಿ ಇಟ್ಟರೆ ಅದು ತಾಮ್ರದ ಸಲ್ಫೇಟ್ ಉತ್ಪನ್ನವಾಗುತ್ತದೆ. (ಮೈಲುತುತ್ತ) ಪರಾವಲಂಬಿಗಳ ನಿಯಂತ್ರಣಕ್ಕೆ ಕಾರಣವಾಗುತ್ತದೆ. ಆದರೆ ಇದರ ಪ್ರಮಾಣ ಮೀರಿದರೆ ಇದು ವಿಷವಾಗಿ ಕೆಲಸ ಮಾಡುತ್ತದೆ. ಆದುದರಿಂದ ಇಂತಹ ಸಲಹೆಗಳನ್ನು ತಮ್ಮ ಸಂಚಿಕೆಯಲ್ಲಿ ಪ್ರಕಟಿಸಬಾರದು ಎಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶಿಕ್ಷಣ ನಿರ್ದೇಶಕರು (ಪಶುಸಂಗೋಪನೆ),
ಕೃ.ವಿ.ವಿ. ಬೆಂಗಳೂರು.

(ವಿ.ಸೂ.: ಸಂಶೋಧನೆ ನಡೆಸಿ, ವೈಜ್ಞಾನಿಕ ಫಲಿತಾಂಶ ಮತ್ತು ಮಾಹಿತಿಗಳ ಆಧಾರದ ಮೇಲೆ ವಿಜ್ಞಾನಿಗಳು ನಾಟೀ ಮೂಲದ ಈ ವಿಚಾರಗಳ ಬಗ್ಗೆ ಪ್ರತಿಕ್ರಿಯಿಸಿದಲ್ಲಿ ಅದು ಉಪಯುಕ್ತವಾಗುತ್ತದೆ. ಸಂ.)

ಅರಳೀ ಕಟ್ಟೆ - ಗೋಷ್ಠಿ, ಸಂಕಿರಣ ಇತ್ಯಾದಿ.....

ಅಂತರ ರಾಷ್ಟ್ರೀಯ ಸ್ಥಾಯಿ ಕೃಷಿ ಸಂಸ್ಥೆ (International Institute of Sustainable Development)

ತಾ. 30 ಮೇ, 1995ರಂದು ಬೆಂಗಳೂರು ಗಾಂಧೀಭವನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ತೃತೀಯ ಜಗತ್ತಿನ ಒಕ್ಕೂಟ ಈ ಎರಡು ಸಂಘಟನೆಗಳ ನಡುವಿನ ಒಂದು ಒಪ್ಪಂದದ ಫಲವಾಗಿ 'ಅಂತರ ರಾಷ್ಟ್ರೀಯ ಸ್ಥಾಯಿ ಕೃಷಿ ಸಂಸ್ಥೆ' ಅಸ್ತಿತ್ವಕ್ಕೆ ಬಂದಿತು. ರಾಸಾಯನಿಕ ಹೂಡಿಕೆಗಳನ್ನೇ ಮೂಲಾಧಾರವಾಗಿಟ್ಟು ಕೊಂಡಿರುವ 'ಹಸಿರು ಕ್ರಾಂತಿ' ಕೃಷಿ ಪದ್ಧತಿಯ ನ್ಯೂನ್ಯತೆಗಳನ್ನು ಅರಿಯುತ್ತಾ, ಸುಸ್ಥಿರ ಕೃಷಿ ಅಭಿವೃದ್ಧಿಯ ತತ್ವ ಮತ್ತು ಅಭ್ಯಾಸಗಳನ್ನು ಕರ್ನಾಟಕದ ರೈತ ಜನಾಂಗದಲ್ಲಿ ಗಟ್ಟಿ ಮಾಡುವುದೇ ಈ ಸಂಸ್ಥೆಯ ಮೂಲ ಉದ್ದೇಶ ವಾಗಿರುತ್ತದೆ. ಜೊತೆಗೆ, ಆಹಾರದ ಭದ್ರತೆ, ಸಾಮಾಜಿಕ ನ್ಯಾಯ ಮತ್ತು ಸುಸ್ಥಿರ ಅಭಿವೃದ್ಧಿಗಳ ಸಾಧನೆಯಲ್ಲಿ ದೇಶ, ವಿದೇಶಗಳ ವಿಜ್ಞಾನಿಗಳು, ಸಂಶೋಧಕರು ಮತ್ತು ರೈತರೊಡಗೂಡಿ ಕೆಲಸ ಮಾಡುವುದೂ ಈ ಸಂಸ್ಥೆಯ ಉದ್ದೇಶ ಎನ್ನಲಾಗಿದೆ. ಈ ಸಮಾರಂಭದಲ್ಲಿ ಡಾ. ವಂದನಾಶಿವ, ಪ್ರೊ. ನಂಜುಂಡಸ್ವಾಮಿ, ಡಾ. ಮಹಮದ್ ಇದ್ರಿಸ್, ಡಾ. ಮಾರ್ಟಿನ್ ಖೋರ್, ಕ್ಲಾಡ್ ಅಲ್ವಾರೀಸ್ ಮಾತನಾಡಿದರು.

ಹಸಿರು-ಸ್ವಾಸ್ಥ ಚಳುವಳಿ (Green-Health Campaign)

ಸ್ಥಳೀಯವಾಗಿ, ಸುಲಭದಲ್ಲಿ ದೊರಕುವ ಗಿಡ, ಸಸ್ಯ, ಬೇರು ಎಲೆಗಳ ವಾತ, ಪಿತ್ತ, ನೋವು, ಅಜೀರ್ಣ ಇತ್ಯಾದಿ ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧಿ ತಯಾರಿಸಿಕೊಳ್ಳುವ, ಆ ಮೂಲಕ ತಮ್ಮ 'ಪ್ರಾಥಮಿಕ ಆರೋಗ್ಯದತ್ತ' ಗಮನರ್ಹಸಿಕೊಳ್ಳುವ ಕ್ರಮ ನಮ್ಮ ಜನರಲ್ಲಿ ನೂರಾರು ವರ್ಷಗಳಿಂದ ಕಂಡು ಬಂದಿರುತ್ತದೆ. ಈ ಪದ್ಧತಿಯನ್ನು ಮತ್ತಷ್ಟು ವ್ಯವಸ್ಥಿತಗೊಳಿಸಲು, ಬೆಂಗಳೂರಿನ "ಸ್ಥಳೀಯ ಆರೋಗ್ಯ ಪರಂಪರೆಯ ಪುನರುತ್ಥಾನದ ಪೀಠ" (Foundation for Revitalisation of Local Health Tradition - FRLHT) ತಾ. 8, ಜೂನ್ 1995ರಂದು, ಮದ್ರಾಸಿನ ಎಂ.ಎಸ್. ಸ್ವಾಮೀನಾಥನ್ ಸಂಶೋಧನಾ ಕೇಂದ್ರದಲ್ಲಿ, 'ಹಸಿರು ಸ್ವಾಸ್ಥ್ಯ ಚಳುವಳಿ' ಮೇಳವನ್ನು ಏರ್ಪಡಿಸಿತ್ತು. ಈ ನಿಟ್ಟಿನಲ್ಲಿ 17 ಮುಖ್ಯ ಸಸ್ಯಗಳನ್ನು ಗುರುತಿಸಿ, ಅವುಗಳನ್ನು ಮನೆಯಲ್ಲೇ ಬೆಳೆಸಿಕೊಳ್ಳುವ ಕ್ರಮದ ಬಗ್ಗೆ ಒಂದು ಕೈಪಿಡಿಯನ್ನು ಇಂಗ್ಲೀಷ್, ಕನ್ನಡ, ತಮಿಳು ಮತ್ತು ಮಲೆಯಾಳಿ ಭಾಷೆಗಳನ್ನು ಬಿಡುಗಡೆ ಮಾಡಲಾಯ್ತು. ಹಾಗೇ, ಈ 17 ಸಸ್ಯಗಳಲ್ಲಿ ವಿವಿಧ ಸಾಮಾನ್ಯ ಕಾಯಿಲೆಗಳಿಗೆ ಔಷಧಿ ತಯಾರಿಸುವ ಸರಳ ಕ್ರಮಗಳ ಬಗ್ಗೆಯೂ ಮತ್ತೊಂದು ಕೈಪಿಡಿ ಬಿಡುಗಡೆ ಮಾಡಲಾಯ್ತು. ಈ 17 ಸಸ್ಯಗಳೆಂದರೆ, ಬೇವು, ಆಡುಸೋಗೆ, ಲೋಳೆಸರ, ಮಜ್ಜಿಗೆ ಬಳ್ಳಿ, ನೀರುಬ್ರಾಹ್ಮಿ, ವಾಯುವಿದಂಗ, ದಾಸವಾಳ, ಕೊಡಸಗೆ, ಗೋರಂಟಿ, ಪಲತೀಗೆ ಬಳ್ಳಿ, ದಾಳಿಂಬೆ, ವಿರಮಡಿಲಿನ ಗೆಡ್ಡೆ, ಇಲಿಕಿವಿಗಿಡ, ಕರಿಬಂಧ, ಭೂಮಿಚಕ್ರಿಗೆಡ್ಡೆ, ತಿಪ್ಪಳಿ ಬಳ್ಳಿ ಮತ್ತು ಅಮೃತ ಬಳ್ಳಿ.

ಈ 17 ಸಸ್ಯಗಳ ಸಸಿಗಳನ್ನು ಬೆಳೆಸಿ ಪೂರೈಕೆ ಮಾಡಲು ಕರ್ನಾಟಕ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳ ಅರಣ್ಯ ಇಲಾಖೆಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಈ ಮೇಳದಲ್ಲಿ FRLHT ನಿರ್ದೇಶಕರಾದ ಡಾ. ದರ್ಶನ್‌ಶಂಕರ್, ಡಾ. ಎಂ.ಎಸ್. ಸ್ವಾಮಿನಾಥನ್, ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ ನಿರ್ದೇಶಕಿ ಡಾ. ಜಿ.ವಿ. ಸತ್ಯವತಿ ಮುಂತಾದವರು ಪಾಲ್ಗೊಂಡಿದ್ದರು.

ದ್ವಿತೀಯ ಪಾರಂಪರಿಕ ವಿಜ್ಞಾನ ಮತ್ತು ಭಾರತೀಯ ತಂತ್ರಜ್ಞಾನಗಳ ಸಮ್ಮೇಳನ (Second Congress on Traditional Sciences and Technologies of India) **ಮದ್ರಾಸ್ : ಅಣ್ಣಾ ವಿಶ್ವವಿದ್ಯಾಲಯ, ಡಿಸೆಂಬರ್ 27 ರಿಂದ 31.**

ಬಾಂಬೆಯ ಪ್ರಥಮ ಸಮ್ಮೇಳನದ ಯಶಸ್ಸಿನ ಹಿನ್ನೆಲೆಯಲ್ಲಿ ಈ ದ್ವಿತೀಯ ಸಮ್ಮೇಳನವನ್ನು ಮದ್ರಾಸಿನಲ್ಲಿ ಏರ್ಪಡಿಸಲಾಗಿದೆ. ಇದರಲ್ಲಿ ದೇಶೀಯ ಮತ್ತು ಪಾರಂಪರಿಕ ತಂತ್ರಜ್ಞಾನವನ್ನು ಕಾಪಾಡಿಕೊಂಡು ಬಂದಿರುವ ಕರಕುಶಲಕರ್ಮಿಗಳು, ವೃತ್ತಿ ನಿರತರು ಮುಂತದವರನ್ನು ದೊಡ್ಡ ಪ್ರಮಾಣದಲ್ಲಿ ಕಲೆಹಾಕಿ, ಾಗವಹಿಸುವಂತೆ ಮಾಡುವುದು ಮತ್ತು ಈ ನಿಟ್ಟಿನಲ್ಲಿ ಸಮುದಾಯದ ಶಿಕ್ಷಣ, ತರಬೇತಿ, ಸ್ಥಳೀಯ ಮಾರುಕಟ್ಟೆ, ಮಹಿಳೆಯರ ಪಾತ್ರಗಳನ್ನು ವಿವರವಾಗಿ ಚರ್ಚಿಸಿ, ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಗೆಗಿನ ನೀತಿ, ನಿಯಮಗಳನ್ನು ರೂಪಿಸಿರುವುದು ಮುಖ್ಯ ಗುರಿಯಾಗಿದೆ ಎಂದು ತಿಳಿಸಲಾಗಿದೆ.. ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ.

The Madras Secretariat Traditional
Science & Technology Congress,
Students' Centre, Anna University,
Madras-600025

ಸಾವಯವ ಬೇಸಾಯ ಮತ್ತು ಸುಸ್ಥಿರ ಕೃಷಿ ರಾಷ್ಟ್ರೀಯ ವಿಚಾರಗೋಷ್ಠಿ, (National Seminar on Organic Farming and Sustainable Agriculture) **ಕೃಷಿ ವಿ.ವಿ., ಬೆಂಗಳೂರು, 9-11, ಅಕ್ಟೋಬರ್, 1996**

ಈಗಾಗಲೇ ಪರೀಕ್ಷಿಸಿ ದೃಢೀಕರಿಸಿರುವ ವಿವಿಧ ಕೃಷಿ ಪರಿಸರ ವಲಯಕ್ಕೆ ಸೂಕ್ತವಾಗಿರುವ ಸಾವಯವ ಕೃಷಿ ಪದ್ಧತಿಗಳನ್ನು ಕ್ರೂಢೀಕರಿಸುವ ಮೂಲಕ ಮುಂದಿನ ಸಂಶೋಧನೆ ಮತ್ತು ವಿಸ್ತರಣೆಗೆ ಅನುವು ಮಾಡುವುದೇ ಈ ವಿಚಾರಗೋಷ್ಠಿಯ ಮೂಲ ಉದ್ದೇಶ ಎನ್ನಲಾಗಿದೆ. ಎರೆಬೇಸಾಯ, ಜೈವಿಕ ಗೊಬ್ಬರ, ಜೈವಿಕ ಕೀಟ ಹತೋಟಿಯಿಂದ, ಸಾವಯವ ಉತ್ಪನ್ನಗಳ ಮಾರಾಟ ಮತ್ತು ರಫ್ತಿನ ಬಗ್ಗೆ, 14 ಮುಖ್ಯ ವಿಚಾರಗಳ ಮೇಲೆ ಈ ವಿಚಾರ ಗೋಷ್ಠಿಯನ್ನು ನಿಯೋಜಿಸಲಾಗಿದೆ. ಆಸಕ್ತರು ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಬಹುದು.

ಡಾ. ಕೆ.ಶಿವಶಂಕರ್, ಕೃ.ವಿ.ವಿ., ಗಾಂಧೀ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು-560065
ಫೋನ್ : 3330153.

ನೆಲಮಟ್ಟದ ಜನರ ಕತೃತ್ವ ಮತ್ತು ಶೋಧಕ ಪ್ರವೃತ್ತಿಯ ಬಗೆಗಿನ ಅಂತರಾಷ್ಟ್ರೀಯ ಸಮ್ಮೇಳನ (International Conference on creativity and Innovation at Grossroots) **ಡಿಸೆಂಬರ್ 1996, ಐ.ಐ.ಎಂ. ಅಹ್ಮದಾಬಾದ್**

ಹನೀ ಬೀ ಪತ್ರಿಕೆಯ ಪ್ರೋ ಅನಿಲ್‌ಗುಪ್ತರವರು ತಮ್ಮ "ಸೃಷ್ಟಿ" (SRISTI) ಸಂಸ್ಥೆಯ ಮೂಲಕ ಸಂಘಟಿಸುತ್ತಿರುವ ಈ ಸಮ್ಮೇಳನದಲ್ಲಿ ರೈತಮೂಲದ ಕೃಷಿತಾಂತ್ರಿಕತೆ ಮತ್ತು ಅನುಶೋಧನೆಗಳು, ದೇಸೀಯ ಸಂಸ್ಥೆಗಳು, ಜೀವ ವಿವಿಧತೆ ಸಂರಕ್ಷಣೆ, ರೈತರ ಹಕ್ಕು ಮತ್ತು ಬೌದ್ಧಿಕ ಸನದ್ದಿನ ಹಕ್ಕು ಹಾಗೂ ಹಸಿರು ಮಾರಾಟ ವ್ಯವಸ್ಥೆ ಇವೇ ಮೊದಲಾದ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳಲಿ. ಆಸಕ್ತರು ಇವರನ್ನು ಸಂಪರ್ಕಿಸ ಬಹುದು.

Prof. Anil K. Gupta,
Indian Institute of Management,
Vastrapura,
Ahamadabad - 380015.

ಹಿತ್ತಲಗಿಡದ ಬಳಗಕ್ಕೆ ಸೇರಿ, ನೀವು ಏನು ಕೊಡುಗೆ ನೀಡಬಹುದು ?

1. **ಕೃಷಿ ವಿದ್ಯಾರ್ಥಿಗಳು ಮತ್ತಿತರ ಗ್ರಾಮಾಂತರ ವಿದ್ಯಾರ್ಥಿಗಳು**
   ರೈತ ಮೂಲದ ಅನುಶೋಧನೆ, ಆವರೇ ಅನುಸರಿಸುತ್ತಿರುವ ವಿಶಿಷ್ಟ ಆದರೆ ಅತ್ಯಂತ ಪರಿಣಾಮಕಾರಿ ದೇಸೀ ಕೃಷಿ ವಿಧಾನ, ರೀತಿ ರಿವಾಜುಗಳನ್ನು ಗುರುತಿಸಿ, ಬರೆದು ಕಳಿಸುವುದು.
2. **ಕೃಷಿ ವಿಜ್ಞಾನಿ ಮತ್ತಿತರ ವಿಜ್ಞಾನಿಗಳು**
   ಹಿತ್ತಲಗಿಡ ದಾಖಲು ಮಾಡುವ ವಿಚಾರಗಳನ್ನು ಗಮನಿಸಿ, ವಿಶ್ಲೇಷಿಸಿ, ವೈಜ್ಞಾನಿಕ ಸಂಶೋಧನೆಗೆ ಒಳಪಡಿಸಿ ಮತ್ತಷ್ಟು ವ್ಯವಸ್ಥಿತಗೊಳಿಸುವುದರ ಮೂಲಕ ಜನಪರಗೊಳಿಸುವುದು.
3. **ರೈತರು**
   ಅ. ತಮ್ಮ ಮತ್ತು ಸುತ್ತಮುತ್ತಲಿನ ಅನ್ವೇಷಣೆ, ನಾಟಿ ಕೃಷಿ ಪದ್ಧತಿ, ತಂತ್ರಜ್ಞಾನ, ಆಚಾರ, ವಿಚಾರಗಳನ್ನು ಹಿತ್ತಲಗಿಡದ ಗಮನಕ್ಕೆ ತರುವುದು
   ಆ. ಹಿತಲಗಿಡದ ವಿಚಾರಗಳನ್ನು ಅಳವಡಿಸಿ, ಪರೀಕ್ಷಿಸಿ, ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳುವುದು.
4. **ಇತರರು**
   ಹಿತ್ತಲಗಿಡ ಮತ್ತು ರೈತ ಸಮುದಾಯದ ನಡುವೆ ಕೊಂಡಿ ಏರ್ಪಡಿಸಲು ಸಹಾಯವಾಗುವುದು.

ಹೀಗೆ ಹಿತ್ತಲಗಿಡದ ಬಳಗಕ್ಕೆ ಸೇರಿ, ಅದರ ವಿವಿಧ ಚಟುವಟಿಕೆಗಳಿಗೆ ಸಹಾಯ ಮಾಡುವ ರೀತಿ.

	ವಾರ್ಷಿಕ
ರೈತರು ಮತ್ತು ವಿದ್ಯಾರ್ಥಿಗಳು	30 ರೂ.
ಇತರರು	50 ರೂ.
ಸಂಸ್ಥೆಗಳು	250 ರೂ.

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ತೆರೆದ ಅಂಚೆ

ಗೆ ______________________

____

____

____

ವಿಳಾಸ
ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕರು
ಸಂಪಾದಕರು ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ ಹೆಬ್ಬಾಳ
ಬೆಂಗಳೂರು - 560024